ವೀರ ಅಭಿಮನ್ಯು

(ಶ್ರೀಶುಕ್ಲಕೃತ)

ಅನುವಾದಕರು :

ಶ್ರೀ ವಾಮನರಾವ ಮಾಸ್ತರ

200166

೧೯೩೭

UNIVERSAL LIBRARY
OU_200166
UNIVERSAL LIBRARY

ವೀರ ಅಭಿಮನ್ಯು

(ಶ್ರೀ. ಶುಕ್ಲಕೃತ ಸಂಗೀತ ನಾಟಕ)

ಅನುವಾದಕರು :

ಶ್ರೀ. ಸವಣೂರ ವಾಮನರಾವ ಶಾಸ್ತ್ರರರು

೧೯೩೭

(ಎಲ್ಲ ಹಕ್ಕುಗಳನ್ನೂ ಕಾದಿರಿಸಲಾಗಿದೆ)

ಬೆಲೆ ೦-೧೨-೦

ಮುದ್ರಕರು :

ವೆಂಕಟೇಶ ಮಾಧವರಾವ ಜೋಶಿ

ಮೋಹನ ಮುದ್ರಣಾಲಯ

ಧಾರವಾಡ

ಕನ್ನಡದಲ್ಲಿ ಈ ನಾಟಕದ ಚಿತ್ರಪಟ ಮತ್ತು ರಂಗಭೂಮಿಯ ಮೇಲೆ ಆಡುವ ಮೊದಲಾದ ಎಲ್ಲ ಬಗೆಯ ಅಧಿಕಾರಗಳನ್ನು ಕಾದಿರಿಸಲಾಗಿದೆ.

ಪ್ರಕಾಶಕರು:

ವೆಂಕಟೇಶ ವಾಮನರಾವ ಸವಣೂರ

ಮೆಣಸಿನಕಾಯಿ ಓಣಿ

ಧಾರವಾಡ

ಮುನ್ನುಡಿ

'ವೀರ ಅಭಿಮನ್ಯು'ವು ಕನ್ನಡ ರಂಗಭೂಮಿಯ ಮೇಲೆ ಬಹಳ ಹೆಸರು ಪಡೆದ ನಾಟಕ. ೧೯೨೫ರಲ್ಲಿ ರಂಗಭೂಮಿಯಲ್ಲಿ ಕಾಲಿಟ್ಟು ಮುಂದೆ ೧೯೩೪ರ ವರೆಗೆ ಎಷ್ಟೋ ನೂರು ಪ್ರಯೋಗಗಳಾಗಿ, ಕರ್ನಾಟಕದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಮೆಚ್ಚುಗೆ ಪಡೆಯಿತು. ಆಗಲೇ ಪುಸ್ತಕರೂಪವಾಗಿ ರಸಿಕರ ಕೈ ಸೇರಬೇಕಾಗಿತ್ತು, ಆದರೆ, ಅದಕ್ಕೆ ಸಮಯ ಈಗ ಬಂದಿತು.

ಮೂಲದಲ್ಲಿ ಈ ನಾಟಕವು ಮರಾಠಿಯದು. ಕನ್ನಡಕ್ಕೆ ತಿ. ರಾ. ವಾಮನರಾವ ಮಾಸ್ತರರು ಪರಿವರ್ತಿಸಿ, ಅವರೇ ತಮ್ಮ 'ವಿಶ್ವಗುಣಾದರ್ಶ ನಾಟಕ ಮಂಡಳಿಯವರಿಂದ ಒಳ್ಳೇ ಯಶಸ್ವಿಯಾಗಿ ಪ್ರಯೋಗಿಸಿದರು.

ರಂಗಭೂಮಿಯಲ್ಲಿ ಕಳೆಕಟ್ಟುವ ನಾಟಕಗಳ ಬಗ್ಗೆ, ನಮ್ಮಲ್ಲಿಯ ಕೆಲವರು ಕೆಟ್ಟದ್ದು ವಿಚಾರಗಳನ್ನು ಕಲ್ಪಿಸಿಕೊಂಡಿದ್ದಾರೆ. ಇದಕ್ಕೆ ಕಾರಣ, ಈ ರೀತಿಯ ನಾಟಕಗಳು ಯಾವ ವಿಶಿಷ್ಟವಾದ ತಂತ್ರಗಳನ್ನು ಅನುಸರಿಸಿರುವವೆಂಬುದು ಗೊತ್ತಾಗದಿರುವದು! ಕೊಂಚ ದೃಷ್ಟಿಕೋನವನ್ನು ಬದಲಾಯಿಸಿ ಈ ರೀತಿಯ ನಾಟಕಗಳನ್ನು ಓದಿದರೆ, ಇಲ್ಲಿಯೂ ಎಷ್ಟೋ ಒಳ್ಳೆಯ ಗುಣಗಳು ಕಂಡು ಬರುವ ಆಶೆಯಿದೆ.

ವಿಶ್ವಗುಣಾದರ್ಶ ನಾಟಕ ಸಂಸ್ಥೆಯವರು ಪ್ರಯೋಗಿಸಿದಾಗ ನೋಡಿ ಆನಂದಪಟ್ಟು ಪ್ರೋತ್ಸಾಹಿಸಿದ ರಸಿಕರು, ಈ ರೀತಿಯ ಪ್ರಕಾಶನ ಕಾರ್ಯಕ್ಕೂ ಬೆಂಬಲ ಕೊಡುವರೆಂದು ಪೂರ್ಣ ನಂಬಿದ್ದೇನೆ. ಬೆಂಬಲ ಸಿಕ್ಕರೆ, ತಂದೆಯವರಿಂದ ಅನುವಾದಿತವಾದ ಎಲ್ಲ ನಾಟಕಗಳನ್ನೂ ಅಚ್ಚು ಮಾಡಿಸಬೇಕೆಂದು ನನ್ನ ಮನೀಷೆಯಿದೆ. ಮುದ್ರಣವು ತೀರ ಅವಸರವಾಗಿ ನಡೆದುದರಿಂದ ಇದರಲ್ಲಿ ಬಹಳ ಮುದ್ರಣ ದೋಷಗಳು ಹಾಗೆ ಉಳಿದಿವೆ.

ಈ ಪುಸ್ತಕ ಪ್ರಕಾಶನ ಕಾರ್ಯದಲ್ಲಿ ನನಗೆ ಸಹಾಯ ಮಾಡಿದವರಿಗೆಲ್ಲ ನನ್ನ ಅಭಿನಂದನೆಗಳು.

ಕನ್ನಡದಲ್ಲಿ ಈ ನಾಟಕದ ಚಿತ್ರಪಟ ಮತ್ತು ರಂಗಭೂಮಿಯ ಮೇಲೆ ತರುವ ಮುಂತಾದ ಎಲ್ಲ ಬಗೆಯ ಅಧಿಕಾರಗಳು ನನಗೇ ಸೇರಿವೆ

ನೆ. ವಾ. ಸವಣೂರ

ವೈ. ವಾ. ಸವಣೂರ ವಾಮನರಾವ ಮಾಸ್ತರ

(ಶ್ರೀಗುರುರಾಜೋವಿಜಯತೆ)—

ವೀರ ಅಭಿಮನ್ಯು

ಮೊದಲನೆಯ ಅಂಕ

ನಾಂದಿ:– ರಾಗ ಹಿಂಡೋಲ, ತಾಳ ಧಮಾರ.

ವಾರಿನಿಧಿಶಯನಾ । ನೀರಜಾಸನ ವಂದಿತಾ । ಪವ
ಮಾನವಿನುತ ॥ಪಲ್ಲ॥ ಮಥಿಸಿ ಕಡಲನು ಅತಿ ವಿಲಾ
ಸದಿ । ದಿತಿಜರಿಗೆ ವರಸುಧೆಯನುಣಿಸಿದ ॥೧॥ ಬಲಿಯ
ಯಜ್ಞದಿ ಬೇಡಿ ದಾನವ । ಛಲದಿ ಬೆಳೆಸಿದೆ ಭಕ್ತಮಹಿ
ಮೆಯ ॥ ೨ ॥ ಪರಮ ಹರುಷದಿ ನಾಟ್ಯ ಕುಸುಮವ ।
ಚರಣಕರ್ಪಿಸಿ ಧನ್ಯನಾಗುವೆ ॥ ೩ ॥

ಒಂದನೆಯ ಪ್ರಸಂಗ

[ಕೌರವನ ಬಿಡಾರ:— ದುಶ್ಶಾಸನ, ಜಯದ್ರಥ, ಶಕುನಿ ಮೊದಲಾದವರು **ಕುಳಿತಿರು**ತ್ತಾರೆ. ನರ್ತನ, ಗಾಯನ ನಡೆದಿದೆ]

ದುರ್ಯೋಧನ:— (ಪ್ರವೇಶಿಸಿ) ಸಾಕುಮಾಡಿ. ಈ ನೃತ್ಯಗಾಯನವನ್ನು ಸಾಕುಮಾಡಿ. ರಣಾಂಗಣದಲ್ಲಿ ಮೇಲಿಂದಮೇಲೆ ನಮ್ಮ ಪಕ್ಷಕ್ಕೆ ಅಪಜಯ! ನಿಮ್ಮ ಸಂತೋಷಕೂಟಕ್ಕಿದು ಸಮಯವೊ?

(ನರ್ತಕಿಯು ನಮಸ್ಕರಿಸಿ ಹೋಗುವಳು)

ಶಕುನಿ:— ದುರ್ಯೋಧನಾ! ನೀನು ನನಗೆ ಕೇವಲ ಅರಸಿಕನಾಗಿ ತೋರುತ್ತೀ. ಎಲವೊ, ನೀನು ಇಂಥ ಸಾರ್ವಭೌಮ ರಾಜನು.

ಈ ಯಃಕಶ್ಚಿತ ಯುದ್ಧದ ವಿಷಯವಾಗಿ ಸುಮ್ಮನೆ ಏತಕ್ಕೆ ಯೋಚಿಸುವೆ? ರಾಜನು ಮುಖ್ಯವಾದ ರಾಜಕಾರಣದಲ್ಲಿ ಮನಸ್ಸು ಹಾಕುವುದಕ್ಕಿಂತಲೂ, ನೃತ್ಯ, ಗಾಯನ ಮೊದಲಾದ ಶೃಂಗಾರ ವಿಲಾಸಗಳಲ್ಲಿ ಕಾಲಕಳೆದರೆ ಅದೇನು ಕೆಟ್ಟದ್ದಲ್ಲ. ಅತ್ತಕಡೆ ಸೈನ್ಯವಿದೆ; ಸೇನಾಪತಿಗಳಿದ್ದಾರೆ. ಯುದ್ಧವನ್ನು ಮಾಡುತ್ತಲಿದ್ದಾರೆ. ಆಯಿತು; ಮತ್ತೇನು?

ದುರ್ಯೋ:— ಮಾವಾ, ಮೇಲಿಂದಮೇಲೆ ನನ್ನನ್ನು ಈ ರೀತಿಯಾಗಿ ರೇಗಿಸುವುದರಿಂದ ನಿಮಗೇನು ಸಂತೋಷವೋ ಕಾಣೆ! ಅತ್ತಕಡೆಗೆ ಶತ್ರುಪಕ್ಷಕ್ಕೆ ವಿಜಯಲಕ್ಷ್ಮಿಯು ಮಾಲೆಯನ್ನು ಹಾಕುತ್ತಿದ್ದಾಳೆ; ನಮ್ಮ ಶೌರ್ಯವೂ, ಉತ್ಸಾಹವೂ ಕುಗ್ಗಿ ದುರ್ದೆಶೆಯೇ ಉಂಟಾಗುತ್ತಿದೆ. ಮತ್ತೆ........

ದುಶ್ಶಾಸನ:— ಅಣ್ಣಾ, ವಿಶ್ರಾಂತಿಕಾಲದಲ್ಲಿ ಕೇವಲ ಮನೋರಂಜನೆಗಾಗಿ ನಾನೇ ಈ ನೃತ್ಯಗಾಯನವನ್ನು........

ದುರ್ಯೋ:— ಸ್ವಾಭಿಮಾನವುಳ್ಳ ವೀರರಿಗೆ ಇಂತಹ ಸಮಯದಲ್ಲಿ ನೃತ್ಯಗಾಯನಗಳ ಸೊಗಸು ಬೇಕಾಗುವುದಿಲ್ಲ. ಸಮರಚಾತುರ್ಯವನ್ನು ತೋರಿಸಿ, ಶತ್ರುಗಳನ್ನು ಬೆರಗುಗೊಳಿಸಿ, ರಣಭೂಮಿಯಲ್ಲಿ ಶತ್ರುಗಳ ರುಂಡಗಳನ್ನು ಚಂಡಾಡುವುದೇ ನೃತ್ಯವು; ವೀರಗರ್ಜನೆಯೇ ಗಾಯನವು.

ಶಕುನಿ:— ದುರ್ಯೋಧನಾ, ನಿಶ್ಚಯವಾಗಿಯೂ ಕೌರವರಾದ ನಿಮಗೆ ಬುದ್ಧಿ ಇಲ್ಲ ನೋಡು. ಯುದ್ಧದಲ್ಲಿ ನಮ್ಮ ಕೌರವಪಕ್ಷಕ್ಕೆ ಅಪಜಯವೇಕಾಗುವುದು? ಇದರ ಕಾರಣವೇನೆಂದು ಯಾರಾದರೂ ಅರಿತಿರುವಿರಾ? ಸುಮ್ಮನೆ ಇತ್ತಂಡ ವಾದವನ್ನು ಮಾಡಿ ಪ್ರಯೋಜನವೇನು?

ಜಯದ್ರಥ:— ಮಾವಾ, ನಮ್ಮ ಅಪಜಯಕ್ಕೆ ಕಾರಣವೇನಿರಬಹುದೆಂದು ನಿಮಗೆನಿಸುವುದು? ಈ ವಿಷಯವಾಗಿ ನಿಮ್ಮ ಅಭಿಪ್ರಾಯವೇನಿದೆ?

ಶಕುನಿ:— ನನ್ನ ಅಭಿಪ್ರಾಯವನ್ನು ತಿಳಿಸಿದರೆ ನೀವದನ್ನು ಮನ್ನಿಸುವುದೇ ಇಲ್ಲ. ಸುಮ್ಮನೆ ಕಂಠಶೋಷಣ ಮಾತ್ರವಾಗುವುದು.

ದುರ್ಯೋ:— ಮಾವಾ, ಇಂದಿನವರೆಗೆ ನಿನ್ನ ವಿಚಾರವನ್ನು ನಾನೆಂದಾದರೂ ತಿರಸ್ಕಾರ ಮಾಡಿರುವೆನೆ? ಹೇಳು, ನಿನ್ನ ವಿಚಾರವನ್ನು. ಈ ಮಹಾಯುದ್ಧದಲ್ಲಿ ನಮಗೆ ಯಶದ ಚಿಹ್ನವೇ ತೋರುವುದಿಲ್ಲ. ಏನು ಮಾಡಬೇಕು?

ಜಯ:— ಪಾಂಡವ ವೀರರ ಪರಾಕ್ರಮವನ್ನು ನೋಡಿದರೆ, ನಿರಾಶೆಯಿಂದ ಅಂತಃಕರಣವು ಕುಗ್ಗಿ ಮನಸ್ಸಿನಲ್ಲಿ ವಿಪರೀತ ಕಲ್ಪನೆಗಗಳು ಬರುವವು; ಮೈಮೇಲೆ ರೋಮಾಂಚನಗಳೇಳುವವು.

ದುಶ್ಯಾ:— ಉತ್ಸಾಹವು ತಗ್ಗುವುದು; ಧೈರ್ಯವು ಕುಗ್ಗುವುದು; ಮನಸ್ಸು ಮುಗ್ಗರಿಸುವುದು!

ಶಕುನಿ:— ಎಂತಹ ಹೇಡಿಗಳೋ ನೀವು. ಇಂತಹ ಸಮಯದಲ್ಲಿ ನಿಮ್ಮ ಉತ್ಸಾಹವು ಉಕ್ಕಬೇಕು; ಧೈರ್ಯವು ಮಿಕ್ಕಬೇಕು. ಕತ್ತರಿಸಿದ ಮರದ ಟೊಂಗೆಗಳು ಒಳ್ಳೇ ಕಸುವಿನಿಂದ ಚಿಗಿತು ಬೆಳೆಯಬೇಕು. ತಿಳಿಯಿತೋ?

ದುಶ್ಯಾ:—ಆದರೆ ನಮ್ಮ ಶೌರ್ಯವೃಕ್ಷಕ್ಕೆ ವೈರಿಗಳ ಪರಾಕ್ರಮದ ಸಿಡಿಲು ಬಡಿದು ಅದು ಬುಡಸಹಿತವಾಗಿ ಉರುಳಿಬಿದ್ದು ನಾಶವಾಗುವ ಸಮಯವೊದಗಿದಮೇಲೆ ನಿರ್ಬಲವಾದ ಧೈರ್ಯದ ಬಾಷ್ಕಳ ಮಾತುಗಳಿಂದ ಪುರುಷಾರ್ಥವೇನು?

ಜಯ:— ಭೀಷ್ಮ ಪಿತಾಮಹರು ಶರಪಂಜರದ ಮೇಲೆ ಮಲಗಿಬಿಟ್ಟರು. ಅದೇ ಕಾಲಕ್ಕೆ ನಮ್ಮ ಪರಾಕ್ರಮದ ಅಹಂಕಾರವು ಕಳಚಿತು; ಶೌರ್ಯದ ತೇಜವು ಅಡಗಿತು.

ದುರ್ಯೋ:— ಆದರೆ ಈಗ ದ್ರೋಣಾಚಾರ್ಯರು ಸೇನಾಪತಿಗಳಾಗಿರುವುದರಿಂದ ಉದಾಸೀನವಾದ ಮನಸ್ಸಿಗೆ ಅದೊಂದು ಧೈರ್ಯವಿದೆ.

ಶಕುನಿ:— ದುರ್ಯೋಧನಾ, ನೀನು ಎಂತಹ ಬೆಪ್ಪನೊ! ಚಾಣಾಕ್ಷ ಮುತ್ಸದ್ದಿತನದ ಧೂರ್ತ ವಿಚಾರಗಳು ನಿನ್ನ ತಲೆಯಲ್ಲಿ ಬರುವುದೇ ಇಲ್ಲ. ಅಂತೆಯೇ ದ್ರೋಣಾಚಾರ್ಯರು ಸೇನಾಪತಿಗಳಾಗಿದ್ದಾರೆ. ಆಚಾರ್ಯರ ಪ್ರತಿಷ್ಠೆಯನ್ನು ನನ್ನಮುಂದೆ ಹೇಳಬೇಡ.

ದುರ್ಯೋ:— ಅಂದರೆ! ಮಾವಾ, ಇದರರ್ಥವೇನು?

ಶಕುನಿ:— ಆಚಾರ್ಯರು ಉಪ್ಪುಂಡದ್ದನ್ನು ಸ್ಮರಿಸಿ ಕ್ರಿಯಾಭ್ರಷ್ಟರಾಗ ದಿದ್ದರೆ ಕೌರವೇಶ್ವರನಿಗೆ ಇಂತಹ ಪರಾಭವದ ಪ್ರಸಂಗವೇಕೆ ಬರುತ್ತಿತ್ತು? ಈ ಇಡೀ ನಾಟಕಕ್ಕೆ ಸೂತ್ರಧಾರರು ಆಚಾರ್ಯರೆ! ಅವರೇ ಈ ನಾಟಕವನ್ನು ಪ್ರಾರಂಭಿಸಿದವರು.

ದುರ್ಯೋ:— ಮಾವಾ, ನೀನಿದನ್ನೇನು ಹೇಳುವೆ!

ಶಕುನಿ:— ನನ್ನ ಅನುಭವಕ್ಕೆ ಬಂದದ್ದನ್ನು ಮತ್ತು ನನ್ನ ಮನಸ್ಸಿಗೆ ಒಪ್ಪಿಗೆಯಾದದ್ದನ್ನೇ ನಾನು ಹೇಳುವೆನು. ಆಚಾರ್ಯರ ಮಾತ ನಾಡುವ ರೀತಿಯೂ ಅವರ ಉದಾಸೀನತೆಯು ಶೌರ್ಯವೂ ನಿಮಗೆ ಕಾಣಿಸುವುದಿಲ್ಲವೇ? ತನುವು ಕೌರವರ ಕಡೆಗೆ; ಮನವು ಪಾಂಡವರ ಕಡೆಗೆ.

ದುರ್ಯೋ:— ಏನು! ಆಚಾರ್ಯರು ನಮ್ಮ ಕೂಡ ಹೀಗೆ ಕಪಟತನದಿಂದ ವರ್ತಿಸುವರೆ?

ಶಕುನಿ:— ಸ್ವಲ್ಪ ಧೂರ್ತತನದಿಂದ ವಿಚಾರಿಸಿ ನೋಡು. ಎಂದರೆ ಅವರ ಮೋಸದ ಸ್ವಭಾವವು ನಿಮಗೆ ಚೆನ್ನಾಗಿ ಗೊತ್ತಾಗುವುದು. ಎಲೊ! ಗುರು ದ್ರೋಣಾಚಾರ್ಯರು ಬೆಪ್ಪರಲ್ಲ; ಒಳ್ಳೇ ಪಕ್ಕಾ ಗುರುಗಳು.

ಜಯು:— ಬಹಿರಂಗದಲ್ಲಿ ಅವರು ಕೌರವರ ಸೇನಾನಾಯಕರು; ಅಂತರಂಗ ದಲ್ಲಿ ಪಾಂಡವರ ಹಿತಚಿಂತಕರು.

ದುರ್ಯೋ:— ಛೆ! ಇದನ್ನು ಕೇಳಿ ನನ್ನ ಬುದ್ಧಿಯು ವಿಭ್ರಮವಾಯಿತು. ಬ್ರಾಹ್ಮಣರು ನೀಚರು, ಕಪಟಿಗಳು. ನಾನು ಈಗಲೆ ಹೋಗಿ ಆಚಾರ್ಯರನ್ನು ಕಂಡು ಈ ವಿಷಯವಾಗಿ ಸರಿಯಾದ ಉತ್ತರವನ್ನು ಕೇಳುವೆನು.

ಶಕುನಿ:— ಹಾ! ಹೀಗೆ ದುಡುಕಬೇಡ. ಆಚಾರ್ಯರು ಬರಲಿ.

ದುರ್ಯೋ:— ಬರಲಿ—ಏತಕ್ಕೆ ಬರಬೇಕು? ಇತ್ತಕಡೆಗೆ ಹೆಜ್ಜೆಹೆಜ್ಜೆಗೆ ಕೌರವರ ಶೌರ್ಯದ ಅಧಃಪಾತವು; ಅತ್ತಕಡೆಗೆ ಆಚಾರ್ಯರ ಹೃದಯದಲ್ಲಿ ಪಾಂಡವರ ಪಕ್ಷಪಾತವೇ!

ದ್ರೋಣಾಚಾರ್ಯ:— (ಪ್ರವೇಶಿಸಿ) ಪಕ್ಷಪಾತವೆ! ಈ ದ್ರೋಣಾಚಾರ್ಯನ ಹೃದಯದಲ್ಲಿ ಪಾಂಡವರ ಪಕ್ಷಪಾತವೇ? ದುರ್ಯೋಧನಾ, ನಿನ್ನ ಮೂರ್ಖತನವು ಮಿತಿಮೀರಿ ಕ್ರಮತಪ್ಪಿತು.

ರಾಗ ದುರ್ಗಾ, ತಾಳ ತ್ರಿವಟ.

ಸ್ವಾರ್ಥಿಯೆ। ಬಿಡು ನೀ। ಕಪಟವಾ ಸಾರ್ವಭೌಮಾ ॥ಪ॥
ಅರಿಯೆ ಪಕ್ಷಪಾತಾ ಭಾವವಾ। ದುರುಳ ಮತಿಯೇ
ರಾಜಾ। ವಿವೇಕ ವಿಚಾರ ವಿರೋಧಿ ಮದಾಂಧ
ನೀನೇ ॥ ೧ ॥

ದುರ್ಯೋಧನಾ, ಕೇಳು, ನಾನು ಕೌರವರ ಪಕ್ಷಪಾತಿಯೂ ಅಲ್ಲ; ಪಾಂಡವರ ಪಕ್ಷಪಾತಿಯೂ ಅಲ್ಲ. ಈ ದ್ರೋಣನು ಧರ್ಮ, ನ್ಯಾಯ, ಸತ್ಯ ಇವುಗಳ ಪಕ್ಷಪಾತಿಯಾಗಿರುವನು—ತಿಳಿಯಿತೇ!

ದುರ್ಯೋ:— ಈ ಧರ್ಮದ ವೇದಾಂತವನ್ನು ಬಡಬಡಿಸುವ ಆಚಾರ್ಯರ ಮನಸ್ಸಿನಲ್ಲಿ ಕೃತಜ್ಞತಾಬುದ್ಧಿಯು ಸಂಪೂರ್ಣವಾಗಿ ನಷ್ಟವಾದಂತೆ ತೋರುವುದು.

ದ್ರೋಣ:— ಈ ದ್ರೋಣನು ಕೇವಲ ಕೃತಜ್ಞತೆಯನ್ನು ನೆನೆದೇ ನಿಮ್ಮಂತಹ ನೀಚರ ಸೇವೆಯನ್ನು ಮಾಡುತ್ತಿರುವನು. ದುರ್ಯೋಧನಾ, ನಿನ್ನ ಅನ್ನದಿಂದ ಈ ಪಿಂಡವು ಪೋಷಿತವಾದದ್ದರಿಂದಲೇ ಒಳ್ಳೆ ನಿಯತ್ತಿನಿಂದ ನಿನ್ನ ಸೇನಾಪತಿಯಾಗಿ ಪಾಂಡವರ ಕೂಡ ಹೋರಾಡುತ್ತಿರುವೆನು. ಇಲ್ಲವಾದರೆ........

ದುರ್ಯೋ:— ಇಲ್ಲವಾದರೆ ಏನು? ಅಪ್ರಮಾಣಿಕರಾಗಿ ಉಂಡಮನೆಗೆರಡು ಬಗೆಯುತ್ತಿದ್ದಿರಿ, ಅಷ್ಟೇ ಅಲ್ಲವೆ?

ದ್ರೋಣ:— ಯಾರು ಅಪ್ರಾಮಾಣಿಕರು? ನಾನೆ! ಅಲ್ಲ, ನೀವು ಅಪ್ರಾಮಾಣಿಕರು. ಪರೋಪಕಾರಿಗಳಾದ ಪಾಂಡವರ ಕೂಡ ದ್ವೇಷಭಾವದಿಂದ ವರ್ತಿಸುವ ಕೌರವರೇ ಅಪ್ರಾಮಾಣಿಕರು.

ಶಕುನಿ:— (ಸ್ವಗತ) ಚೆನ್ನಾಗಿ ಉರಿಹತ್ತಿತು.

ದ್ರೋಣ:— ಈ ದ್ರೋಣನು ಮನಸ್ಸುಮಾಡಿದ್ದರೆ ಈ ಕೌರವರ ಅಸ್ಥಿರವಾದ ಅಧರ್ಮಸಿಂಹಾಸನವು ಯಾವಾಗಲೋ ಮಣ್ಣುಪಾಲಾಗು

ತ್ತಿತ್ತು. ಅಧರ್ಮ, ಅತ್ಯಾಚಾರ, ಕಪಟಕಾರಸ್ಥಾನಗಳ ಪಾಪಮಯ ಪರಾಕ್ರಮದ ಅಸ್ತಿವಾರದ ಮೇಲೆ ನಿಂತಿರುವಂತಹ, ಪಾಂಡವರ ಜನ್ಮಸಿದ್ಧ ಅಧಿಕಾರವಿರುವಂತಹ ಈ ಸಾಮ್ರಾಟ ಸಿಂಹಾಸನವು....

ದುರ್ಯೋ:— ಏನು, ಏನು, ಪಾಂಡವರ ಜನ್ಮಸಿದ್ಧವಾದ ಅಧಿಕಾರದ ಸಿಂಹಾಸನವೇ! ಆಚಾರ್ಯರೆ, ಅದರ ನಿರ್ಣಯವು ಈ ಮಹಾಯುದ್ಧ ದಿಂದಲೇ ಆಗುವುದು. ಆದರೆ—ಅಂತಃಕರಣವನ್ನು ದಹಿಸುವಂತಹ ಈ ವಿಷವನ್ನು ವಾಂತಿಮಾಡಿಕೊಂಡು ನೀವು ಮಾತ್ರ ನಿಮ್ಮ ಪಕ್ಷ ಪಾತಬುದ್ಧಿಯನ್ನು ಪ್ರಕಾಶಪಡಿಸಿದಿರಿ.

ದ್ರೋಣ:— ಈ ದ್ರೋಣನು ದೇಹದಿಂದ ನಿಮ್ಮ ಅಧೀನನಾಗಿದ್ದರೂ ಮನಸ್ಸಿನಿಂದ ಸ್ವತಂತ್ರನಾಗಿರುವನು.

ಜಯ:— ಇದು ಸಾರ್ವಭೌಮತ್ವದ ಅವಮಾನವು!

ಶಕುನಿ:— ಇದು ಪ್ರತ್ಯಕ್ಷ ರಾಜದ್ರೋಹವು!

ದುರ್ಯೋ:— ರಾಜದ್ರೋಹವು ಭಯಂಕರ ಪಾಪವು.

ದ್ರೋಣ:— ಆದರೆ, ನಿನ್ನ ಸ್ವಜನದ್ರೋಹದಂತೆ, ಬಂಧುದ್ರೋಹದಂತೆ ಇದು ಪಾಪವಲ್ಲವಲ್ಲ!

ದುಶ್ಯಾ:— (ಸ್ವಗತ) ಆಚಾರ್ಯರು ಮಾತಾಡುತ್ತಾಡುತ್ತ ಕಾಳಜವನ್ನೇ ಕತ್ತರಿಸಿದರು.

ದ್ರೋಣ:— ದುರ್ಯೋಧನಾ, ಈ ನಿನ್ನ ಸಾರ್ವಭೌಮತ್ವದ ಡೌಲನ್ನು ಸಾಕುಮಾಡು. ರಾಜದ್ರೋಹವಂತೆ, ರಾಜದ್ರೋಹ! ಸತ್ಯದ ಪಕ್ಷವನ್ನು ವಹಿಸಿ ಮಾತನಾಡಿದರೆ ರಾಜದ್ರೋಹವೆನಿಸುವುದೆ? ಒಬ್ಬನ ಜನ್ಮಸಿದ್ಧವಾದ ಹಕ್ಕಿರುವುದೆಂದು ಹೇಳುವುದು ರಾಜದ್ರೋಹವೇ? ನಿನ್ನ ಬಲಾತ್ಕಾರದ ರಾಜ್ಯದಾಹಳಿತದಲ್ಲಿ, ನ್ಯಾಯಧರ್ಮದ ಪಕ್ಷಪಾತವು ರಾಜದ್ರೋಹವೇ ಎನಿಸುವುದು.

ಜಯ:— ರಾಜದ್ರೋಹವಲ್ಲದಿದ್ದರೆ ಇದಕ್ಕೇನು ರಾಜನಿಷ್ಠೆಯೆನ್ನಬೇಕೆ? ರಾಜನ ವೈರಿಯು ಪ್ರಜರಿಗೂ ವೈರಿಯೆ! ಕೌರವರಿಗೆ ಶತ್ರುಗಳಾದ ವರು ಆಚಾರ್ಯರಿಗೂ ಶತ್ರುಗಳೇ ಆಗಬೇಕು. ಆದರೆ ಈ ಆಚಾರ್ಯರೊ, ನಮ್ಮ ದ್ವೇಷಿಗಳಿಗೆ ಕೇವಲ ಹಿತಚಿಂತಕರು!

ದ್ರೋಣ:-- ದ್ರೋಹಿಗಳಾರು ಪಾಂಡವರು ? ಪಾಂಡವರು ಕೌರವರ ದ್ರೋಹಿಗಳಿರಬಹುದು-ಈ ದ್ರೋಣಾಚಾರ್ಯರಿಗೆ ಖಂಡಿತವಾಗಿಯೂ ಅಲ್ಲ.

ದುಯೋ:-- ಏಕೆ ?

ದ್ರೋಣ:-- ಏಕೆಂದರೆ, ಈ ದ್ರೋಣಾಚಾರ್ಯರು ಕೌರವ ಪಾಂಡವರಿಬ್ಬರಿಗೂ ಗುರುಗಳಿದ್ದಾರೆ; ಆದುದರಿಂದ ಉಭಯತರಿಗೂ ಸಮಾನ ಹಿತಚಿಂತಕರು.

ದುಶ್ಶಾ:-- ಇದೇ-ಇದೇ ಆ ಪಕ್ಷಪಾತವು !

ಜಯ:-- ಇದೇ-ಇದೇ ಆ ರಾಜದ್ರೋಹವು !

ದುಯೋ:-- ಇಂತಹ ರಾಜದ್ರೋಹಿಗಳಿಂದ ಶತ್ರುಗಳ ಪಾರುಪತ್ಯವು ಹೇಗಾಗುವುದು ? ಕರ್ತವ್ಯವನ್ನು ದುರ್ಲಕ್ಷಿಸುವವನು ಎಂಥವನೆಂತಹ ಸೇನಾಪತಿಯು !

ದ್ರೋಣ:-- ರಾಜಾ, ವಿವೇಕದ ಸೀಮೆಯನ್ನು ಅತಿಕ್ರಮಿಸಿದೆ. ನನ್ನ ಮರ್ಯಾದೆಯನ್ನು ಭಂಗಪಡಿಸಿದೆ। ನನ್ನ ಕರ್ತವ್ಯದಕ್ಷತೆಯಲ್ಲಿ ನ್ಯೂನತೆಯಾದದ್ದು ನಿನಗೆ ಯಾವಾಗ ಕಂಡುಬಂತು ?

ಜಯ:-- ನಿನ್ನೆ ತಾವು ಅರ್ಜುನನೊಂದಿಗೆ ಬಾಣಯುದ್ಧವನ್ನು ಮಾಡುತ್ತಿದ್ದಿರಲ್ಲ, ಆವಾಗ. ಅದೇನು ಯುದ್ಧವೋ ಕಣ್ಣುಮುಚ್ಚಾಲೆಯ ಆಟವೋ ?

ದುಶ್ಶಾ:-- ಆಚಾರ್ಯರ ಕೈಯಿಂದ ಬಾಣಗಳ ಮಳೆ ಸುರಿಯುತ್ತಿದ್ದಿಲ್ಲ; ಮುಖದಿಂದ ಅರ್ಜುನನ ಪರಾಕ್ರಮವನ್ನು ಹೊಗಳುತ್ತಿದ್ದರು !

ದ್ರೋಣ:-- ಇದರಲ್ಲಿ ಆಶ್ಚರ್ಯವೇನು ? ಶಿಷ್ಯನ ಯುದ್ಧಚಾಪಲ್ಯವನ್ನು ನೋಡಿ ಗುರುವಿಗೆ ಸಂತೋಷಪಡಿಸುವುದು ಸ್ವಾಭಾವಿಕವೆ. ಧನುರ್ಧಾರಿ ಪಾರ್ಥನ ಪರಾಕ್ರಮದ ಪ್ರಶಂಸೆಯನ್ನು, ಅವನ ಹಿತಚಿಂತಕರಷ್ಟೇ ಏಕೆ ಅವನ ಕಡುಹಗೆಗಳೂ ಮಾಡುವರು.

ದುಯೋ:— ನನ್ನ ಪ್ರತ್ಯಕ್ಷವಾಗಿ ಆ ಪಾರ್ಥನ ಪ್ರಶಂಸೆಯು ! ಆ ಮರ್ಕಟನ ಪ್ರತಿಷ್ಠೆಯು ! ಆಚಾರ್ಯರೇ, ನೀವು ಕೌರವರ ಸೇನಾಪತಿಗಳೋ ಅಥವಾ ಪಾಂಡವರ ಪರಾಕ್ರಮವನ್ನು ಹೊಗಳುವ ಭಟ್ಟಂಗಿಗಳೊ ? ನಿಮಗೆ ನಿಮ್ಮ ಕರ್ತವ್ಯದ ಅರಿವಿಲ್ಲದಿದ್ದರೂ ಈ ಸಮ್ರಾಟ ದುರ್ಯೋ

ಧನನ ಸಾರ್ವಭೌಮತ್ವದ ಅಭಿಮಾನವು ಇರಲೇಬೇಕು. ಇದು ಪಕ್ಷಪಾತವು; ವಿಶ್ವಾಸಘಾತವು !

ದ್ರೋಣ:— ಬಾಯಿ ಮುಚ್ಚು, ಮದಾಂಧಾ ಬಾಯಿ ಮುಚ್ಚು. ಈ ದ್ರೋಣಾಚಾರ್ಯನ ಪರಿಶುದ್ಧವಾದ ಮನಸ್ಸು ನಿನಗೂ ಈ ಕ್ಷುದ್ರವಾದ ನಿನ್ನ ರಾಜಸತ್ತೆಗೂ ಸ್ವಲ್ಪಾದರೂ ಭಯಪಡುವುದಿಲ್ಲ.

ದುರ್ಯೋ:— ಇದು ರಾಜಾಜ್ಞೆಯ ಉಲ್ಲಂಘನವು; ಸೇನಾಪತಿಯ ಅಧಿಕಾರದ ಅತಿಕ್ರಮಣವು.

ದ್ರೋಣ:— ಅಪಮಾನದಿಂದ ದೂಷಿತವಾದ ಈ ಸೇನಾಪತಿಯ ಅಧಿಕಾರದ ದೊಡ್ಡಸ್ತಿಕೆಯು ನನಗೆ ಬೇಡ. ಇಗೋ ಈಗಲೆ ಈ ವಿಷಪಾಶವನ್ನು ಹರಿದು ಬಿಸಾಡುವೆನು. ಈ ದ್ರೋಣನು ಇಂತಹ ಅಧಿಕಾರಕ್ಕೆ ಆಶಿಪಡತಕ್ಕವನಲ್ಲ. ಧರ್ಮಾಧರ್ಮದ ವಿಚಾರವಿಲ್ಲದವನೂ ನ್ಯಾಯನೀತಿಯನ್ನು ಬಿಟ್ಟವನೂ ಅವನೆಂತಹ ರಾಜನು ? ಅವನಿಗೆ ರಾಜನೆನ್ನುವದಕ್ಕಿಂತ ಪಶುವೆನ್ನುವುದೇ ಯೋಗ್ಯವು !

ದುರ್ಯೋ:— (ತಡೆದು) ಗುರುದೇವಾ, ಶಾಂತರಾಗಿರಿ, ಶಾಂತರಾಗಿರಿ. ಮಾವಾ, ಕೆಲಸವು ಕೆಟ್ಟುಹೋಯಿತು. ಇನ್ನುಮುಂದೆ ಹೇಗೆ?

ಶಕುನಿ:— ಬ್ರಾಹ್ಮಣನು ತಪ್ತನಾದನು. ಉಪಾಯದಿಂದ ಸಮಿಮಾತಾಡಿ, ಗಲೀಟು ಮಾಡು. ಹಂಚು ಕಾದು ಹೋಗಿದೆ, ಹೋಳಿಗೆಯನ್ನು ಬೇಯಿಸಿಕೋ. (ಕಿವಿಯಲ್ಲಿ ಪಿಸುಗುಟ್ಟುವನು)

ಜಯ:— ಅಜ್ಞಾನಿಗಳಾದ ಶಿಷ್ಯರ ಅಪರಾಧಗಳನ್ನು ಆಚಾರ್ಯರು ಕ್ಷಮಿಸಬೇಕು. ನಿರರ್ಥಕವಾದ ಸಂಶಯಪಾಶವು ಸುತ್ತಿಕೊಂಡದ್ದರಿಂದ ನಮ್ಮಿಂದ ಇಂತಹ ಅವಿಚಾರವು ಜರುಗಿತು.

ದುರ್ಯೋ:— (ಕಾಲುಹಿಡಿದು) ಗುರುವರ್ಯಾ,

ದ್ರೋಣ:— ಭಲೆ, ಚೆನ್ನಾಗಿದೆ ನಿನ್ನ ರಾಜನೀತಿಯ ಶಿಷ್ಟಾಚಾರವು ! ಮೊದಲು ಅವಮಾನ ಮಾಡೋಣ; ಆ ಮೇಲೆ, ಅದನ್ನು ಕ್ಷಮಿಸುವುದಕ್ಕಾಗಿ ಪಾದಗಳನ್ನು ಹಿಡಿಯೋಣ. ಈ ವಿದ್ಯೆಯು ನಿನ್ನಂತಹ ಕಪಟಿಯಾದ ರಾಜ್ಯಕರ್ತೃವಿಗೆ ಚೆನ್ನಾಗಿ ಸಾಧಿಸುವುದು ! ನಡೆ, ಬಿಡು ನನ್ನ ಪಾದಗಳನ್ನು. ಅಪಶಬ್ದಗಳಿಂದ ಸಂಭಾವನೆ; ನಮಿಮಾತು

ಗಳಿಂದ ಬಂಧನೆ! ಆ ಮೇಲೆ; ಗುರುಮಹಾರಾಜರೆಂದು ಗೌರವಿಸುತ್ತ ಬಣ್ಣದ ಪ್ರಾರ್ಥನೆ.

ದುರ್ಯೋ:— ಆಚಾರ್ಯರು ಕೋಪವನ್ನು ನುಂಗಿಕೊಂಡು ಉದಾರ ಬುದ್ಧಿಯಿಂದ ನನ್ನನ್ನು ಕ್ಷಮಿಸಬೇಕು. ಅರ್ಜುನನ ಮೇಲಿದ್ದ ಶಿಷ್ಯಸಂಬಂಧವಾದ ವಾತ್ಸಲ್ಯವನ್ನು ಬದಿಗಿಟ್ಟು ರಣಾಂಗಣದಲ್ಲಿ ಪಾಂಡವರನ್ನು ಕಡುವೈರಿಗಳೆಂದು ತಿಳಿಯಬೇಕು.

ದ್ರೋಣ:— ನಾನು ರಣಾಂಗಣದಲ್ಲಿ ಪಾಂಡವರನ್ನು ಬದ್ಧವೈರಿಗಳಂತೆಯೇ ತಿಳಿಯುತ್ತ ಬಂದಿರುವೆನು. ಈ ವಿಷಯವಾಗಿ ನಿನ್ನ ಸಂಶಯ ಪರಿಹಾರಕ್ಕೆ ನಾನು ಯಾವ ಪ್ರಮಾಣವನ್ನು ಮಾಡಲಿ ಹೇಳು?

ಶಕುನಿ:— (ಕಿವಿಯಲ್ಲಿ) ಹೂ, ದುರ್ಯೋಧನಾ ನಿಷ್ಪಾಂಡವ ಪೃಥ್ವಿಯನ್ನು ಮಾಡುವ ವಿಷಯವಾಗಿ ವಚನವನ್ನು ತೆಗೆದುಕೊ. ಇದೇ ಸಮಯ.

ದುರ್ಯೋ:— ಈ ವಿಷಯವಾಗಿ ಆಚಾರ್ಯರು ವಚನವನ್ನು ಕೊಡಬೇಕು.

ದ್ರೋಣ:— ವಚನವೇ ಎಂತಹ ವಚನ? ಪ್ರಾಮಾಣಿಕ ಮನುಷ್ಯನ ಮಾತಿನಲ್ಲಿ ನಂಬುಗೆಯನ್ನಿಡುವಷ್ಟು ಅರಸುಗಳ ಬುದ್ಧಿಯು ಸರಲವಾಗಿರುವುದೊ?

ದುರ್ಯೋ:— ಆಚಾರ್ಯರ ವಚನದಲ್ಲಿ ವಿಶ್ವಾಸವಿದೆ; ಆದರೆ........

ಜಯ:— ಮತ್ತೂ ಆಚಾರ್ಯರ ಪರಾಕ್ರಮದ ವಿಷಯವಾಗಿಯೂ ವಿಶ್ವಾಸವಿದೆ; ಆದರೆ........

ಶಕುನಿ:— (ಒಂದು ಮಗ್ಗುಲಾಗಿ) ದುರ್ಯೋಧನಾ, ಹೇಳಿಕೇಳಿ ಬ್ರಾಹ್ಮಣ. ಬ್ರಾಹ್ಮಣನ ಮಾತುಗಳನ್ನು ನಂಬಬೇಡ. ಏನಾದರೂ ಪ್ರತಿಜ್ಞೆಯನ್ನು ಮಾಡುವುದಕ್ಕೆ ಹೇಳು. (ಕಿವಿಯಲ್ಲಿ ಮಾತನಾಡುವುದು)

ದ್ರೋಣ:— ಏನದು ಕಿವಿಮಾತುಗಳು?

ಶಕುನಿ:— ಛೇ, ಛೇ, ಏನೂ ಇಲ್ಲ—ಆದರೆ—

ದ್ರೋಣ:— ಆದರೆ, ಆದರೆ ಏನು? ನಿಮಗೆ ನನ್ನಿಂದ ಏನಾದರೂ ಪ್ರತಿಜ್ಞೆ ಬೇಕಲ್ಲವೆ? ಈ ದಿವಸ ಪಾಂಡವರ ಪರಾಜಯವಾಗಿ, ಅವರ ಕಡೆಯ

ಮಹಾವೀರರನ್ನು ಧಾರಾತೀರ್ಥದಲ್ಲಿ ಮೀಳಿಸುವಂತೆ ಪ್ರತಿಜ್ಞೆ ಬೇಕೆ? ಕೇಳಿ ಹಾಗಾದರೆ. ಪಂಚಮಹಾಭೂತಗಳ ಸಾಕ್ಷಿಯಾಗಿ ನಾನು ಪ್ರತಿಜ್ಞೆ ಮಾಡುವುದೇನೆಂದರೆ—ಈ ದಿವಸ ಈ ದ್ರೋಣನು ಅಭೇದ್ಯ ಚಕ್ರವ್ಯೂಹವನ್ನು ರಚಿಸಿ ಧರ್ಮರಾಜನನ್ನು ಜೀವಸಂತವಾಗಿ ಬಂಧಿಸಿ ನಿಮ್ಮ ಸ್ವಾಧೀನಪಡಿಸುವನು! ಮತ್ತು ಆ ಚಕ್ರವ್ಯೂಹವು ಪಾಂಡವ ವೀರರಲ್ಲಿ ಯಾರನ್ನಾದರೂ ಬಲಿದಾನ ತಕ್ಕೊಳ್ಳುವುದು! ಮತ್ತು ಒಂದು ಕೋಟಿ ಪಾಂಡವರ ಸೈನ್ಯವನ್ನು ಮಣ್ಣುಮುಕ್ಕಿಸುವುದು!

ಎಲ್ಲರೂ:— (ಆನಂದದಿಂದ) ಏನು ಚಕ್ರವ್ಯೂಹ! ಅಭೇದ್ಯ ಚಕ್ರವ್ಯೂಹವೇ!

ದ್ರೋಣ:— ಹೌದು. ಆ ಚಕ್ರವ್ಯೂಹವನ್ನು ಭೇದಿಸಲು ತ್ರಿಭುವನದಲ್ಲಿ ಒಬ್ಬನೇ ಒಬ್ಬ ಪರಾಕ್ರಮಶಾಲಿಯಾದ ವೀರಶಿರೋಮಣಿಯು ಸಮರ್ಥನಾಗಿರುವನು.

ಎಲ್ಲರೂ:— ಯಾರು? ಅವನು ಯಾರು?

ದ್ರೋಣ:— ವೀರಶ್ರೇಷ್ಠ ಪಾರ್ಥನು! ಆದರೆ ಶ್ರೀಕೃಷ್ಣನ ಜೊತೆಯಲ್ಲಿ ಅರ್ಜುನನನ್ನು ಸಂಶಪ್ತಕರೊಡನೆ ಯುದ್ಧಮಾಡುವುದಕ್ಕೆ ತೊಡಗಿಸಿದ ಮೇಲೆ ಅವನಿಗೆ ಚಕ್ರವ್ಯೂಹದ ಕಡೆಗೆ ತಿರುಗಿ ನೋಡುವುದಕ್ಕೆ ಸಹ ಅವಕಾಶವು ದೊರೆಯುವುದಿಲ್ಲ.

ಶಕುನಿ:— ಆಹಹಾ ಎಂತಹ ಮುತ್ಸದ್ದಿತನವಿದು!

ದುರ್ಯೋ:— ಎಂತಹ ಯುದ್ಧಕೌಶಲ್ಯವಿದು!

ಜಯ:— ಎಂತಹ ಘನಘೋರ ಪ್ರತಿಜ್ಞೆಯಿದು!

ದುಶ್ಯಾ:— (ಒತ್ತಟ್ಟಿಗೆ) ಮಾವಾ, ಈ ಬ್ರಾಹ್ಮಣನನ್ನು ಚೆನ್ನಾಗಿ ರೇಗಿಸಿದ್ದರಿಂದಲೇ ಈ ಪ್ರತಿಜ್ಞೆಯು ಹದರಿನಲ್ಲಿ ಬಿತ್ತು.

ಶಕುನಿ:— ಎಲವೋ ನಗಾರಿಯನ್ನು ಕಾಸಿದಷ್ಟೂ ಗರ್ಜನೆಯು ಗಂಭೀರವಾಗಿ ಹೊರಡುವುದಲ್ಲವೆ?

ಜಯ:— ಆನಂದವು, ಅತ್ಯಾನಂದವು! ಈ ದಿವಸ ಚಕ್ರವ್ಯೂಹದಲ್ಲಿ........

ದ್ರೋಣ:— ಜಯದ್ರಥಾ, ನೀನು ಇಷ್ಟರಲ್ಲಿಯೇ ಆನಂದಮಗ್ನನಾಗಬೇಡ. ಚಕ್ರವ್ಯೂಹವನ್ನು ರಚಿಸಿದರೂ ಯಾವ ಪ್ರಕಾರದಿಂದಲೂ

ಧರ್ಮಯುದ್ಧಕ್ಕೆ ಬಾಧೆ ತರುವಂಥ ಅಧರ್ಮವನ್ನು ನಾನು ಯಾರಿಂದಲೂ ಮಾಡಗೊಡತಕ್ಕವನಲ್ಲ. ನಡೆಯಿರಿ, ಚಕ್ರವ್ಯೂಹದ ಸಿದ್ಧತೆಯನ್ನು ಒಳ್ಳೇ ಜಾಗ್ರತೆಯಾಗಿ ಮಾಡೋಣ.

ಜಯ:— ಈ ಕಾಲಕ್ಕೆ ಈ ಜಯದ್ರಥನಿಗೆ ಯಾಕೆ ಆನಂದವೆನಿಸಲಾರದು? ಈ ದಿವಸ ಜಯದ್ರಥನ ಅಪಮಾನದ ಯಜ್ಞದಲ್ಲಿ ಪಾಂಡವವೀರರ ರುಂಡಗಳನ್ನು ಚಂಡಾಡಿ ಪೂರ್ಣಾಹುತಿ ಕೊಟ್ಟು ಶಾಂತಗೊಳಿಸುವೆನು.

ಶಕುನಿ:— ನಡೆಯಿರಿ, ಶುಭಸ್ಯ ಶೀಘ್ರಂ.

ರಾಗ ದೇಸಕಾರ, ತಾಳ ತ್ರಿವಟ.

ರಣರಂಗದೇ ವೀರರಾಗಿ। ಭಯವ ಪಡದೆ ಅರಿಯ
ಹೃದಯ। ಭೇದಿಸುತೆ। ಚತುರತನದೇ ॥ ಪಲ್ಲ ॥
ಧರೆಯ ಚಕಿತಗೊಳಿಸಿ। ನರನಾಗಿ ಮುರವೈರಿಯ ಮನ
ವನು। ಮರುಳುಗೊಳಿಸಿ ಮೆರೆಯಿರಿ ಕೌರವರೇ ॥ ೧ ॥

ದುರ್ಯೋ:— ಆಚಾರ್ಯರ ಅನುಗ್ರಹವು ನಮ್ಮ ಮೇಲೆ ಹೀಗೆಯೇ ಸಂತತವಾಗಿರಬೇಕೆಂದು ಪ್ರಾರ್ಥಿಸುವೆನು. (ಕಾಲುಹಿಡಿಯುವನು)

—(ತೆರೆ ಬೀಳುವುದು)

ಎರಡನೆಯ ಪ್ರಸಂಗ

(ಪಾಂಡವರ ಬಿಡಾರದ ಸುತ್ತುಮುತ್ತಲಿನ ಪ್ರದೇಶ. ಮೇಘನಾದನು ಭಯಗ್ರಸ್ತನಾಗಿ ಪ್ರವೇಶಮಾಡುವನು)

ಮೇಘನಾದ:— ಧಿಕ್ಕಾರ ಧಿಕ್ಕಾರವಿರಲಿ ಈ ಸ್ತ್ರೀಯರಿಗೆ! ಪರಮೇಶ್ವರಾ, ಈ ಮೇಘನಾದನನ್ನು ದುಷ್ಟಸ್ತ್ರೀಯರ ಜಾಲದಿಂದ ನೀನೇ ರಕ್ಷಿಸು! (ನೋಡಿ) ಅಯ್ಯೋ ವಿಧಿಯೆ, ಈ ಸಂಕ್ರಮಣವು ನನ್ನ ಮೇಲೆ ಬರುವಂತೆಯೆ ತೋರುವುದು. ಚಕ್ರವ್ಯೂಹದ ಸಮಾಚಾರವನ್ನು ನಮ್ಮ ಚಿಕ್ಕದೊರೆಗಳಾದ ಅಭಿಮನ್ಯುಮಹಾರಾಜರಿಗೆ ತಿಳಿಸುವುದಕ್ಕೆ ಬಂದ

ರಲು, ಅದಕ್ಕೆ ಬದಲು ನಾನೇ ಈ ಬೆಡಗಿನ ಹುಡುಗಿಯರ ಚಕ್ರವ್ಯೂಹದಲ್ಲಿ ಸಿಕ್ಕು ಬಳಲಬೇಕಾಯಿತು! ಈ ರಕ್ಕಸಿಯರ ತಂಡವು ಇತ್ತಕಡೆಗೇ ಬಂದಿತು. ಈ ಬಣ್ಣದ ಬಾಲೆಯರು ನನ್ನ ಶೋಧವನ್ನೇ ಮಾಡುತ್ತಿರುವರು. ಮೇಘನಾದಾ, ಮುಗಿಯಿತು ನಿನ್ನ ಅವಸ್ಥೆ! ಹೂಂ, ಇಲ್ಲಿಂದ ಪಲಾಯನ ಹೇಳು. (ಹೋಗತೊಡಗುವನು) ಧಿಕ್ಕಾರವು, ಧಿಕ್ಕಾರವು, ಇವರು ಇತ್ತಕಡೆಗೇ ಬಂದರು. ಇನ್ನು ಎಲ್ಲಿ ಮರೆಯಾಗಲಿ? ಇತ್ತಕಡೆಗೂ ಸ್ತ್ರೀಯರು, ಅತ್ತಕಡೆಗೂ ಸ್ತ್ರೀಯರು; ನಾಲ್ಕೂ ದಿಕ್ಕಿನಿಂದಲೂ ಬಂತು ದಾಳಿ! (ಪರದೆಯಲ್ಲಿ—ಯಾರೇ ಯಾರವನು ಕಳ್ಳನು?) ಏನು, ನಾನು ಕಳ್ಳನೇ? ಈ ಮೇಘನಾದನಿಗೆ ಕಳ್ಳನೆಂದು ಹೇಳಿದವಳು ಯಾರವಳು ವಾಚಾಳಿಯು. (ನೋಡಿ) ಓಹೋ, ಇವಳು ನಮ್ಮವಳು ಸೌದಾಮಿನಿ. ನಾನು ಇಂತಹ ಮಹಾಬಲಾಢ್ಯ ವೀರ. ಆದರೆ ಸ್ತ್ರೀಯರಿಂದ ಭೀತಿ! ಇನ್ನು ಎಲ್ಲಿಯಾದರೂ ಮರೆಯಾಗಿ ಸಮಯವನ್ನು ಸಾಧಿಸಿ ಪಾರಾಗಬೇಕು.

(ಅಡಗುವನು. ಸೌದಾಮಿನಿ, ಮಲ್ಲಿಕೆ, ಕುಮುದ್ವತಿ, ಚಂದ್ರಿಕೆ, ವಿಲಾಸಿನಿಯರು ಎರಡೂ ಬದಿಗಳಿಂದ ಪ್ರವೇಶಿಸುವರು).

ಸೌದಾಮಿನಿ:— ಯಾವನೇ ಯಾವನವನು ಕಳ್ಳನು? ಅಮ್ಮಯ್ಯಾ, ಈಗ ಇಲ್ಲಿಯೇ ಇದ್ದನು, ಇಷ್ಟರಲ್ಲಿಯೇ ಎಲ್ಲಿ ಹೋದನು? ಬಿಡಾರದ ಸುತ್ತಲೂ ಕಳ್ಳನಂತೆ ಮರೆಮರೆಯಾಗಿ ಸುತ್ತುತ್ತಿದ್ದನು. ಭೂತವೊ ಬ್ರಹ್ಮಸಂಬಂಧವೊ!

ಮೇಘ:— (ಬಂದುಮುಗ್ಗಲಿಗೆ) ಬ್ರಹ್ಮಸಂಬಂಧವೆ! ಸಂತೋಷವು! ಇದೋ ಇವಳೇ ನೋಡಿ ಈ ಮೇಘನಾದನ ಪ್ರೀತಿಯ ಹೆಂಡತಿ. ಇವಳಿಗೆ ತನ್ನ ಪ್ರಿಯಪತಿಯು ಭೂತಾಕಾರನಾಗಿ ತೋರುವನು. ಧನ್ಯಳು, ಧನ್ಯಳು. ಎಂತಹ ಪತಿವ್ರತಾಶಿರೋಮಣಿಯಿವಳು. ಧಿಕ್ಕಾರ ಧಿಕ್ಕಾರವಿರಲಿ ಈ ಸ್ತ್ರೀಯರಿಗೆ.

ಮಲ್ಲಿಕಾ:— ಸೌದಾಮಿನಿ, ನನಗೆ ಸಂದೇಹವುಂಟಾಗುವುದು. ಅವನು ಯಾವನಾದರೂ ಶತ್ರುಪಕ್ಷದ ಗೂಢಚಾರನಿರಬಹುದೆ? ಮತ್ತೆ

ಅವನು ನಮ್ಮ ಉತ್ತರಾದೇವಿಯವರ ಬಿಡಾರದ ಸುತ್ತಲೇ ಸುತ್ತು ತ್ತಿರುವನಲ್ಲ !

ಕುಮುದ್ವತಿ:— ಮಲ್ಲಿಕೆ, ನಿಶ್ಚಯ, ನಿಶ್ಚಯ. ಅವನು ಗೂಢಚಾರನೇ ಇರಬಹುದು. ಛೀ ಅಲ್ಲ. ಅವನು ಈ ಸೌದಾಮಿನಿಯ ಪತಿಯಾದ ಮೇಘನಾದನೇ ಇರಬಹುದು. ಚಿಕ್ಕನೊರೆಗಳನ್ನು ಹುಡುಕುತ್ತ ಲಿರಬಹುದು, ಮತ್ತೇನು ? ಹೌದಲ್ಲವೆ ಚಂದ್ರಿಕೆ?

ಚಂದ್ರಿಕೆ:— ಅಭಿಮನ್ಯುಮಹಾರಾಜರು ಅವನಿಗೆಲ್ಲಿ ಸಿಕ್ಕುವರು ? ನಾವೆ ಅವರನ್ನು ಹುಡುಕುತ್ತಿರುವೆವು.

ಮೇಘ:— (ಸ್ವಗತ) ಅಂದರೆ–ಈ ಸಂಕ್ರಮಣವು ಚಿಕ್ಕದೊರೆಗಳ ಮೇಲೆಯೂ ಬೀಳುವುದೊ ಏನು ? ಈ ಹೊಯ್ಯಾಲೆಯರು ನವನವ ಮಾತುಗಳ ನ್ನಾಡಿ ಪುರುಷರನ್ನು ಮರುಳುಗೊಳಿಸಿ ಎಂತಹ ದುರವಸ್ಥೆಗೆ ಗುರಿ ಮಾಡುವರೊ ಇದು ಬ್ರಹ್ಮದೇವನ ಅಪ್ಪನಿಗೂ ತಿಳಿಯಲಾರದು. ಧಿಕ್ಕಾರ ಧಿಕ್ಕಾರವಿರಲಿ ಈ ಸ್ತ್ರೀಯರಿಗೆ !

ವಿಲಾಸಿನಿ:— ನಡೆಯಿರಿನ್ನು, ಉತ್ತರಾದೇವಿಯರು ಮಹಾರಾಜರನ್ನು ಕರೆತರುವುದಕ್ಕೆ ಹೇಳಿರುವರಷ್ಟೆ. ನಡೆಯಿರಿ ಹಾಗಾದರೆ, ಈ ಹಾರ ತುರಾಯಿಗಳು ಬಾಡಿಹೋದಾವು.

ಮೇಘ:— (ಸ್ವಗತ) ಆ ಹಾರವನ್ನು ನನ್ನ ಕೊರಳಲ್ಲಿ ಹಾಕಿರಿ. ಈ ಹುಡುಗೆ ಯರ ಕೋಮಲವಾದ ಕರಗಳ ಹಾರವಿಲ್ಲದಿದ್ದರೆ ಇಲ್ಲ. ಇವರ ಹಸ್ತ ದಿಂದ ಪೋಣಿಸಲ್ಪಟ್ಟ ಪುಷ್ಪಹಾರವಾದರೂ (ಶೀಕರಿಸುವನು).

ಚಂದ್ರಿಕಾ:— ಅದೇನು ಸದ್ದು ?

ಸೌದಾ:— ಯಾವುದಾದರೂ ನಾಯಿ ನರಿ ಇದ್ದೀತು ! ಯುದ್ಧವು ಪ್ರಾರಂಭ ವಾದಂದಿನಿಂದ ಈ ನಾಯಿನರಿಗಳಿಗೆ ಹಬ್ಬವಾಗಿದೆ. ಸಮೃದ್ಧಿಯಾಗಿ ಪ್ರೇತಗಳ ಸಂತರ್ಪಣೆ ದೊರೆಯಬಹುದಲ್ಲವೆ ?

ಮಲ್ಲಿಕಾ:— ನಿಶ್ಚಯ ನಾಯಿನರಿಯೇ ಆಗಿರಬಹುದು.

ಮೇಘ:— (ಸ್ವಗತ) ಶಟವಿಯರೇ ನಿಮ್ಮಪ್ಪ ಮೇಘನಾದನೇ ಇಲ್ಲಿ ನಿಂತಿರು ವನು, ತಿಳಿಯಿತೆ? ನಾಯಿಯೋ ನರಿಯೋ ಗೊತ್ತಾಗುವುದು ತಾಳಿ.

ಕುಮು:— ನಾಯಿಯೂ ಅಲ್ಲ, ನರಿಯೂ ಅಲ್ಲ. ಈ ಸೌದಾಮಿನಿಯ ಗಂಡ, ಆ ಮೇಘನಾದನೇ ಬಂದಿರಬಹುದು ಇವಳನ್ನು ಕಾಣಲಿಕ್ಕೆ. ನಮ್ಮನ್ನು ನೋಡಿ ಎಲ್ಲಿಯಾದರೂ ಮರೆಯಾಗಿ ನಿಂತಿರಬಹುದು.

ಸೌದಾ:— ಕಟವಿಯರೆ, ಸಾಕುಮಾಡಿರಿ ಕುಚೇಷ್ಟೆಯನ್ನು.

ಮಲ್ಲಿಕಾ:— ಒಳ್ಳೇದಮ್ಮಾ ನಾನು ಹೊರಡುವೆನು ಆಯಿತೆ.

ಮೇಘ:— ನೋಡಿ ನೋಡಿ. ಹೇಗೆ ನಡೆಯುವಳು ಚೋಳಬಾಣದಂತೆ. ಚಲ್ ಪಿಲ್, ಚಲ್ ಪಿಲ್.

ಸೌದಾ:— ಅಮ್ಮಯ್ಯಾ, ಯಾರದು?

ಮಲ್ಲಿಕಾ:— ಶತ್ರುಪಕ್ಷದ ಗೂಢಚಾರನೇ ಅವನು. ನಡೆಯಿರಿ, ಅವನನ್ನು ಶೋಧಿಸಿ ಚೆನ್ನಾಗಿ ಸಮಾಚಾರ ತೆಗೆದುಕೊಳ್ಳೋಣ. (ಹೋಗುವರು).

ಸೌದಾ:— ಬೇಕಾದಹಾಗೆ ಶೋಧಿಸಿರಿ, ನಿಮಗೆ ಕೆಲಸವೇನು! ಮಹಾ ರಾಣಿಯವರು ಕೋಪಿಸಬಹುದು, ನಾನು ಹೋಗುವೆನು.

(ಹೋಗುವಳು.)

ಮೇಘ:— ಧಿಕ್ಕಾರ ಧಿಕ್ಕಾರವಿರಲಿ ಈ ಸ್ತ್ರೀಯರಿಗೆ. ಈ ಪ್ರಾರಬ್ಧವನ್ನು ತಪ್ಪಿಸುವುದು ಹೇಗೆ? ಅದೋ ಮತ್ತೆ ಅವರು ಇತ್ತಕಡೆಗೇ ತಿರುಗಿದರು. ಇನ್ನು ಹೋಗೋಣ. (ತಡೆದು) ಆದರೆ ಹೋಗುವುದಾದರೂ ಎಲ್ಲಿಗೆ? ಇಲ್ಲಿಯೇ ಮುಖವನ್ನು ಮುಚ್ಚಿಕೊಂಡು (ನೋಡಿ) ಹಾ ಒಳ್ಳೇ ನೆನಪಾಯಿತು. ಮೈಮೇಲಿನ ಈ ಶಾಲಿನ ಮುಸುಕಿಟ್ಟುಕೊಂಡು ಒಂದು ಮಗ್ಗಲಿಗೆ ಕೂಡೋಣ. ಎಲಾ ಇದೇನು! ಗಡಿಬಿಡಿಯಲ್ಲಿ ಮನೆಯಿಂದ ಶಾಲು ತರುವುದಕ್ಕೆ ಬದಲು ನಮ್ಮ ಹೆಂಡತಿಯವರ ಸೀರೆ ತಂದಿರುವೆನಲ್ಲ! ಹೋಗಲಿ ಇದನ್ನೇ ಉಟ್ಟುಕೊಳ್ಳೋಣ; ಮತ್ತೆ ಹೇಗೆ ಚಮತ್ಕಾರವಾಗುವುದೊ ನೋಡುವಾ! (ಸೀರೆಯನ್ನು ಉಡುವನು) ಈ ಸೀರೆಯಲ್ಲಿ ಎಂತಹ ಚಮತ್ಕಾರವಿರುವುದು. ನೋಡಿ, ನಾನು ಈ ಸೀರೆಯನ್ನುಟ್ಟುಕೊಂಡ ಮಾತ್ರಕ್ಕೆ ತನ್ನಷ್ಟಕ್ಕೆ ತಾನೇ ಈ ಗೋಣು ನೊಬಗಿನಿಂದ ತೂಗತೊಡಗಿತು. ನೊಂಟವು ಒಯ್ಯಾರದಿಂದ ಬಳುಕತೊಡಗಿತು. (ಒಯ್ಯಾರ

ದಿಂದ ನಡೆಯುವನು) ಅಮ್ಮಯ್ಯಾ. (ಮಲ್ಲಿಕಾ, ಚಂದ್ರಿಕಾ ಮೊದಲಾದವರು ಪ್ರವೇಶಿಸುವರು).

ಚಂದ್ರಿಕಾ:— ಎಲ್ಲಿಯೂ ಆ ಕಳ್ಳನ ಸುಳಿವೇ ಇಲ್ಲವಲ್ಲ. (ನೋಡಿ) ಅಮ್ಮಯ್ಯ ಇವಳಾರು ಈ ಸ್ತ್ರೀಯು!

ಮೇಘ:— (ಸ್ವಗತ) ನಾನೇನೊ ರಣದಲ್ಲಿ ಶೂರ; ಆದರೆ ಸ್ತ್ರೀಯರ ಮುಂದೆ ಮಾತ್ರ ಉತ್ತರಕುಮಾರ!

ಮಲ್ಲಿಕಾ:— ಯಾರಮ್ಮ ನೀನು? ನಿನ್ನ ಸ್ಥಳವಾವುದು? ಜೆನ್ನಾಗಿ ಹೇಳು.

ಮೇಘ:— ಊ ಹೂ.

ಚಂದ್ರಿಕಾ:— ನಿನ್ನ ಹೆಸರೇನು?

ಮೇಘ:— ಊ ಹೂ.

ವಿಲಾ:— ಇಲ್ಲಿ ನಿನ್ನದೇನು ಕೆಲಸ?

ಮೇಘ:— ಊ ಹೂ.

ಕುಮು:— ನಿನ್ನ ತಲೆ, ಎಲ್ಲಕ್ಕೂ ಊ ಹೂ ಅಂದರೆ ಏನು ತಿಳಿಯಬೇಕು? ನೋಡಿದರೆ ಗಾರತೀ, ಮಾತಾಡುವುದಿಲ್ಲವೇ? (ಎಲ್ಲರೂ ಹೊಡೆಯುವರು)

ಮೇಘ:— ಅಮ್ಮಾ ಹೊಡೆಯಬೇಡಿರಿ. (ಸ್ವಗತ) ಈ ಹುಡುಗಿಯರ ಪೆಟ್ಟು ಬಿದ್ದ ಕೂಡಲೆ ನನ್ನ ಶರೀರವು ಒಳ್ಳೇ ಪವಿತ್ರಗಾಯಿತು. (ಪ್ರಕಾಶ) ಅಮ್ಮಾ, ನಾನೊಬ್ಬ ಅನಾಥಸ್ತ್ರೀಯು.

ಚಂದ್ರಿಕಾ:— ನಿನ್ನ ಹೆಸರೇನು?

ಮೇಘ:— (ಸ್ವಗತ) ಮೇಘನಾದಾ, ವೇಷವನ್ನು ಬದಲಿಸಿದಂತೆ ಹೆಸರನ್ನೂ ಬದಲಿಸುವುದಕ್ಕೆ ಅವಕಾಶವೇಕೆ? (ಪ್ರಕಟ) ನನ್ನ ಹೆಸರು ಶಂಖಿಣಿ.

ಮಲ್ಲಿಕಾ:— ಏನು ಶಂಖಿಣಿಯೆ! (ಎಲ್ಲರೂ ನಗುವರು) ಇರಲಿ. ನಿನ್ನ ತಂದೆ ತಾಯಿಗಳಾರು? ನಿನ್ನ ಲಗ್ನವಾಗಿದೆಯೆ? ನಿನ್ನ ಮನೆಯೆಲ್ಲಿದೆ? ಇಲ್ಲಿಗೆ ಏತಕ್ಕೆ ಬಂದೆ?

ಮೇಘ:— ಇವೇನು ಪ್ರಶ್ನೆಗಳೊ, ಫಿರಂಗಿ ಗುಂಡುಗಳೊ? ಅಮ್ಮಾ ನನ್ನ ಕರ್ಮಕಥೆಯನ್ನು ಕೇಳಿರಿ. ಈ ನಡೆವ ಯುದ್ಧದಲ್ಲಿ ನನ್ನ ತಂದೆಯು ಮೃತನಾದನು. ತಾಯಿಯು ಎಲ್ಲಿ ಹೋದಳೊ ಗೊತ್ತಿಲ್ಲ. ನಾನು ಕುಮಾರಿ. (ಸ್ವಗತ) ಪ್ರಾಯಕ್ಕೆ ಬಂದ ಒಳ್ಳೇ ದಿವ್ಯಕುಮಾರನು.

ವಿಲಾ:— ಸಾಕು ಮುಗಿಸು ನಿನ್ನ ಕರ್ಮಕಥೆಯನ್ನು. ನಿನಗೇನಾದರೂ ಗಾಯನ ನರ್ತನ ಬರುವುದೆ?

ಮೇಘ:— (ಸ್ವಗತ) ಅಯ್ಯೋ ವಿಧಿಯೆ. ಈ ಸ್ತ್ರೀಯರು ಇನ್ನು ಮೇಲೆ ನನಗೆ ನರ್ತನ ಮಾಡಲಿಕ್ಕೆ ಹೇಳುವರೊ ಏನು? ಪರಮೇಶ್ವರಾ, ಧಿಕ್ಕಾರ ಧಿಕ್ಕಾರವಿರಲಿ ಈ ಸ್ತ್ರೀಯರಿಗೆ. (ಪ್ರಕಾಶ ಅಳುದನಿಯಲ್ಲಿ) ಅಮ್ಮಾ, ನಿಮ್ಮ ಹಾಗೆ ನನಗೆ ನರ್ತನ ಮಾಡುವುದಕ್ಕೆ ಬರುವುದಿಲ್ಲ.

ಕುಮು:— ಅಮ್ಮಾ, ನಿನಗೆ ಹಾಡಲಿಕ್ಕೂ ಕುಣಿಯಲಿಕ್ಕೂ ಬರುತ್ತಿದ್ದರೆ ನಮ್ಮ ಮಹಾರಾಣಿಯವರಲ್ಲಿ ಕೆಲಸವು ದೊರೆಯಬಹುದಾಗಿತ್ತು. ಇರಲಿ; ನಾವೇ ನಿನಗೆ ನರ್ತನವನ್ನು ಕಲಿಸುತ್ತೇವೆ.

ಸರ್ವರು:— ಓಹೊ ನಾವು ಕಲಿಸುತ್ತೇವೆ.

ಚಂದ್ರಿಕಾ:— ಹೂ. ಈಗಲೇ ಪ್ರಾರಂಭವಾಗಲಿ. ಶ್ರೀಗಣೇಶಾಯ ನಮಃ

ವಿಲಾ:— ಹೂ. ಪ್ರಾರಂಭಿಸು. ಚುಂ, ಛೂಂ; ಛಕ, ಛುಂ.

ರಾಗ ಯಮುನ ತಾಳ ತ್ರಿವಟ.

ಬಾಬಾಬಾ ನಡಗದಲಿ। ಸೊಬಗಿನ ಕುಣಿತವ
ಕಲಿಸುವೆ ಪ್ರಿಯಸಖಿ ॥ ೧ ॥

(ಸರ್ವರೂ ಮೇಘನಾದನೊಡನೆ ನರ್ತನ ಮಾಡುವಾಗ ಸೌದಾಮಿನಿ ಬರುವಳು.)

ಸೌದಾ:— ಏನೆ, ಅತ್ತಕಡೆಗೆ ಉತ್ತರಾಮಹಾರಾಣಿಯವರು ತೋಟದಲ್ಲಿ ನಿಮ್ಮ ಮಾರ್ಗ ನಿರೀಕ್ಷಿಸುತ್ತಿರುವರು. ಇತ್ತಕಡೆಗೆ ನೀವು ಗಾಯನ ನರ್ತನಗಳನ್ನು ಪ್ರಾರಂಭಿಸಿರುವಿರೇನು? ಬೇಷ್, ಬೇಷ್! ನಾಚಿಕೆ ಯಾಗುವುದಿಲ್ಲವೆ ನಿಮಗೆ? ಇವಳಾರು ಮತ್ತೆ, ದುರ್ಗಾದೇವಿ? ಏನೆ ದಡಿಯಮ್ಮಾ, ಯಾರು ನೀನು?

ಮೇಘ:— (ಸ್ವಗತ) ಬ್ರಹ್ಮಸಂಬಂಧಕ್ಕೆ ಸೋದರಮಾವ.

ಸೌದಾ:— ಯಾಕೆ ಮಾತಾಡುವುದಿಲ್ಲ! ನಿನ್ನ ನಾಲಿಗೆಯು ಕಳಚಿ ಬಿದ್ದಿತೆ?

ಮೇಘ:— (ಸ್ವಗತ) ಹೀಗೆ ಕೆನ್ನೆಯಮೇಲೆ ಒಂದು ಏಟು ಹಾಕಲೆ?

ಸೌದಾ:— ಯಾರೇ ನೀನು ಗಟ್ಟಿಗಳು, ಮಾತಾಡುವುದಿಲ್ಲವೇಕೆ?

ಮೇಘ:— (ಸ್ವಗತ) ನಮ್ಮ ಅವಸಾನಕಾಲವು ಸಮೀಪಿಸಿತು.

ಸೌದಾ:— (ಮುಖದ ಮೇಲಿನ ಸೆರಗು ತೆಗೆದು) ಎಲ್ಲಿ, ಕೊಂಚ ನಿನ್ನ ಮುಖವನ್ನು ತೋರಿಸು.

ಮೇಘ:— ಹೇಗೆ ತೋರಿಸಲಿ ಮುಖವನ್ನು (ತೋರಿಸುವನು)

ಸರ್ವರು:— ಅಮ್ಮಯ್ಯಾ ಮೇಘನಾದನು! (ನಗುವರು)

ಮೇಘ:— ಹೊಡೆಯಿರಿ ಜೋರಾಗಿ ಶಂಖವನ್ನು! (ಓಡಿಹೋಗುವನು)

ಸೌದಾ:— ಪಲ್ಲುಕಿರಿಯುತ್ತ ಹೀಗೆಕೆ ನಿಂತಿರುವಿರೆ: ನಡೆಯಿರಿ ನಡೆಯಿರಿನ್ನು.

ಕುಮು:— ಒಳ್ಳೇ ದುರ್ದೆಶೆಯಾಯಿತು.

ವಿಲಾ:— ಆದರೆ ಕುಮುದ್ವತಿ, ಇವನೆಂಥ ಗಂಡಸೆ ಹೆಣ್ಣುಮೂಳ; ಲಜ್ಜೆಗೇಡಿ!

ಚಂದ್ರಿಕೆ.— ಬೇಡವಮ್ಮಾ ಇಂತಹ ಪ್ರಸಂಗವು ವೈರಿಗೆ ಕೂಡ ಬರಬಾರದು.

ಮಲ್ಲಿಕಾ:— ಪ್ರಾರಬ್ಧಕರ್ಮ. ಇಂತಹ ಹುಚ್ಚುಪತಿಗಳು ಗಂಟುಬಿದ್ದ ಮೇಲೆ ಮಾಡುವುದೇನು? ಸುಮ್ಮನಾಗು ಹೀಗೆ ವ್ಯಸನಪಡಬೇಡ. (ಕಣ್ಣೀರು ಒರೆಸುವಳು.)

ಸೌದಾ:— ಗಯ್ಯಾಳಿಯರೆ, ಕುಚೇಷ್ಟೆಯನ್ನು ಮಾಡುವಿರಾ? (ಹೊಡೆಯುವಳು. ಅವರು ಓಡಿಹೋಗುವರು) ಇವರು ಎಲ್ಲಿ ಹೋದರು? (ಒಳಗೆ ಹೋಗಿ ಮೇಘನಾದನನ್ನು ಕಿವಿಹಿಡಿದು ಎಳೆತರುವಳು).

ಮೇಘ:— ಏ-ಏ-ಏ- ಮೆಲ್ಲಗೆ ಕಿವಿಗಡ್ಡೆ ಕಿತ್ತೀತು!

ಸೌದಾ:— ಯಾಕೆ, ನೀವು ಮಾನ ಮರ್ಯಾದೆ ಎಲ್ಲವನ್ನೂ ಬಿಟ್ಟಿರೊ ಹೇಗೆ?

ಮೇಘ:— ನನ್ನ ಕಿವಿಗಡ್ಡೆಯನ್ನೇ ಕಿತ್ತು, ಮತ್ತೆ ನಾಲಿಗೆಯನ್ನು ಬಿದ್ದ ಮಾಡಿ ಮಾತಾಡುವಿಯಾ!

ಸೌದಾ:— ನೀವು ಪತಿಗಳೊ, ಪಿಶಾಚಿಗಳೊ? ನಿಮಗೆ ಪುರುಷರೆನ್ನುವುದಕ್ಕೆ ನನಗೆ ನಾಚಿಕೆಯಾಗುವುದು.

ಮೇಘ:— ಪ್ರಾಣಹೋಗುವ ಪ್ರಸಂಗ ಬಂತೆಂದು ನಾಚಿಕೆಯನ್ನು ಬಿಡಬೇಕಾಯಿತು; ಮತ್ತೇನು ಮಾಡಲಿ?

ಸೌದಾ:— ಸ್ತ್ರೀಯರಿಗೆ ಪರಿಹಾಸ್ಯ ಮಾಡುತ್ತ ಮಾಡುತ್ತ ಈ ಪುರುಷರು ಕೂಡ ತುಂಬಿದ ಬೀದಿಯಲ್ಲಿ ಬತ್ತಲೆ ಕುಣಿಯುಹತ್ತಿದರೆ ಮಾಡುವು ದೇನು ?

ಮೋಘ:— ಕುಣಿಯುವ ರೀತಿಯನ್ನು ಈ ಪುರುಷರಿಗೆ ಕಲಿಸಲಿಕ್ಕೆ ಕಾರಣರು ಸ್ತ್ರೀಯರೇ. ಧಿಕ್ಕಾರ ಧಿಕ್ಕಾರವಿರಲಿ ಈ ಸ್ತ್ರೀಯರಿಗೆ!

ಸೌದಾ:— ಸ್ವಲ್ಪ ತಡೆಯಿರಿ. ಈ ನಿಮ್ಮ ನಾಚಿಗಗೇಡಿತನದ ನಡವಳಿಕೆಯನ್ನು ಚಿಕ್ಕಮಹಾರಾಜರಿಗೆ ತಿಳಿಸಿ, ಆ ಮೇಲೆ ನಿಮಗೆ—

ಮೋಘ:— ಛೆ, ಛೆ; ದಯವಿಟ್ಟು ಅಷ್ಟುಮಾತ್ರ ಮಾಡಬೇಡ. ಇಕೊ ನನ್ನಿಂದ ತಪ್ಪಾಯಿತು. (ಕೆನ್ನೆಬಡೆದುಕೊಂಡು) ನಿನ್ನ ಕಾಲುಬೀಳುತ್ತೇನೆ. ಹೇಗಾದರೂ ಮಾಡಿ ನಿನ್ನ ಗೆಳತಿಯರ ಬಾಯಿಮುಚ್ಚುವಂತೆ ಮಾಡು. (ಕಾಲುಹಿಡಿಯುವನು).

ಸೌದಾ:— (ನಗುತ್ತ) ಅವರ ಬಾಯನ್ನು ನಾನು ಮುಚ್ಚುವೆನು. ಆದರೆ ನನ್ನ ಬಾಯನ್ನು—

ಮೋಘ:— ನಿನ್ನ ಬಾಯನ್ನು ನಾನು ಮುಚ್ಚುವೆನು.

ಸೌದಾ:— ಅದು ಹೇಗೆ ?

ಮೋಘ:— ಅದು ಹೀಗೆ. (ಮುದ್ದುಕೊಡುವುದಕ್ಕೆ ಹೋಗುವನು) ಪ್ರಿಯೆ—

ಸೌದಾ:— ನಡೆಯಿರಿ ಆಚೆಗೆ! ಈ ಸ್ತ್ರೀಯರನ್ನು ನೋಡಿ ಭಯಪಡುವ ನೀವು ರಣಶೂರರೊ ?

ಮೋಘ:— ಈ ವೀರನು ಸ್ತ್ರೀಯರಿಗೆ ಭಯಪಡುವುದಂತೂ ನಿಜವೆ. ಆದರೆ ಯುದ್ಧಕ್ಕೂ ಅಂಜುವನು. ನಾನು ಶೃಂಗಾರದ ವೀರನು; ನೀನು ನನ್ನ ಬಂಗಾರದ ಗಿಣಿಯು!

ಸೌದಾ:—ಸ್ತ್ರೀಯರು ನಿಮ್ಮಂತಹ ಹೇಡಿಗಳಾದ ಹೆಣ್ಣಿಗರ ಪ್ರೇಮವನ್ನು ಬಯಸುವುದಿಲ್ಲ. ಪರಾಕ್ರಮಶಾಲಿಗಳನ್ನೇ ಪ್ರೀತಿಸುವರು.

ಮೋಘ:— ಹಾಗಲ್ಲ ಪ್ರಿಯೆ. ಸಮಯವನ್ನು ನೋಡಿ ಎಲ್ಲವನ್ನು ಮಾಡಬೇಕಾಗುವುದು. ಆ ವಿಷಯವನ್ನು ಹೇಳುವೆನು ಕೇಳು—(ಕಿವಿಯಲ್ಲಿ ಹೇಳಿ) ನಿತ್ಯನಿಯಮದಂತೆ ಯುದ್ಧದ ಸಮಾಚಾರವನ್ನು ಚಿಕ್ಕಮಹಾರಾಜರಿಗೆ ತಿಳಿಸುವುದಕ್ಕೆ ಹೊರಟಿದ್ದೆನು.

ಸೌದಾ:— ಏನು ನಿಜವಾಗಿಯೂ ದ್ರೋಣಾಚಾರ್ಯರು ಚಕ್ರವ್ಯೂಹವನ್ನು ರಚಿಸಿರುವರೆ?

ಮೋಘ:— ನಿಶ್ಚಯ. ಮಹಾರಾಜರು ಎಲ್ಲಿರುವರು? ಅವರಿಗೆ ಈ ಸಮಾಚಾರವನ್ನು ಜಾಗ್ರತೆಯಾಗಿ ತಿಳಿಸಬೇಕಾಗಿದೆ. ಚಕ್ರವ್ಯೂಹದ ಹೆಸರು ಕೇಳಿದಾಗಲೇ ನಮ್ಮ ಪ್ರಾಣವಾಯುವು ಹೋಗಿದೆ. ಅದರ ಮೇಲೆ ಮತ್ತೆ ನಿನ್ನದೊಂದು ಭಯ!

ಸೌದಾ:— ಸಾಕು, ಸಾಕು. ಎಲ್ಲವೂ ಗೊತ್ತಾಯಿತು ನಿಮ್ಮ ಜಾಣತನ. (ಹೋಗಹತ್ತುವಳು)

ಮೋಘ:— ಏನೆ, ಏ-ಏ-ಏ- ಆಗಲೇ ನಡೆದ ಪ್ರಕಾರವನ್ನು ಇಲ್ಲಿಯೇ ಮರೆತು ಹೋಗಾ?

ಸೌದಾ:— ಒಳ್ಳೇದು ಮರೆತು ಹೋಗುವೆನು, ಆಯಿತೆ? (ಅಣಗಿಸಿ ಹೋಗುವಳು).

ಮೋಘ:— ಬೇಷ್ ರುಸ್ತುಮ ಹೆಂಡತಿ. ಇವಳಿಗನ್ನಬೇಕು ಪತಿವ್ರತಾ ಶಿರೋಮಣಿ. ಧಿಕ್ಕಾರ ಧಿಕ್ಕಾರವಿರಲಿ ಈ ಸ್ತ್ರೀಯರಿಗೆ!

(ಹೋಗುವನು)

ಮೂರನೆಯ ಪ್ರಸಂಗ

(ಉದ್ಯಾನ. ಉತ್ತರೆಯ ಸಖಿಯರು ಪ್ರವೇಶಿಸುವರು.)

ಚಂದ್ರಿಕಾ:— ಏನೇ ಉತ್ತರಾಮಹಾರಾಣಿಯವರು ಎಲ್ಲಿ ಇರುವರು?

ಮಲ್ಲಿಕಾ:— ಈ ಹಾರ ತುರಾಯಿಗಳನ್ನು ಸರಿಯಾದ ಸಮಯಕ್ಕೆ ಅವರಿಗೆ ತಲುಪಿಸಬೇಡವೆ?

ವಿಲಾ:— ಏನೇ ಸೌದಾಮಿನಿ, ಉತ್ತರಾಮಹಾರಾಣಿಯವರು ಇದೇ ಉದ್ಯಾನದಲ್ಲಿ ಇರುವರೆಂದು ನೀನೆ ಹೇಳಲಿಲ್ಲವೆ?

ಕುಮು:— ಏನೇ, ಪತಿಯ ದುರ್ದಶೆಯನ್ನು ನೋಡಿ ಅವಳ ಬುದ್ಧಿಯು ಮಂದವಾಗಿ ಹೋಗಿದೆ. ಪಾಪ ಅವಳಿಗೆ ಎಚ್ಚರವೇ ಇಲ್ಲ!

ಸೌದಾ:— ವಾಚಾಳಿ, ಸಾಕುಮಾಡು ಕುಚೇಷ್ಟೆಯನ್ನು. ಅದೊ ನೋಡು ರಾಣಿಯವರು ಬಂದರು.

ಉತ್ತರಾ:— (ತ್ವರಿತದಿಂದ ಪ್ರವೇಶಿಸಿ) ಏನೇ ಮಲ್ಲಿಕೆ—ಏನೇ ಚಂದ್ರಿಕೆ ಪ್ರಾಣನಾಥರು ಎಲ್ಲಿ ಇರುವರು?—ಎಲ್ಲಿರುವರು ಹೇಳೆ; ಮಾತಾಡು ಬೇಗನೆ. ಏನೇ ಚಂದ್ರಿಕೆ, ಅವರು ನಿನಗೆ ಭೆಟ್ಟಿಯಾದರೆ? ಮಲ್ಲಿಕೆ ನೀನು ಅವರನ್ನು ನೋಡಿದೆಯಾ? ವಿಲಾಸಿನಿ ಅವರು ಎಲ್ಲಿಯಾದರು ನಿನ್ನ ಕಣ್ಣಿಗೆ ಬಿದ್ದರೆ? ಏನೇ, ನೀವು ಹೀಗೇಕೆ ಸುಮ್ಮನೆ ನಿಂತಿರುವಿರಿ! ಕುಮುದ್ವತಿ, ನೀನೆಲ್ಲಿಯಾದರೂ ಅವರನ್ನು ಕಂಡೆಯೇನೆ?

ಕುಮು:— ಓ—ಹೋ ನೋಡಿದೆನು.

ಉತ್ತರಾ:— ಎಲ್ಲಿ ನೋಡಿದೆ? ಹೇಳು ಹೇಳು, ಎಲ್ಲಿ ನೋಡಿದೆ ಸವಾರಿಯನ್ನು?

ಕುಮು:— ದೇವಿಯವರೇ ಎಲ್ಲಿಯೂ ಇಲ್ಲ!

ಉತ್ತರಾ:— ಸಾಕುಮಾಡು ಅಧಿಕಪ್ರಸಂಗವನ್ನು! ನಡೆಯಿರಿ, ಎಲ್ಲರೂ ಇಲ್ಲಿಂದ ಹೊರಟು ಹೋಗಿರಿ!

ಸೌದಾ:— ಆದರೆ ಈ ಹಾರತುರಾಯಿಗಳನ್ನಾದರೂ—

ಉತ್ತರಾ:— ಹಾರವೂ ಬೇಡ, ತುರಾಯಿಯೂ ಬೇಡ. ಯಾರಗೋಸುಗ ಈ ಹಾರತುರಾಯಿಗಳನ್ನು ಕಟ್ಟಿರುವಿರೊ, ಅವರೇ ಇಲ್ಲದ ಮೇಲೆ ಈ ಹಾರತುರಾಯಿಗಳು ಏತಕ್ಕೆ ಬೇಕು? ಬೆಂಕಿಹಚ್ಚು ಅವುಗಳಿಗೆ! ಸೌದಾಮಿನಿ, ಈ ಸಿಂಗಾರವಾದರೂ ಏತಕ್ಕೆ ಬೇಕು ನನಗೆ?

ರಾಗ ಪೀಲು, ತಾಳ ಧುಮಾಳಿ.

ಕಾಣೆ ಪ್ರಿಯ ಪ್ರಾಣಪತಿಯ । ತೋರೆ ಕಾಂತನಾ
ಸಖಿಯೇ ॥ ಪಲ್ಲ ॥ ಶಾಂತಿಸುಖವ ಕಾಣೆ। ಚಿಂತಿಪೆನಾ
ಸ್ವಾಂತದಿ ಭಾವಮೇ। ದಿವ್ಯ ಚಾರುಚಂದ್ರವದನ ॥ ೧ ॥

ಬಾ, ಬೇಗನೆ ತೆಗೆ ಈ ಒಡವೆಗಳನ್ನು.

ಸೌದಾ:— ದೇವಿ, ಹೀಗೆ ದುಡುಕಬೇಡಿ. ಮಹಾರಾಜರ ಸವಾರಿಯು ಇಷ್ಟರಲ್ಲಿಯೆ ಬರಬಹುದು. ಈ ಒಡವೆಗಳನ್ನೂ ಈ ಹಾರತುರಾಯಿಗಳನ್ನೂ—

ಉತ್ತರಾ:— ಸೌದಾಮಿನಿ, ಈ ಕುಸುಮಮಾಲೆಗಳು ಪ್ರಾಣನಾಥರ ಕರಮಾಲೆಗಿಂತಲೂ ಹೆಚ್ಚು ಸಂತೋಷವನ್ನು ಕೊಡುವವೆ? ಈ ಪುಷ್ಪಗಳು ಅವರ ಮುಖಕಮಲಕ್ಕಿಂತಲೂ ಹೆಚ್ಚು ಸುಂದರವಾಗಿರುವವೆ? ಈ ಹೂಗಳ ಸುವಾಸನೆಯು ಅವರ ಪ್ರೇಮ ಸಹವಾಸಕ್ಕಿಂತಲೂ ಹೆಚ್ಚು ಆಹ್ಲಾದಕರವಾಗಿವೆಯೆ? ಬೆಳಗಿನಿಂದ ಸವಾರಿಯ ಮುಖವನ್ನು ಕಾಣದೆ ಜೀವಕ್ಕೆ ಸಮಾಧಾನವೇ ಇಲ್ಲ. ಅವರನ್ನು ಕರೆತರುವುದಕ್ಕೆ ನಿಮ್ಮನ್ನು ಕಳುಹಿಸಿದರೆ, ನೀವೇನು ಮಹಾ ಸೋಮಾರಿಗಳು, ನಿಮ್ಮಿಂದ ಏನಾದರೂ ಪ್ರಯೋಜನವಾದೀತೆ?

ಸೌದಾ:— ಈ ಎರಡು ದಿವಸಗಳಿಂದ ಮಹಾರಾಜರ ಮನಸ್ಸು ಯುದ್ಧದ ಸಮಾಚಾರವನ್ನು ಕೇಳುವುದರಲ್ಲಿಯೇ ತೊಡಗಿಹೋಗಿದೆ. ಅದಕ್ಕೋಸ್ಕರ ಸುಗ—

ಉತ್ತರಾ:— ಬೆಂಕೀಹಚ್ಚು ಆ ಯುದ್ಧಕ್ಕೆ! ಯಾವ ಮುಹೂರ್ತಕ್ಕೆ ಪ್ರಾರಂಭವಾಯಿತೊ ಅನಿಷ್ಟವು? ಏನೇ ಇವರಿಗೆ ದಿನಾಲು ಈ ಯುದ್ಧದ ಸಮಾಚಾರವನ್ನು ತಿಳಿಸತಕ್ಕವರಾರು?

ಸೌದಾ:— ಎರಡನೆಯವರಾರು? ನಮ್ಮವರೆ.

ಉತ್ತರಾ:— ಯಾರು ಮೇಘನಾದನೆ?

ಸೌದಾ:— ಮಹಾರಾಜರು ಅವರನ್ನು ಅದೇ ಕೆಲಸಕ್ಕಾಗಿ ನೇಮಿಸಿರುವರು.

ವಿಲಾ:— ಸೌದಾಮಿನಿ, ಆಗಲೇ ನಡೆದ ಚಮತ್ಕಾರವನ್ನು ತಿಳಿಸಲೇನು ದೇವಿಯವರಿಗೆ?

ಸೌದಾ:— ಉಶ್, ಸುಮ್ಮನೇ ಇರು. ಮುಚ್ಚು ಬಾಯಿ, ಕೊಟ್ಟೇನು ಒಂದು ಕೆನ್ನೆಗೆ.

ಉತ್ತರಾ:— ಸೌದಾಮಿನಿ, ನೀನು ಮೇಘನಾದನಿಗೆ ಒಳ್ಳೇ ಜೋಪಾನವೆಂದು ಹೇಳು. ಯುದ್ಧದ ಸಮಾಚಾರವನ್ನು ತಿಳಿಸಿ ಸವಾರಿಯ ಮನಸ್ಸನ್ನು ವ್ಯಥೆಪಡಿಸಿದರೆ ಅದು ನನಗೆ ಸಹಿಸದು. ಏನೇ ನಾನು ನಿಮಗೆ ಹೋಗುವುದಕ್ಕೆ ಹೇಳಲಿಲ್ಲವೆ? ಸುಮ್ಮನೆ ಏಕೆ ನಿಂತಿರುವಿರಿ, ಬುಬ್ಬುಣಚಾರ ಹೇಳುತ್ತ? ನಡೆಯಿರಿ ಆಚೆಗೆ.

(ಅಭಿಮನ್ಯು ಪ್ರವೇಶಿಸುವನು)

ವಿಲಾ:— ದೇವಿಯವರೇ, ದೇವಿಯವರೇ—

ಉತ್ತರಾ:— ನಡೆ ಸುಮ್ಮನೆ, ನನ್ನ ತಲೆ ಕೆಡಿಸಬೇಡ.

ವಿಲಾ:— ಅದು ನೋಡಿ, ಚಂದ್ರೋದಯವಾಯಿತು. (ಅಭಿಮನ್ಯು ಮಾತಾಡ ಬೇಡಿರೆಂದು ಸನ್ನೆಮಾಡುವನು) ದೇವಿಯವರೇ,

ಚಂದ್ರಿಕೆ:— ಏನೆ, ಮಹಾರಾಣಿಯವರು ಕೋಪಗೊಂಡಿದ್ದಾರೆ ಕಾಣು ವುದಿಲ್ಲವೆ?

ಸೌದಾ:— ಕೋಪಿಸುವರೆ? ಛೇ, ಇನ್ನುಮೇಲೆ ನಾವು ಇಲ್ಲಿಂದ ಹೋಗ ದಿದ್ದರೆ ಮಾತ್ರ ದೇವಿಯವರು ನಿಜವಾಗಿಯೂ ಕೋಪಿಸುವರು. ನಡೆ ಯಿರಿ ಹೋಗೋಣ. ದೇವಿಯವರೆ, ಅದೊ ನೋಡಿ. (ಉತ್ತರೆಯು ಅಭಿಮನ್ಯುವನ್ನು ನೋಡಿ ನಾಚುವಳು).

(ಸಖಿಯರೆಲ್ಲ ತೆರಳುವರು)

ಉತ್ತರಾ:— ನಾಥಾ, ನಾಥಾ, (ಅಭಿಮನ್ಯು ಅಡಗುವನು) ಹಾ, ಎಲ್ಲಿ ಹೋದರು ಇಷ್ಟರಲ್ಲಿಯೆ? ಈ ಕಡೆ ನಾನು ಅವರನ್ನು ನೋಡಿದೆ; ಕಣ್ಣಿಗೆ ಕಣ್ಣು ಭೆಟ್ಟಿಯಾಯಿತು; ಆದರೆ ಸವಾರಿಯು ಎಲ್ಲಿ ಮರೆ ಯಾಯಿತು? ಅಥವಾ ನನಗೇ ಭ್ರಾಂತಿಯೊ? ಇನ್ನು ಎಲ್ಲಿ ಶೋಧಿಸಲಿ? (ಆಚೆಗೆ ಈಚೆಗೆ ಹುಡುಕುವಳು) ಇದೋ, ಇಂತಹ ಕಣ್ಣುಮುಚ್ಚಾಲೆಯ ಆಟವು ನನಗೆ ಸಹಿಸದು. ತಿಳಿಯಿತೇ, ಕೇಳಿಸಿತೇ. ಈ ಕಣ್ಣುಕಟ್ಟಿನ ವಿದ್ಯೆಯನ್ನು ನನ್ನೆದುರಿಗೆ ತೋರಿಸಬೇಡಿ. ನಾಥಾ, ನನ್ನನ್ನು ಹೀಗೆ ಪೀಡಿಸಿದರೆ ನಾನು ತಮ್ಮ ಜೊತೆಗೆ ಮಾತಾಡಲಿಕ್ಕಿಲ್ಲ, ನನಗೆ ಕೋಪ ಬಂದೀತು. ನಾನು ಮಾತಾಡುವುದು ವಿನೋದವಲ್ಲ; ಸತ್ಯವಾಗಿಯೂ ಹೇಳುತ್ತೇನೆ. ಏಕೆ ಮಾತಾಡುವುದಿಲ್ಲವೆ? ನಾಥಾ, ತಮ್ಮ ಮುಖ ಚಂದ್ರನನ್ನು ತೋರಿಸಿ ಈ ದೀನ ದಾಸಿಯನ್ನು ಧನ್ಯಗೊಳಿಸಿರಿ. (ಬೇಸರಿಕೆ ಬಂದು ಒಂದೆಡೆಗೆ ಕೊಡುವಳು. ಅಭಿಮನ್ಯು ಬಂದು ಅವಳ ಕಣ್ಣು ಮುಚ್ಚುವನು) ಯಾರು, ಯಾರದು? ತಾವೇ ತಾವೇ; ನನಗೆ ಗುರುತು ಸಿಕ್ಕಿತು. ಏಕೆ ಇನ್ನುಮೇಲಾದರೂ ಕಣ್ಣುಮುಚ್ಚಿದ ಕೈ ತೆಗೆಯು ವುದಿಲ್ಲವೆ? ಸಾಕಾಯಿತಪ್ಪಾ ನನಗೆ. ಎಷ್ಟು ಚೇಷ್ಟೆಯಿದು? ಸಿಕ್ಕಿತು, ನನಗೆ ಗುರುತು ಸಿಕ್ಕಿತು. ಯಾರು ಹೇಳಲೆ? ನೀವು—ನೀವು

(ಅಭಿಮನ್ಯು ಕೈ ತೆಗೆಯುವನು) ಮುಖದಿಂದ ಹೆಸರನ್ನು ಹೇಗೆ ಉಚ್ಚರಿಸಬೇಕವ್ವಾ?

ಅಭಿಮನ್ಯು:— ಹೆಸರು ಉಚ್ಚರಿಸದಿದ್ದರೆ, ಅದನ್ನು ಸಮೂಲವಾಗಿ ಬಿಸಾಡಿ ಬಿಡುವಿಯೋ ಏನು!

ಉತ್ತರಾ:— ಸಾಕು, ಸಾಕು. ತಮಗೆ ಬರುವುದಕ್ಕೆ ಯಾವಾಗ್ಗೆ ಸಮಯ ದೊರೆಯಿತು?

ಅಭಿ:— ಆಗಲೆ, ನೀನು ನಿನ್ನ ಗೆಳತಿಯರನ್ನು ಪೀಡಿಸುತ್ತಿದ್ದೆಯಲ್ಲ, ಆಗಲೆ. ಉತ್ತರೆ, ನನ್ನ ಮುದ್ದುಗಿಳಿಯೆ, ಈ ನಿನ್ನ ಹುಡುಗಾಟದ ಸ್ವಭಾವವು ಎಂದಿಗೆ ಹೋಗುವುದು? ಇನ್ನುಮೇಲೆ ಅದು ನಿನಗೆ ಒಪ್ಪುವದಿಲ್ಲ.

ಉತ್ತರಾ:— ಸಾಕು ಸಾಕು, ಈ ವೇದಾಂತವು. ಈ ಬಡದಾಸಿಯನ್ನು ಪೀಡಿಸುವುದು ತಮಗಾದರೂ ಶೋಭಿಸುವುದೆ?

ಅಭಿ:— ಪ್ರಿಯೆ, ನಾನೇನು ನೋಯಿಸಿದೆ?

ಉತ್ತರಾ:— ನಡೆಯಿರಿ, ನನ್ನ ಜೊತೆಗೆ ಮಾತಾಡಬೇಡಿರಿ.

ಅಭಿ:— ಒಹೋ, ಇದೇನು ನಮಗೆ ಪ್ರಾಯಶ್ಚಿತ್ತವೆ? ಕೋಪಿಸು ಚೆನ್ನಾಗಿ ಕೋಪಿಸು. ಕೋಪದ ಹಿಂದೆ ಅನುರಾಗವು ಸಿದ್ಧವಾಗಿಯೆ ಇದೆ. ಎಷ್ಟುಹೊತ್ತು ಈ ಪ್ರಣಯಕೋಪವು? ನನ್ನ ಮುದ್ದುಚಿನ್ನವೆ, ಒಂದು ಸವಿಮಾತು, ಒಂದುಸಲ ಪ್ರೀತಿಯ ನೋಟ, (ಕೆನ್ನೆಗೆ ಕೈ ಹಚ್ಚುವನು) ಅಯ್ಯೊ ಪಾಪ! ಕೆನ್ನೆಗಳು ಉಬ್ಬಿಹೋಗಿವೆ!

ಉತ್ತರಾ:— ಖಬರದಾರ್, ನನ್ನ ಮೈಮುಟ್ಟಿದಿರೆಂದರೆ—

ಅಭಿ:— ಮೈಮುಟ್ಟಲಿಲ್ಲ! ಗಲ್ಲವನ್ನು ಹಿಡಿದೆ. ಆದರೆ ನನಗೂ ಕೊಂಚ ಕೊಂಚ ಸೆಡವು ಮಾಡಲಿಕ್ಕೆ ಬರುವುದು. ಯಾಕೆ ಈಗ ನಗುವಿಯೊ ಅಥವಾ ನಾನೂ ಕೋಪಿಸಲೊ? ಆಹಾ, ನೋಡು ನಗೆಯು ಬಂತು, ಪ್ರಾರಂಭವಾಯಿತು, ನಕ್ಕಳು ನಕ್ಕಳು! ಪಾಪ! ಹೊರಗೆ ಬರಲು ಹಾತೊರೆಯುವ ಆ ಹಾಸ್ಯಚಂದ್ರಿಕೆಯನ್ನು ಸುಮ್ಮನೆ ಏತಕ್ಕೆ ತಡೆದುಹಾಕುತ್ತಿ? ಹೂ ನಗು, ನಗು. (ಉತ್ತರೆಯು ನಗುವಳು)

ಉತ್ತರಾ:— ನಾನು ಮಾತಾಡುವುದೂ ಇಲ್ಲ, ಮತ್ತು ನಗುವುದೂ ಇಲ್ಲ.

ಅಭಿ:— ಸರಿ ಹಾಗಾದರೆ, ನೀನು ಕೋಪಿಸು, ನಾನೂ ಕೋಪಿಸುವೆನು. (ಮುಖತಿರುಗಿಸಿ ನಿಲ್ಲುವನು)

ಉತ್ತರಾ:— ಬೇಷ್ ಬೇಷ್, ನಗುವುದಕ್ಕೂ ತಡವಿಲ್ಲ, ಕೋಪಿಸುವುದಕ್ಕೂ ತಡವಿಲ್ಲ. ಒಳ್ಳೇ ಸಾಧಿಸಿದೆ ವಿದ್ಯೆ. ನಿಜವಾಗಿಯೂ ಕೋಪ ಬಂತೆ?—ಯಾಕೆ ಮಾತಾಡುವುದಿಲ್ಲವೆ?

ಅಭಿ:— ಉ ಹೂ. ನಾನು ಮಾತಾಡುವುದಿಲ್ಲ. ಒಂದುಸಲ ಹೇಳಿದೆ ನಲ್ಲವೆ, ನಾನು ನಿಜವಾಗಿಯೂ ಕೋಪಿಸಿರುವೆನು.

ಉತ್ತರಾ:—(ಶೃಂಗಾರದಿಂದ) ಅಮ್ಮಯ್ಯಾ ಹಾಗಾದರೆ ಇದು ಸುಳ್ಳುಕೋಪವಲ್ಲ!—ಹೀಗೆ ಕೋಪಿಸುವುದಾದರೆ ಇಲ್ಲಿಗೆ ಏತಕ್ಕೆ ಬರೋಣವಾಯಿತು? ಏಕೆ ಮಾತಾಡುವುದಿಲ್ಲವೆ?

ರಾಗ ನಾಟಿಕುರಂಚಿ, ತಾಳ ರೂಪಕ

ಪ್ರಾಣೇಶನೆ ಮಾತನಾಡಿಸೊ। ಪ್ರಿಯಕಾಂತೆಯಾ ॥ ಪಲ್ಲ ॥
ಪ್ರಣಯ ಸಮಯವಿದುವೆ। ಮುನಿಸುವದಿದು ತರವೇ।
ಮೌನವ ಬಿಡು ರಮಣಾ। ಸನ್ನುತಾಂಗನೇ ವಿನೋದ।
ವಿನ್ನು ಸಾಕು ಸಹಿಸಲಾರೆ ॥ ೧ ॥

ಅಭಿ:— ಪುನಃ ಹೇಳುತ್ತೇನೆ ನಾನು ಮಾತಾಡುವುದಿಲ್ಲ, ಮಾತಾಡುವುದಿಲ್ಲ. ಎಲಾ ಮಾತಾಡುತ್ತ ಮಾತಾಡುತ್ತ ನಮ್ಮ ಪ್ರತಿಜ್ಞೆಯೇ ಭಂಗವಾಗುವುದಲ್ಲ!

ಉತ್ತರಾ:— ಎಲ್ಲಿ ನೋಡೋಣ-ಇದೇ ಏನು ನಿಮ್ಮ ಕೋಪ. ಛೇ ನಿಮಗೆ ಚೆನ್ನಾಗಿ ಬರುವುದಿಲ್ಲ. ಇದು ಡಂಭಾಚಾರದ ಕೋಪ.

ಅಭಿ:— ಹೌದು ಪ್ರೇಯೆ, ಸ್ತ್ರೀಯರ ಹಾಗೆ ಠಕ್ಕುತನದ ವಿದ್ಯೆಯು ಪುರುಷರಿಗೆ ಸಾಧಿಸುವುದಿಲ್ಲ.

ಉತ್ತರಾ:— ಪ್ರಿಯೆ, ಪ್ರಿಯೆ ಎಂದು ಇಲ್ಲಿ ಬಂದಾಗ್ಗೆ ಮಾತ್ರವೇ ಪ್ರೀತಿ. ಹೊರಟುಹೋದ ಮೇಲೆ ಎರಡೆರಡು ದಿವಸ ದರ್ಶನವೇ ಇಲ್ಲ. ಪುರುಷರ ಈ ಬಗೆಯ ಪ್ರೀತಿಯು ಸ್ತ್ರೀಯರಿಗೆ ತಲೆಭಾರವೆನಿಸುವುದು.

ಅಭಿ:— ಮತ್ತೆ, ತಲೆಭಾರವಾದ ಸ್ತ್ರೀಯರ ಪ್ರೇಮವು ಕೂಡಾ ಪುರುಷರಿಗೆ ಕೊಂಚ ಜಡವಾಗಿಯೇ ಪರಿಣಮಿಸುವುದು.

ಉತ್ತರಾ:— ಸುಮ್ಮನೆ ಏಕೆ ಸ್ತ್ರೀಯರ ಮೇಲೆ ಪುರುಷರದಿಷ್ಟೊಂದು ಕಟಾಕ್ಷ !

ಅಭಿ:—ಅದಕ್ಕೆ ಕಾರಣವು ನಿಮ್ಮಂತಹ ತರುಣಿಯರ ಚಂಚಲವಾದ ನೋಟ. ನೇತ್ರ ಕಟಾಕ್ಷದಿಂದ, ತೋರಿಸುವ ಅಭಿನಯಕ್ಕೆ ಪುರುಷನು ಜರ್ಜರನಾಗಿ ಹೋಗುವನು ;

ಉತ್ತರಾ:— ಆದರೆ ನಮ್ಮೊಡನೆ ನಿಮಗೆ ಇಷ್ಟೇಕೆ ವೈರಭಾವ ?

ಅಭಿ:— ಅದಕ್ಕೆ ಕಾರಣವು ನಿಮ್ಮ ಚಂಚಲವಾದ ಸ್ವಭಾವ.

ಉತ್ತರಾ:— ಎಲ್ಲವೂ ಗೊತ್ತಿದೆ. ಪುರುಷರಿಗೆ ಯಾವಾಗಲೂ ಬಹಳ ದುಡುಕು.

ಅಭಿ:— ಮತ್ತೆ ಸ್ತ್ರೀಯರೇನು ಬರೀ ಥಳಕು.

ಉತ್ತರಾ:— ಸಾಕಾಯಿತು ನನಗೆ ಈ ಶುಷ್ಕವಾದವು.

ಅಭಿ:— ಹಾಗಾದರೆ ಇನ್ನುಮೇಲೆ ರಸಭರಿತವಾದ ಮುದ್ದಿನ ಸಂವಾದ ವನ್ನು ಪ್ರಾರಂಭಿಸೋಣ. ಪ್ರಿಯೆ, ಇಂತಹ ಕಲಹದಿಂದ ಪ್ರೇಮ ಪ್ರಸಾದವು ಬಹು ರುಚಿಕರವೆನಿಸುವುದು. ಕಲಹದ ಪ್ರೇಮವು ದುಃಖಕ್ಕೆ ಕಾರಣವು ; ಆದರೆ ಪ್ರೇಮದ ಕಲಹವು ಸುಖಕ್ಕೆ ಸಾಧನವು!

ರಾಗ ಭೀಮಪಲಾಸ. ತಾಳ ತ್ರಿವಟಿ

ಪ್ರೇಮಕಲಹವಿದುವೆ । ಕಾಂತೆ । ಕಾಮೋತ್ಸವ ಶೃಂಗಾರಕೆ ರುಚಿಯೇ ॥ ಪಲ್ಲ ॥ ಚಾರುರಮಣಿಯ । ಪ್ರಣಯಕೋಪ । ಸಾರ ಸೌಖ್ಯದ ಕಾರಣವಿದುವೇ ॥

ಪ್ರೇಮಕಲಹದ ಪುಷ್ಪಾಂಜಲಿಯಲ್ಲಿ ಶೃಂಗಾರದ ಸುಗಂಧವು ಬಹು ಮನೋಹರವೆನಿಸುವುದು. ಬಾ, ಹೀಗೆ ಬಾ, ನನಗೆ ಒಮ್ಮೆ ಸುಖ ವಾಗಿ ಆಲಿಂಗನವನ್ನು ಕೊಡು. ಮತ್ತು ಈ ಕೋಮಲವಾದ ಅಧ ರಾಮೃತವನ್ನು ನೀಡು.

(ಅಭಿಮನ್ಯುವು ಉತ್ತರೆಯನ್ನು ತನ್ನ ಹತ್ತಿರ ಸೆಳೆಯುವನು. ಉತ್ತರೆಯು ಭಯ ದಿಂದ ಹಿಂದಕ್ಕೆ ಸರಿಯುವಳು.)

ಉತ್ತರಾ:—ನಾಸೊಲ್ಲೆ, ಪ್ರಿಯ, ಈ ಖಡ್ಗದಿಂದ ನನಗೆ ಬಹಳ ಭಯವೆನಿಸುವುದು. ಹೀಗೆ ತಾನೂ ಇದೇತಕ್ಕೆ ಬೇಕು, ತಮ್ಮ ಬಳಿಯಲ್ಲಿ?

ಅಭಿ:— ನಿಜವು; ನಿನ್ನ ಮಂದಿರದಲ್ಲಿ ಈ ಕತ್ತಿಯು ಸವತಿಯಂತೆ ಕಾಣುತ್ತಿರಬಹುದಲ್ಲವೆ?

ಉತ್ತರಾ:— ಅಹುದು ನಾಥಾ, ಈ ಸವತಿಯು ಒಂದಾನೊಂದು ದಿವಸ ನಮ್ಮೀರ್ವರ ಪ್ರೇಮವನ್ನು ಎಲ್ಲಿ ಭಂಗಿಸುವಳೋ ಏನೊ ಎಂದು ನನಗೆ ಭಯವೆನಿಸುವುದು. ಈ ಕತ್ತಿಗೆ ಅಧೀನರಾದ ಜೀವಿಗಳು ಪ್ರೇಮದ ಪಾಶವನ್ನು ಹರಿದು ಬೇಸಾಡುವರಂತೆ! ಪ್ರಾಣೇಶ್ವರಾ, ಈ ಸವತಿಯ ಸಹವಾಸದಿಂದ ನನ್ನನ್ನು ಬೇರೆ ದೂರಗೊಳಿಸುವುದಕ್ಕೆ ತಮ್ಮ ಮನಸ್ಸು ಕಠಿಣವಾಗಲಿಕ್ಕಿಲ್ಲವಷ್ಟೆ? ನನಗಂತೂ ಈ ಸವತಿಯನ್ನು ನೋಡಿದರೆ ಬೇಜಾರಾಗುವುದು.

ಅಭಿ:— ಪ್ರಿಯೆ, ಎಂತಹ ಹುಚ್ಚಿ ನೀನು. ನೀನು ನನ್ನ ಸಂಸಾರಕ್ಷೇತ್ರದ ಪ್ರೇಮ ದೇವತೆಯು, ಮತ್ತು ಈ ಖಡ್ಗವು ನನ್ನ ಮಂಗಲಕರವಾದ ರಣದೇವತೆಯು! ಇದಕ್ಕೆ ನೀನು ಭಯಪಡುವೆಯಾ? ನೋಡು ಒರೆಯ ಮಂದಿರದಲ್ಲಿ ವಿಶ್ರಾಂತಿಯನ್ನು ಹೊಂದುತ್ತ ಹೇಗೆ ಗಂಭೀರವಾಗಿ ಬಿದ್ದುಕೊಂಡಿದೆ! (ಹೊರಗೆ ತೆಗೆದು) ಶತ್ರುಗಳ ಬಿಸಿಬಿಸಿಯಾದ ರಕ್ತದಿಂದ ಇದರ ತೃಷೆಯನ್ನು ನೀಗಿಸಲೇ ಬೇಕು. ವೈರಿಗಳ ನೆತ್ತರದ ಬಣ್ಣದಿಂದ ಇದರ ಶೃಂಗಾರ ವಿಲಾಸದ ಮೊಗ್ಗೆಯನ್ನು ಅರಳಿಸಬೇಕು. ನೋಡು, ಎಷ್ಟು ತೇಜಸ್ವಿಯಾಗಿದೆ.

ಉತ್ತರಾ:— ಬೇಡ. ಬೇಡ ನನಗೆ ಈ ನಾಗಿಣಿಯ ದರ್ಶನವೇ ಬೇಡ. ನಾಥಾ ನನ್ನ ಮುಂದೆ ಇದರ ಹೆಚ್ಚಳವನ್ನು ವರ್ಣಿಸಬೇಡಿರಿ. ಅದನ್ನು ಮೊದಲು ದೂರಿಡಿರಿ.

ಅಭಿ:— ನಿಜವಾಗಿಯೂ ಸ್ತ್ರೀಜಾತಿಯು ಮಹಾ ಮತ್ಸರಿಯು. ಇಕೋ (ಕತ್ತಿಯನ್ನು ಎಸೆದು)ನೋಡು, ಈ ನನ್ನ ಪ್ರೇಮ ದೇವತೆಗೋಸುಗ, ಈ ನನ್ನ ಕರ್ತವ್ಯದ ಕಠೋರ ದೇವತೆಯನ್ನು ನಾನೊಂದರಕ್ಷಣ ದೂರವಾಗಿರಿಸುವೆನು. ಈಗ ನಿನಗೆ ಸಮಾಧಾನವೆನಿಸಿತೊ—

ಉತ್ತರಾ:—ಮತ್ತು ಈ ಭೀಕರವಾದ ವೀರಾವೇಶದ ಉಡುಪನ್ನು ತೆಗೆದು

ಹಾಕಿರಿ. ಅದು ನನಗೆ ಚೆನ್ನಾಗಿ ಕಾಣುವದಿಲ್ಲ.

ಅಭಿ:— ಅಂದರೆ, ನಿನ್ನ ಅಭಿಪ್ರಾಯವಾದರೂ ಏನು?

ಉತ್ತರಾ:— ಈ ಪ್ರಣಯ ವೀರನನ್ನು ಈ ದಿವಸ ನಾನು ಪುಷ್ಪವೇಷದಿಂದ ಅಲಂಕರಿಸಬೇಕಾಗಿದೆ. ಮತ್ತೆ—

ಅಭಿ:— ಮತ್ತೇನು? ನನ್ನನ್ನು ಪ್ರಣಯದ ಮಂಜುಳವಾದ ಗಾಯನ ನೃತ್ಯ ವನ್ನು ನೋಡಲಿಕ್ಕೆ ಹಚ್ಚುವಿಯೋ ಏನು?

ಉತ್ತರಾ—: ಹೌದು, ನಿಶ್ಚಯವಾಗಿ ಹಾಗೆಯೇ ಮಾಡುವೆನು.

ಅಭಿ:— ಸ್ತ್ರೀಯರು ಪುರುಷರನ್ನು ಕಡೆಗಣ್ಣಿನ ತಾಳಗತ್ತಿನಮೇಲೆ ಕುಣಿಸುವದೇನೋ ನಿಜ. ಆದರೆ ಅದಕ್ಕೇನಾದರೂ ಸ್ವಲ್ಪ ಮರ್ಯಾ ದೆಯು ಬೇಕಲ್ಲವೆ?

ಉತ್ತರಾ:— ಏಕಾಂತದಲ್ಲಿ ಕೂಡ ಸ್ತ್ರೀಯರು ಮರ್ಯಾದೆಯ ಮನಸು ಕಿಟ್ಟುಕೊಂಡಿರಬೇಕೆ.? ಚೆನ್ನಾಗಿದೆ. ಅದೇನು ಇಲ್ಲ; ಈ ದಿವಸ ತಾವು ನನ್ನ ಅಪೇಕ್ಷೆಯನ್ನು ಪೂರ್ಣಗೊಳಿಸಲೇ ಬೇಕು.

ಅಭಿ:— ಛೇ. ಇದೇನೆ, ನಾನು ನಿನ್ನ ಮನಸ್ಸಿನಂತೆ ಕುಣಿಯಲೇ ಹೇಗೆ?

ಉತ್ತರಾ:— ನಾನೂ ನಿಮ್ಮ ಜೊತೆಗೆ ಕುಣಿಯುವೆನು. ಮಿಂಚು ಕುಣಿ ಯಲಿಕ್ಕೆ ಪ್ರಾರಂಭಿಸಿದ ಕೂಡಲೆ ಆಕಾಶದ ಅಂಗಣದಲ್ಲಿ ಮೇಘಗಳು ಸಹ ಉಲ್ಹಾಸದಿಂದ ಗರ್ಜನೆಮಾಡುತ್ತ ಕುಣಿಯಲಿಕ್ಕೆ ಪ್ರಾರಂಭಿ ಸುತ್ತವೆ.

ಅಭಿ:— ಕೊನೆಗೆ ಪಶ್ಚಾತ್ತಾಪದಿಂದ ಮಳೆಯ ಕಣ್ಣೀರು ಸುರಿಸುತ್ತದೆ. ಅದರಂತೆ ನಾನೂ ಕಣ್ಣೀರಿನ ಮಳೆಯನ್ನು—

ಉತ್ತರಾ:—ಇದೇನು, ಶೃಂಗಾರಸಮಯದಲ್ಲಿ ಹಾಳು ಮಾತು.

ಅಭಿ:— ಹಾಗಾದರೆ ನೀನು ಮಾಡುವುದು ಒಳ್ಳೇರೀತಿಯೇ? ಸ್ವತಃ ಕುಣಿದು ಮತ್ತೊಬ್ಬರನ್ನು ಕುಣಿಸುವಂತಹ ಕಲೆಯನ್ನಾದರೂ ನೀನು ಎಲ್ಲಿ ಕಲಿತೆ.?

ಉತ್ತರಾ:—ಎಲ್ಲಿ ಎಂದರೆ–ನಮ್ಮ ತಂದೆಯವರ ಸಂಗೀತ ಶಾಲೆಯಲ್ಲಿ.

ಅಭಿ:— ಓಹೊ, ವಿರಾಟರಾಜನ ಈ ಪ್ರೀತಿಯ ಕನ್ಯಾರತ್ನವು ಅಲ್ಲಿ ರಂಗ ದೇವತೆಯಾದದ್ದನ್ನು ನಾನು ಮರತೇ ಬಿಟ್ಟಿದ್ದೆನು.

ಉತ್ತರಾ:— ಅಲ್ಲಿಯೇ ನನಗೆ ಮಾವನವರು ಗಾಯನ ನರ್ತನವನ್ನು ಕಲಿಸಿದರು.

ಅಭಿ:— ಏನು ? ಯಾರು, ನಮ್ಮ ತಂದೆಯವರೆ ?

ಉತ್ತರಾ:— ಅಹುದು,ಆ ಕಾಲಕ್ಕೆ ಅಜ್ಞಾತವಾಸದಲ್ಲಿ ಅವರು ಬೃಹನ್ನಳೆಯಾಗಿ ನಮ್ಮ ಮನೆಯಲ್ಲಿಯೆ ವಾಸವಾಗಿದ್ದರು. ನಿಜವಲ್ಲವೆ?

ಅಭಿ:— ಹೌದು. ನಿಜವು. ಈ ವಿದ್ಯೆಯನ್ನು ನಿನಗೆ ನಮ್ಮ ತಂದೆಯವರು ಕಲಿಸಿದರೆಂದು, ಅದನ್ನು ನೀನು ನನಗೆ ಕಲಿಸತಕ್ಕವಳೇನು ?

ಉತ್ತರಾ:—ಅಹುದು. ಮಾವನವರ ವಿದ್ಯೆಯಲ್ಲಿಯ ಯಾವತ್ತು ಗುಣಗಳು ತಮ್ಮಲ್ಲಿವೆ. ಇದೊಂದು ಗುಣವಿಲ್ಲ-ಅದನ್ನು ನಾನು ತಮಗೆ ಕಲಿಸುತ್ತೇನೆ.

ಅಭಿ:-- ಉತ್ತರೆ, ನೀನು ಬಹು ಚತುರೆಯು. ಈ ಯುಕ್ತಿವಾದದಿಂದ ನನ್ನನ್ನು ಮಾತಾಡದಂತೆ ಮಾಡಿದಿ.

ಉತ್ತರಾ:— ಹಾಗಾದರೆ, ಏಳಿ, ಪುಷ್ಪದ ಉಡುಪು ತೊಡಿಸುತ್ತೇನೆ. ಏನೆ ಮಲ್ಲಿಕೆ,ಚಂದ್ರಿಕೆ(ಅಭಿಮನ್ಯು ಉತ್ತರಾ ಹೋಗುವರು) (ದಾಸಿಯರು ಬರುವರು)

ಚಂದ್ರಿಕಾ:— ಅಮ್ಮಯ್ಯ, ಅದೋ ರಾಣಿಯವರು ಮಹಾರಾಜರಿಗೆಸ್ವತಃ ತಾವೇ ಪುಷ್ಪವೇಷವನ್ನು ತೊಡಿಸುತ್ತಿರುವರು.

ಮಲ್ಲಿಕಾ:— ಮತ್ತು ಆ ವೇಷವನ್ನಾದರೂ ಬಹು ಪರಿಶ್ರಮದಿಂದ ರಾಣೀಸಾಹೇಬರೇ ಸಿದ್ಧಪಡಿಸಿರುವರು.

ಚಂದ್ರಿಕಾ:— ಅ ಹ ಹ ಮಹಾರಾಜರಿಗೆ ಪುಷ್ಪವೇಷವು ಎಷ್ಟು ಸುಂದರವಾಗಿ ಒಪ್ಪುವುದು !

ಮಲ್ಲಿಕಾ:— ಮೂರ್ತಿಮಂತ ಮದನರಾಜನೆ ! ಅಮ್ಮಯ್ಯ ಉಭಯತರು ಇತ್ತಲೇ ಬರುತ್ತಿರುವರು.

ರಾಗ ಖಮಾಚ. ಆದಿತಾಳ

ಭೂತಲಕೀಗಾ । ಮದನನಿಳಿದನೇ । ಅತಿ ಸಡಗರದಲಿ । ಬರುವನು।
ತಾನೇ ॥ ಪಲ್ಲ ॥ ಕುಸುಮದ ಸುಮಾಲೆಯಾ । ತೋಷಾತುರದಲಿ।
ಕರದೊಳ ಧರಿಸಿ । ಶಶಿವದನೆಯರನು ಮರುಳುಗೊಳಿಸುತಾ ॥ ೧॥

(ದಾಸಿಯರು ಹೋಗುವರು. ಕೈಯ್ಯಲ್ಲಿ ಪುಷ್ಪ ಧನುರ್ಬಾಣಗಳನ್ನು ಹಿಡಿದು ಶರ ಸಂಧಾನಮಾಡುತ್ತ ಅಭಿಮನ್ಯು ಪ್ರವೇಶಿಸುವನು; ಉತ್ತರೆಯು ಭಯಪಟ್ಟಂತೆ ಆವಿರ್ಭಾವ ತೋರಿಸುವಳು)

ಉತ್ತರಾ;— ಆಹಾ, ಪ್ರತ್ಯಕ್ಷ ಮದನನ ಪ್ರೀತಿಯ ಬಾಣವೆ ಪ್ರಿಯಕರಾ ಈ ಶರಘಾತವನ್ನು ಕೋಮಲಾಂಗನೆಯಾದ ನಾನು ಸಹಿಸುವುದು ಸಾಧ್ಯವೆ?

ರಾಗ ಗಾರಾ. ತಾಳ ರೂಪಕ

ಸಹಿಸೆ ನಾ ಕುಸುಮಶರಘಾತವಾ। ಬಹುಪರಿ ಪ್ರಣಯದ ಸರಸ ಸಾಕು ॥ ಪಲ್ಲ ॥ ಪ್ರಹರಣ ತಗಲಿಸಿ ನವಯುಪತಿಯನತಿ । ಶ್ರಮ ಪಡಿಸುವೆ ॥ ಅ. ಪ. । ಚಾರುವೀರರತಿ ಶೃಂಗಾರಾ । ಸೂರೆಗೊಳಿಸಿ ಪ್ರೇಮದಿ ಚತುರಾ । ಅರಸಿಯ ಸುಮನಸ ಮರುಳುಗೊಳಿಸಿ ॥ ೧ ॥

ತಡೆಯಿರಿ ತಡೆಯಿರಿ; ಈ ಪ್ರೀತಿಯ ಶರಸಂಧಾನವನ್ನು ನಿಲ್ಲಿಸಿ, ಕೆಲ ಹೊತ್ತು ಸ್ವಸ್ಥರಾಗಿ ನಿಂತುಕೊಳ್ಳಿರಿ. ಎಂದರೆ ನಾನು ಈ ಮದನ ಮೂರುತಿಯನ್ನು ನನ್ನ ಕಣ್ಣಲ್ಲಿ ಬಚ್ಚಿಟ್ಟುಕೊಳ್ಳುವೆನು. ಹಾ ಸ್ವಲ್ಪ ಕೂಡ ಅಲಿದಾಡಕೂಡದು. ನಾಥಾ ಈಗ ತಮ್ಮ ನೇತ್ರಯುಗದಲ್ಲಿ ಒಳ್ಳೇ ಚಮತ್ಕಾರ ಕಾಣುವುದು.

ಅಭಿ:— ಏನು ಕಾಣುವದು? ಚೆನ್ನಾಗಿ ನೋಡು ನನ್ನ ನೇತ್ರಯುಗದಲ್ಲಿ ನಿನಗೆ ಏನು ಕಾಣುವುದು, ಹೇಳು.

ಉತ್ತರಾ:—ಮತ್ತೇನು ಕಾಣುವುದು, ಈ ನೇತ್ರಯುಗದಲ್ಲಿ ನನಗೆ ನನ್ನ ಪೂರ್ವ ಪುಣ್ಯದ ಅನಂತ ಯುಗಗಳು ಕಾಣುವವು ಮತ್ತು ಇದೇ ವಿಶಾಲವಾದ ದೃಷ್ಟಿ-ದರ್ಪಣದಲ್ಲಿ ನನ್ನ ಭಾವೀ ಭಾಗ್ಯದ ಕೋಟಿ ಬ್ರಹ್ಮಾಂಡಗಳು ತುಂಬಿಕೊಂಡಂತೆ ಕಾಣುವವು. ಮನೋಹರ, ಇನ್ನು ಸಾಕುಮಾಡಿರಿ; ಈ ಪ್ರೀತಿಯ ನೋಟವನ್ನು.

ಅಭಿ:— ಬೇಡವೇ ಹಾಗಾದರೆ, ಮತ್ತೆ ಬಾಣದಿಂದಲೇ ಘಾತಿಸುವೆನು.

ಉತ್ತರಾ:— ಅಯ್ಯೋ ಇದೆಂತಹ ಒರಟುತನವು? ಇರಲಿ ಈ ವೀರರನನ್ನು

ಚೆನ್ನಾಗಿ ಶಿಕ್ಷಿಸುತ್ತೇನೆ. ಎನೆ ಸೌದಾಮಿನಿ, ವಿಲಾಸಿನಿ, ನಾನು ಈ ವೀರನನ್ನು ಬಂಧನದಲ್ಲಿರಿಸುತ್ತೇನೆ,

ಅಭಿ:— ಎಲ್ಲಿ ಬಂಧನ? ಹೃದಯದ ಸೆರೆಮನೆಯಲ್ಲಿಯೆ? ಯಾವ ಶೃಂಖಲೆಯಿಂದ?

ಉತ್ತರಾ:—ಪ್ರಣಯ ಶೃಂಖಲಾ (ದಾಸಿಯರು ಪುಷ್ಪಾಹಾರವನ್ನು ತಂದುಕೊಡುವರು. ಉತ್ತರೆಯು ಅದನ್ನು ಅಭಿಮನ್ಯುವಿನ ಕೈಗೆ ಕಟ್ಟುವಳು)

ಅಭಿ:— ನನ್ನ ಮುದ್ದೆ, ಇಂತಹ ಸೊಗಸಾದ ಬಂಧನವು ಯಾವ ಪ್ರಣಯ ವೀರನಿಗೆ ರುಚಿಸಲಿಕ್ಕಿಲ್ಲ? ಈ ಪ್ರೇಮಪಾಶವನ್ನು ಭೇದಿಸುವುದು ಎಂತಹ ವೀರನಿಗೂ ಸಾಧ್ಯವಿಲ್ಲ. ರಣಾಂಗಣದಲ್ಲಿ ಶತ್ರುಗಳ ಚಕ್ರವ್ಯೂಹವನ್ನು ಭೇದಿಸಬಹುದು, ಆದರೆ ಚತುರವನಿತೆಯ ಪ್ರೇಮ ವಿಲಾಸದ ಚಕ್ರವ್ಯೂಹವನ್ನು—

ಮೋಘ:— (ಪ್ರವೇಶಿಸಿ) ಮಹಾರಾಜ, ಚಕ್ರವ್ಯೂಹವು ! ಚಕ್ರವ್ಯೂಹವು !!

ಅಭಿ:— ಯಾರು. ಮೋಘನಾದನೇ? ಯುದ್ಧದ ನವೀನ ವರ್ತಮಾನವೇನು?

ಮೋಘ:— ಮಹಾರಾಜ, ಇದೇ ಇದೇ. ದ್ರೋಣಾಚಾರ್ಯರು ಚಕ್ರವ್ಯೂಹವನ್ನು ರಚಿಸಿರುವರು. ಪ್ರಸಂಗವು ಭಯಂಕರವಾಗಿದೆ. ಈ ದಿವಸ ಎಲ್ಲ ಪಾಂಡವರು ಚಿಂತಾತುರರಾಗಿರುವರು.

ಅಭಿ:— ಸರಿ ಸರಿ. ಈ ವೀರ ಅಭಿಮನ್ಯುವಿಗೆ ಅದೇನು ಅಸಾಧ್ಯವಲ್ಲ. ಚಕ್ರವ್ಯೂಹವನ್ನು ಭೇದಿಸಿ, ಸರ್ವರ ಚಿಂತೆಯನ್ನು ಪರಿಹರಿಸುವೆನು. ಪ್ರಿಯೇ, ನನ್ನ ಕರ್ತವ್ಯವು ನನ್ನನ್ನು ಕೂಗಿ ಕರೆಯಹತ್ತಿದೆ; ಹೂ, ಜಾಗ್ರತೆಯಾಗಿ ಪುಷ್ಪವೇಷವನ್ನು ತೆಗೆ. ನನ್ನ ಖಡ್ಗವನ್ನೂ ವೀರ ವೇಷವನ್ನೂ ತಂದುಕೊಡು. ಎಲೇ ಪುಷ್ಪವೇಷವೇ, ನಿನ್ನ ನಡಗರದ ಸಹವಾಸದ ಸೊಬಗಿನಲ್ಲಿ ನಾನು ನನ್ನ ಕಠೋರ ಕರ್ತವ್ಯವನ್ನು ಮರೆತು, ಶೃಂಗಾರದಲ್ಲಿ ತನ್ಮಯನಾಗಿದ್ದೆನು ನಡೆ ಇನ್ನು, ವೀರವೃತ್ತಿಗೆ ವಿರೋಧವಾಗುವಂತಹ ನಿನ್ನ ಸಮಾಗಮವು ನನಗೆ ಬೇಡವೇ ಬೇಡ.

(ಪುಷ್ಪ ವೇಷವನ್ನು ತೆಗೆದೊಗೆಯುವನು)

ಉತ್ತರಾ:— ನಾಥಾ, ಬೇಡ ಬೇಡ. ನನ್ನ ಪ್ರೇಮಪಾಶವನ್ನು ಹರಿದು ಬಿಸಾಡಬೇಡಿರಿ.

ಅಭಿ:— ಪವಿತ್ರ ಕರ್ತವ್ಯಕ್ಕೋಸುಗ ನಿನಗೂ ನಿನ್ನ ಪ್ರೇಮಕ್ಕೂ ಅಷ್ಟೇ ಅಲ್ಲ—ಪಂಚಪ್ರಾಣಗಳನ್ನು ಕೂಡ ಕ್ರೂರಕಾಲನ ಪಾದದೆಡೆಯಲ್ಲಿ ಬಿಸಾಡುವದಕ್ಕೂ ಈ ಪಾರ್ಥಪುತ್ರನಾದ ಅಭಿಮನ್ಯುವು ಭಯಪಡ ತಕ್ಕವನಲ್ಲ. ತಿಳಿಯಿತೆ ?

ರಾಗ ದೇಸಕಾರ, ತಾಳ ತ್ರಿವಟ.

ಮೋಹಕೆ ಪರವಶನಾದೇ । ಸಾಹಸದಿ ಲೋಕಸೇವೆ ಗೈಯದಲೆ
ಸ್ವಕುಲಾಧಮನಾದೆ ॥ ಪಲ್ಲ ॥ ಪಾರ್ಥನುದರದೀ । ವ್ಯರ್ಥ ಜನಿಸಿದೆ
ಸ್ವಾರ್ಥಸೌಖ್ಯವಾ ಬಯಸಿದೆ ನಿರಂತರ ॥ ೧ ॥

ಮೇಘನಾದಾ, ನಡೆ ಹೋಗೋಣ. (ಆವೇಶದಿಂದ ಹೋಗುವನು)

ಉತ್ತರಾ:— ಹಾಯ್, ನಾಥಾ, ನಾಥಾ. (ಮೂರ್ಛೆ ಹೊಂದುವಳು)

---

೪ ನೆಯ ಪ್ರಸಂಗ

(ಜಂಗಲ ರಸ್ತೆ. ಒಂದು ಬದಿಯಿಂದ ಸೌದಾಮಿನಿಯೂ ಇನ್ನೊಂದು ಬದಿಯಿಂದ ಮೇಘನಾದನೂ ಬರುವರು.)

ಮೇಘ:— (ಸ್ವಗತ) ಧಿಕ್ಕಾರ ಧಿಕ್ಕಾರವಿರಲಿ, ಈ ಸ್ತ್ರೀಯರ ಖೋಟಿ ಸ್ವಭಾವಕ್ಕೆ.

ಸೌದಾ:— (ಸ್ವಗತ) ಬೆಂಕಿ ಹಚ್ಚಲಿ. ಈ ಪುರುಷರ ನೀಚಸ್ವಭಾವಕ್ಕೆ !

ಮೇಘ:— (ಸ್ವಗತ) ಪರಮೇಶ್ವರಾ, ಪುರುಷರನ್ನು ಸ್ತ್ರೀಯರು ತಮ್ಮ ಮನಸ್ಸಿಗೆ ಬಂದಂತೆ ಕುಣಿಸುತ್ತಿರುವರು. ಇದು ನ್ಯಾಯವೇ ? ಈ ಸ್ತ್ರೀ ಜಾತಿಯನ್ನು ಇದಕ್ಕೋಸುಗವೇ ನಿರ್ಮಿಸಿದೆಯಾ ?

ಸೌದಾ:— (ಸ್ವಗತ) ದೇವಾ, ಪುರುಷರು ಸ್ತ್ರೀಯರನ್ನು ಜೋಡಿಗಿಂತ ಕಡೆಯಾಗಿ ತಿಳಿಯುವರು. ಹೆಜ್ಜೆಹೆಜ್ಜೆಗೆ ಒದಿಕೆಹಾಕುವರು. ಇದಕ್ಕೋಸುಗವೇ ಈ ನಿಷ್ಠುರ ಜಾತಿಯನ್ನು ನಿರ್ಮಿಸಿದೆಯಾ ?

ಮೇಘ:— ಅಯ್ಯೋ ವಿಧಿಯೆ, ಈ ಸ್ತ್ರೀಯರು ನನ್ನನ್ನು ಹೇಗೆ ಕುಣಿಸಿದರು!

ಇಂದಿನ ವರೆಗೆ ನಾನು ಒಬ್ಬರಿಂದಲೂ ಅವಮಾನಪಟ್ಟವನಲ್ಲ. ಆದರೆ ಆ ಪರಸ್ತ್ರೀಯರು ನನ್ನ ದುರ್ದೆಶೆಯನ್ನು ಚನ್ನಾಗಿ ಮಾಡಿದರು ಮತ್ತು ಮನೆಯ ಹೆಂಡತಿಯು ಪರಿಕೆಯಿಂದಲೂ ಏಟು ಹಾಕಿದಳು, ಇರಲಿ ಮೆಲ್ಲಕೆ ಮಾತಾಡೋಣ. ಇಲ್ಲವಾದರೆ ಪುನಃ ಏಟುಗಳು ಬಂದಾವು ಬೆನ್ನಮೇಲೆ—

ಸೌದಾ:— ಈ ಪುರುಷರು ಎಂತಹ ವಿಚಾರಶೂನ್ಯರು. ಚಿಕ್ಕ ಮಹಾರಾಜರು ರಾಣೀಸಾಹೇಬರನ್ನು ಲಕ್ಷಿಸದೆ ಹೊರಟು ಹೋದರು. ಪಾಪ, ಅವರು ಮೂರ್ಛಿತರಾಗಿ ಭೂಮಿಗೆ ಬಿದ್ದರೂ ಆ ವಿಷಯವಾಗಿ ಚಿಕ್ಕ ಮಹಾರಾಜರಿಗೆ ಏನಾದರೂ ಸ್ವಲ್ಪ ದಯಾ ಮಾಯಾ! ಇಲ್ಲವೆ ಇಲ್ಲ. ಈ ಪುರುಷರ ಜಾತಿಯನ್ನು ಸ್ವಲ್ಪ ರಾಕ್ಷಸ ಜಾತಿಗೇ ಹೋಲಿಸಬಹುದು ಹಾಗೆಯೇ ನಮ್ಮ ಪತಿರಾಜರು.

ಮೋಘ:— ಹಾಗೇ ನಮ್ಮ ರಾಣೀಸಾಹೇಬರು. ಈ ಸ್ತ್ರೀಯರು ನೋಡುವುದಕ್ಕೆ ಮನೋಹರ, ಆದರೆ ಹೃದಯವು ಕಠೋರ. ಅವರ ಮುಖವನ್ನು ಸಹ ನೋಡಬಾರದು.

ಸೌದಾ:— ಛೀ ತಾಯಿ, ಪುರುಷರ ಮುಖವನ್ನು ಸಹ ನೋಡಬಾರದು. (ಇಬ್ಬರೂ ಎದುರುಬದುರಾಗಿ ಹಾಯುವರು. ಸೌದಾಮಿನಿಯು ಕೋಪಿಸುವಳು ಮೋಘನಾವನು ಗಾಬರಿಯಾಗುವನು) ಅಮ್ಮಯ್ಯಾ, ಯಾರದು? ತಮ್ಮ ಸ್ವಾರಿಯೇ? ಕಣ್ಣು ಹೋದವೇನು? ಸ್ವಲ್ಪ ಮುಂದು ನೋಡಿ ಮೆಲ್ಲಗೆ ನಡೆಯಿರಿ.

ಮೋಘ:— ನೆಟ್ಟಗೆ ನಡೆಯುವ ವಿಷಯವಾಗಿ ಮೊದಲು ಸ್ತ್ರೀಯರು ಎಚ್ಚರವಾಗಿರಬೇಕು.

ಸೌದಾ:— ಯಾಕೆ, ಕಣ್ಣುಗಳು ನೆತ್ತಿಗೆ ಏರಿದವೇನು?

ಮೋಘ:— (ಮೇಲೆ ನೋಡಿ) ದೇವರ ಪ್ರಾರ್ಥನೆಗೋಸ್ಕರ! ಭಗವಂತಾ, ಈ ಪುರುಷನನ್ನು ಈ ಸ್ತ್ರೀಯರ ಬಂಧನದೊಳಗಿಂದ ಬೇಗನೆ ರಕ್ಷಿಸು. ಹೇ, ಅನಂತ ಆಕಾಶಸ್ಥ ದೇವತೆಗಳಿರಾ, ಈ ನಿಮ್ಮ ಪ್ರೀತಿಯ ಬಾಲಕನಿಗೆ ಇಷ್ಟು ಆಶೀರ್ವಾದವನ್ನು ದಯವಿಟ್ಟು ಮಾಡಿರಿ.

ಸೌದಾ:— ಅದೇಕೆ, ಸ್ತ್ರೀಯರ ಮೇಲೆ ಇಷ್ಟೇಕೆ ನಿಮ್ಮ ವಕ್ರದೃಷ್ಟಿ?

ಮೋಘ:— (ಸ್ವಗತ) ಕೃಪಾದೃಷ್ಟಿಗೆ ಅವಕಾಶವಿಲ್ಲ. (ಪ್ರ) ಬೇಡಪ್ಪಾ ತಪ್ಪಾಯಿತು. ಇನ್ನು ಮುಂದೆ ಹೀಗೆ ಮಾತಾಡುವುದಿಲ್ಲ.

ಸೌದಾ:— ಪುರುಷನಿಗೆ ಸ್ತ್ರೀಯೆಂದರೆ ಇಷ್ಟದೇವತೆ!

ಮೋಘ:— (ಸ್ವಗತ) ಅನಿಷ್ಟ ದೇವತೆ. (ಪ್ರ) ಆದರೆ ಸತಿಗೆ ಪತಿಯೆಂದರೆ ಪರಮೇಶ್ವರ ಸಮಾನನಲ್ಲವೆ?

ಸೌದಾ:— ನಿಮ್ಮಂಥ ಪತಿದೇವರ ಪೂಜೆಯನ್ನು ಹೀಗೇಮಾಡಬೇಕು. (ಹೊಡೆಯುವಳು) ಮಾತಾಡಿರಿ, ನಾನು ನಿಮಗೆ ಇಷ್ಟದೇವತೆಯಲ್ಲವೆ? ಒಪ್ಪಿಕೊಳ್ಳಿರಿ, ಒಪ್ಪಿಕೊಳ್ಳಿರಿ.

ಮೋಘ:— ಒಪ್ಪಿದೆ ಒಪ್ಪಿದೆ. ಇಷ್ಟದೇವತೆಯಿರುವಿ; ಪೂಜ್ಯಳಾಗಿರುವಿ ವಂದ್ಯಳಾಗಿರುವಿ! ದೇವತೆ, ನಿನ್ನ ಗುಣಾನುವಾದವನ್ನು ಎಷ್ಟೆಂದು ವರ್ಣಿಸಲಿ. ಹೇ ಚಂಡಿಕೆ, ಪ್ರಸನ್ನಳಾಗಿ ಕೋಪವನ್ನು ಶಾಂತಗೊಳಿಸು.

ಸೌದಾ:— ಇಂದಿನಿಂದ ನೀವು ನನ್ನ ಅರ್ಧ ವಚನದಂತೆ ನಡೆಯುವಿರಷ್ಟೆ?

ಮೋಘ:— ಅದೇಕೆ, ನಾನೇನು ಅರೆಗಚ್ಚು ಮನುಷ್ಯನಲ್ಲ.

ಸೌದಾ:— ಏನು, ಏನು ಮಾತಾಡಿದಿರಿ? ಇಂದಿನಿಂದ ನೀವು ನನ್ನ ಅರ್ಧ ವಚನದಂತೆ ನಡೆಯುವಿರಷ್ಟೆ!

ಮೋಘ:— ಅರ್ಧವೇಕೆ, ಸಂಪೂರ್ಣ ವಚನದಂತೆ ನಡೆಯುವೆನು. ಇಗೋ ತೆಗೆದುಕೊ ವಚನವನ್ನು.

ಸೌದಾ:— ಹಾಗಾದರೆ ಕೇಳಿರಿ. ಚಿಕ್ಕ ಮಹಾರಾಜರು ಯುದ್ಧಕ್ಕೆ ಹೊರಟಿರುವರು. ಅವರ ಜೊತೆಯಲ್ಲಿ ನೀವು ಹೋಗಲೇಬೇಕು. ನನ್ನ ಆಜ್ಞೆಯಿದು. ಏಕೆ ತಿಳಿಯಿತೇ?

ಮೋಘ:— (ಸ್ವಗತ) ನಿನ್ನ ಆಜ್ಞೆಯೆಂದರೆ ದೇವಾಜ್ಞೆಯೇ ಅದು. (ಪ್ರಕಾಶ) ಒಳ್ಳೇದು ನಿನ್ನ ಆಜ್ಞೆಯು ಶಿರಸಾವಮಾನ್ಯವಿದೆ.

ಸೌದಾ:— ನಡೆಯಿರಿ ಇನ್ನು ಮನೆಗೆ. ನಿಮ್ಮ ಪರಾಕ್ರಮವನ್ನು ನೋಡುತ್ತೇನೆ.

ಸಂವಾದ

ನೋಡುವೆ ನಿಮ್ಮ ಪರಾಕ್ರಮವಾ। ಪೋಗಿರಿ ಕಾಳಗಕೇ
ಹುಡುಗಾಟ ಸಾಕು ಬಲ್ಲೆನೆಲ್ಲವ ಜಾಣತನದ ಬಗೆಯ।

ವೋಷ:—

ಮುದ್ದು ಚಿನ್ನವೇ ಆಗಲಿ ನಿನ್ನನೂ। ಯುದ್ಧಕೆಂತು ನಾ ಪೋಗ
ಲಿಯೇ ॥ ಇದ್ದು ಮನೆಯೊಳೂ। ವೀರತನದಲಿ। ಕದ್ದು ತಿನ್ನುತೇ
ಯುದ್ಧವ ಗೈಯುವೆ ನಿನ್ನೊಡನೇ ಸತಿಯೇ ॥ ೧ ॥

ಹೂ, ನಡೆ ಮನೆಗೆ, ನನ್ನ ಪರಾಕ್ರಮವನ್ನು ತೋರಿಸುತ್ತೇನೆ. ಆದರೆ ಯುದ್ಧದ ಹೆಸರು ಮಾತ್ರ ತೆಗೆಯಬೇಡ. ಪರಮೇಶ್ವರಾ, ಧಿಕ್ಕಾರ ಧಿಕ್ಕಾರವಿರಲಿ ಈ ಸ್ತ್ರೀಯರಿಗೆ. (ಉಭಯತರು ಹೋಗುವರು.)

ಐದನೆಯ ಪ್ರಸಂಗ

(ಪಾಂಡವರ ಬಿಡಾರ. ಧರ್ಮರಾಜನು ಚಿಂತಾತುರನಾಗಿರುವನು. ಸಮೀಪದಲ್ಲಿ ಭೀಮನು ನಿಂತಿರುವನು.)

ಭೀಮ:— ಧರ್ಮರಾಜಾ! ನಿನ್ನಿನಿಂದ ವಿಜಯ ದೇವತೆಯು ನಮಗೇ ಪ್ರಸನ್ನಳಾಗಿರುವಳು. ನಿನ್ನೆ ವೀರ ಪಾರ್ಥನಿಂದ ದ್ರೋಣಾಚಾರ್ಯರು ಪರಾಜಿತರಾದರು. ನಮ್ಮ ಆನಂದಕ್ಕೆ ಕಳೆಯೇರಿತು. ಇನ್ನು ಮತ್ತೇಕೆ ಚಿಂತಿಸುವಿರಿ.

ಧರ್ಮ:— ಭೀಮಾ, ಯುದ್ಧದಲ್ಲಿ ಯಶಾಪಯಶದ ವಿಚಾರ ಮಾಡುವುದು ನಿರರ್ಥಕವು. ಸಮರಾಂಗಣದಲ್ಲಿ ಎದೆಗೆ ಎದೆ ಕೊಟ್ಟು ಶತ್ರುಗಳೊಂದಿಗೆ ಹೋರಾಡುತ್ತಿರಲು ಯಶಾಪಯಶವು ದೈವಾಧೀನವು. ನನ್ನ ಅಭಿಪ್ರಾಯದಂತೆ ಇಂದಿನವರೆಗೆ ವಿಜಯವು ಉಭಯ ಪಕ್ಷದವರಿಗೂ ಸಮಪ್ರಮಾಣದಲ್ಲಿದೆ.

ಭೀಮ:— ಕೊನೆಗೆ ನಮ್ಮ ಪಕ್ಷಕ್ಕೆ ಯಶವು ದೊರೆಯುವದೇ ಖಂಡಿತವು.

ಧರ್ಮ:— ಆದರೆ ಈ ದಿವಸದ ಹೊಸ ವರ್ತಮಾನವೇನು?

ನಕುಲ:— (ಪ್ರವೇಶಿಸಿ) ಈ ದಿವಸ ಯುದ್ಧದ ಬಣ್ಣವೆ ಬದಲಾಗಿದೆ. ಸಂಶಪ್ತಕರು ಪುನಃ ಹುರಿಗೊಂಡು ಯುದ್ಧವನ್ನು ಪ್ರಾರಂಭಿಸಿರುವರು. ಶ್ರೀಕೃಷ್ಣನೂ ಅಣ್ಣನೂ ಅತ್ತ ಕಡೆ ಆಗಲೇ ಹೋಗಿರುವರು.

ಸಹದೇವ:— (ಪ್ರವೇಶಿಸಿ) ಆದರೆ ಇತ್ತಕಡೆಗೆ ಗೂಢಚಾರನು ಬಹಳ ಭಯಂಕರವಾದ ವರ್ತಮಾನವನ್ನು ತಂದಿರುವನು.

ಭೀಮ:— ಅದೇನು ?

ಸಹದೇವ:— ದ್ರೋಣಾಚಾರ್ಯರು ಚಕ್ರವ್ಯೂಹವನ್ನು ರಚಿಸಿರುವರಲ್ಲದೆ, ಧರ್ಮರಾಜನನ್ನು ಜೀವವಂತವಾಗಿ ಬಂಧಿಸಿ ತರುವೆನೆಂದು ಪ್ರತಿಜ್ಞೆಯನ್ನು ಮಾಡಿರುವರು. ಮತ್ತು ಇದೆಲ್ಲವೂ ಶಕುನಿಯ ಕಪಟ ಕಾರಸ್ಥಾನವಂತೆ.

ಭೀಮ:— ಅಹುದು, ನಿಶ್ಚಯವಾಗಿಯೂ ಕಪಟವು. ಶಕುನಿಯೆಂದರೆ ಕಪಟ್ಟದ ಸದನವು.

ಧರ್ಮ:— ಇದು ಚಕ್ರವ್ಯೂಹವಲ್ಲ; ಆಚಾರ್ಯರು ಕಪಟವ್ಯೂಹವನ್ನೇ ರಚಿಸಿರುವರು ಅತ್ತ ಕಡೆಗೆ ಅರ್ಜುನನು ಸಂಶಪ್ತಕರೊಡನೆ ಯುದ್ಧದಲ್ಲಿ ತೊಡಗಿದ್ದರಿಂದ—

ಭೀಮ:— (ಆವೇಶದಿಂದ) ಧರ್ಮರಾಜಾ, ಆ ಚಕ್ರವ್ಯೂಹವನ್ನು ಈ ಪರಾಕ್ರಮಿಯಾದ ಭೀಮನು ಒಂದು ನಿಮಿಷದಲ್ಲಿ ಭೇದಿಸಿ ನಾಶಗೊಳಿಸುವನು. ಏತಕ್ಕೆ ಚಿಂತಿಸುವಿರಿ? ಎಲ್ಲಿಯವರೆಗೆ ಶ್ರೀಕೃಷ್ಣನ ಕೈಯಲ್ಲಿ ಸುದರ್ಶನವಿದೆಯೊ, ಅರ್ಜುನನ ಕೈಯಲ್ಲಿ ಗಾಂಡೀವ ಧನುಸ್ಸಿದೆಯೊ, ವಜ್ರದೇಹಿಯಾದ ಈ ಭೀಮನ ಕೈಯಲ್ಲಿ ಗದೆ ಇದೆಯೊ ಅಲ್ಲಿಯ ವರೆಗೆ ಇಂತಹ ಕೋಟಿ ಚಕ್ರವ್ಯೂಹಗಳನ್ನು ರಚಿಸಿದರೂ ಏನಾಗುವುದು? ಕಪಟಪಕ್ಷಕ್ಕೆ ಎಂದೂ ಜಯವು ದೊರೆಯಲಾರದು. ಸತ್ಯ ಪಕ್ಷಕ್ಕೇ ಯಶವು ಸಿಗುವುದು. ಈ ಗದೆಯ ಶಕ್ತಿಯು ಬ್ರಹ್ಮಾಂಡವನ್ನೇ ಚೂರ್ಣಗೊಳಿಸುವುದಕ್ಕೆ ಸಮರ್ಥವಾಗಿರುವುದು. ಅಪ್ಪಣೆಯಾಗಲಿ, ಹಾ ಹಾ ಅನ್ನುವಷ್ಟರಲ್ಲಿ ಚಕ್ರವ್ಯೂಹವನ್ನು ಭೇದಿಸಿ ವಿಜಯವನ್ನೇ ಸಂಪಾದಿಸುವೆನು.

ಧರ್ಮ:— ಭೀಮಾ, ನಿನ್ನ ಪರಾಕ್ರಮವು ಅದ್ಭುತವಾಗಿದೆ. ಆದರೆ ಅದರಿಂದ ಈ ಸಮಯದಲ್ಲಿ ಉಪಯೋಗವೇನು? ಚಕ್ರವ್ಯೂಹವನ್ನು ಭೇದಮಾಡುವ ವಿದ್ಯೆಯನ್ನು ಅರ್ಜುನನೊಬ್ಬನೆ ಬಲ್ಲವನು, ಅವನಂತೂ ಸಮಶಪ್ತಕರೊಂದಿಗೆ ಯುದ್ಧದಲ್ಲಿ ತೊಡಗಿರುವನು. ಚಕ್ರವ್ಯೂಹವೆಂದರೆ ಅಕ್ರಾಳ ವಿಕ್ರಾಳವಾದ ಪ್ರತ್ಯಕ್ಷ ಕಾಲನ ನಿವಾಸಸ್ಥಳವು. ಅದನ್ನು ಭೇದಿಸಲಿಕ್ಕೆ ಸಮರ್ಥನು ಅರ್ಜುನನೇ; ಆ ವೀರ ಸಿಂಹನೇ! ಆದರೆ—

ಅಭಿ:— (ಪ್ರವೇಶಿಸಿ) ಆದರೆ, ಆದರೆ ಏನು? ಆ ವೀರ ಸಿಂಹನು ಇಲ್ಲಿ ಇಲ್ಲದಿದ್ದರೂ ಇದೊ ಆತನ ಕುಮಾರ ಸಿಂಹನು ನಿಮ್ಮೆದುರಿಗೆ ನಿಂತಿರುವನು; ಸುಮ್ಮನೆ ಏತಕ್ಕೆ ಚಿಂತಿಸುವಿರಿ?

ಧರ್ಮ:— ಯಾರು, ವತ್ಸ ಅಭಿಮನ್ಯುವೆ?

ಅಭಿ:— ಅಹುದು, ಈ ಅಭಿಮನ್ಯುವಿಗೆ ತಾವು ಆಜ್ಞೆಯನ್ನೀಯಿರಿ. ಚಕ್ರವ್ಯೂಹವನ್ನು ಭೇದಿಸಿ ಈ ಅಭಿಮನ್ಯು ಎಂಬ ನಾಮವನ್ನು ಸಾರ್ಥಕಗೊಳಿಸುವೆನು. ಲೋಕಧುರಂಧರನಾದ ಧನುರ್ಧಾರೀ ವೀರಪಾರ್ಥನ ಪುತ್ರನಾದ ಅಭಿಮನ್ಯುವು ....!

ಧರ್ಮ:— ಅಹಹಾ! ವತ್ಸಾ, ನೀನು ಆ ವೀರ ಸಿಂಹನ ಕುಮಾರ ಸಿಂಹನೇ ನಿಶ್ಚಯ. ಉದಯೋನ್ಮುಖ ರಾಷ್ಟ್ರದ ಭಾವಿ ಆಧಾರಸ್ತಂಭರೇ, ಈ ಚಿಕ್ಕ ಬಾಲವೀರನ ಉತ್ಸಾಹವನ್ನು ನೋಡಿರಿ. ಕುಮಾರಾ, ನಿನ್ನೀ ವೀರಶ್ರೀಯ ಕೌತುಕವನ್ನು ಯಾವ ಶಬ್ದಗಳಿಂದ ಪ್ರಶಂಸಿಸಲಿ?

ಅಭಿ:— ಕಕ್ಕಾ, ಚಕ್ರವ್ಯೂಹದ ವಾರ್ತೆಯನ್ನು ನಾನು ಆಗಲೇ ಕೇಳಿದೆನು. ಆ ಕಾಲಕ್ಕೇ ಅದನ್ನು ಭಂಗ ಪಡಿಸುವ ವಿಷಯವಾಗಿ ಮನಸ್ಸಿನಲ್ಲಿ ಸಂಕಲ್ಪವನ್ನೂ ಮಾಡಿದೆನು. ತಮ್ಮ ಅಪ್ಪಣೆಯ ಸಲುವಾಗಿ ಆಶೀರ್ವಾದದ ಅಪೇಕ್ಷೆಯಿಂದ ಆವೇಶದ ಉತ್ಸಾಹದಿಂದ ಈ ಪುಣ್ಯ ಚರಣಗಳ ಕಡೆಗೆ ಓಡಿ ಬಂದೆನು. ಹೂ, ಜಾಗ್ರತೆಯಾಗಿ ಆಜ್ಞೆಯಾಗಲಿ.

ಭೀಮ:— ಅಭಿಮನ್ಯು, ನೀನು ಯುದ್ಧಕ್ಕೆ ಹೋಗುವುದು, ಇದೇ ಪ್ರಥಮ ಪ್ರಸಂಗವಿದೆ.

ಅಭಿ:— ಆದರೇನಾಯಿತು. ನನ್ನ ಪ್ರಥಮೋತ್ಸಾಹವನ್ನು ತಾವು ಪೂರ್ತಿಗೊಳಿಸುವದಿಲ್ಲವೆ?

ಧರ್ಮ:— ಚಕ್ರವ್ಯೂಹವನ್ನು ಭೇದಮಾಡುವುದು ಬಹಳ ಕಠಿಣ ಕಾರ್ಯವಿದೆ. ಆ ಗುಪ್ತ ವಿದ್ಯೆ—

ಅಭಿ:— ಅದೆಲ್ಲವನ್ನೂ ನಾನು ಬಲ್ಲೆನು. ನನ್ನ ಪುಣ್ಯಶೀಲ ಮಾತೆಯು ಗರ್ಭಕೋಶದಲ್ಲಿರುವಾಗಲೇ ಆ ವಿದ್ಯೆಯನ್ನು ತಂದೆಯವರ ಮುಖ ದಿಂದ ಕೇಳಿರುವೆನು. ಚಕ್ರವ್ಯೂಹದಲ್ಲಿ ಪ್ರವೇಶ ಮಾಡುವುದನ್ನು ನಾನು ಚೆನ್ನಾಗಿ ಬಲ್ಲೆನು.

ಧರ್ಮ:— ಪ್ರವೇಶ ಮಾಡುವುದು ನಿನಗೆ ಗೊತ್ತಿದ್ದರೂ ಮರಳಿ ಬರುವು ದನ್ನು ನೀನು ಅರಿತವನಲ್ಲ.

ಅಭಿ:— ಛೇ. ಅದೇನು ಮಹಾ ವಿದ್ಯೆಯು? ಒಳಗೆ ಹೋದ ಮೇಲೆ ಹೊರಗೆ ಬರುವುದೇನು ಕಠಿಣವಲ್ಲ.

ನಕುಲ:— ಯಾವುದೊಂದು ವಿಷಯದ ಅಪೂರ್ಣಜ್ಞಾನವು ಘಾತಕವಿರು ವುದು.

ಸಹದೇವ:— ಯುದ್ಧವೆಂದರೆ ನಿನಗೆ ಹುಡುಗರ ಆಟವೆಂದೆನಿಸುವದೋ ಹೇಗೆ?

ಅಭಿ:— ಆಟವಲ್ಲದೆ ಮತ್ತೇನು? ವೀರ ಕ್ಷತ್ರಿಯ ಕುಮಾರನಿಗೆ ಇಂತಹ ಆಟವೇ ರುಚಿಸುವುದು. ಈ ಕತ್ತಿಯಿಂದ ಶತ್ರುಗಳ ಮುಂಡಗ ಳನ್ನು ಚಂಡಿನಂತೆ ಆಕಾಶದಲ್ಲಿ ಹೇಗೆ ಹಾರಿಸುವೆನೆಂಬುದನ್ನು ನೋಡಿಯಾದರೂ ನೋಡಿರಿ. ನೀವೇ ಏಕೆ ಶತ್ರುಗಳು ಕೂಡ ಆಶ್ಚ ರ್ಯಚಕಿತರಾಗುವಂತೆ ಮಾಡುವೆನು. ಕೃತಾಂತ ಕಾಲನ ಕೂಡ ಆಟವಾಡುವಂಥ ಈ ಅಮೌಲ್ಯ ಯುದ್ಧದ ಬಂಗಾರದಂತಹ ಸಮಯ ವನ್ನು ನಾನು ವ್ಯರ್ಥಗೊಳಿಸುವುದಿಲ್ಲ.

ಭೀಮ:— ಆದರೆ ಇಂತಹ ಪರಾಕ್ರಮವನ್ನು ತೋರಿಸುವುದಕ್ಕೆ ನಿನ್ನ ವಯಸ್ಸು ಚಿಕ್ಕದಾಗಿದೆ.

ಅಭಿ:— ಕಕ್ಕಾ, ಸಿಂಹದ ಮರಿಯು ಅರಣ್ಯದಲ್ಲಿಯ ಯಾವತ್ತೂ ಕಾಡು ಮೃಗಗಳನ್ನು ಕೊಂದು ಹಣ್ಣಿಗೆ ತರುವುದಿಲ್ಲವೆ ?

ರಾಗ ಪಹಡಿ, ತಾಳ ತ್ರಿವಟ.

ಬೇಡಿಕೊಂಬೆ । ಸಮರಕಾಜ್ಞಾ । ಕೊಡುವುದೀಗಾ ॥ ॥ ಪಲ್ಲ
ಭಯವದೇಕೇ । ದುಗುಡವೇಕೇ । ಸಮದಿ ನಿನ್ನ ಕೃಪೇಮಸದಾ
ಸಹಾ ॥ ೧ ॥

ಭೀಮ:— ಈ ನಿನ್ನ ಹಟವನ್ನು ನೋಡಿದರೆ ನನಗೆ ಬಹಳೇ ಆಶ್ಚರ್ಯವೆನಿಸುವುದು.

ಧರ್ಮ:— ಮಗೂ, ಪ್ರಸಂಗವು ಕಠಿಣವಿದೆ; ನಲ್ಲದ ದುರಾಗ್ರಹವನ್ನು ಮಾಡಬೇಡ.

ನಕುಲ:— ಈ ನಕುಲನು, ಸಹದೇವನು, ಅಗ್ರಜನಾದ ಭೀಮನು, ಇಂತಹ ಒಬ್ಬರಿಗಿಂತೊಬ್ಬರು ಬಲಾಢ್ಯರಾದ ವೀರರು ಇರುತ್ತಿರಲು, ನಿನ್ನಂತಹ ಕೋಮಲ ಬಾಲಕನನ್ನು ಯುದ್ಧಕ್ಕೆ ಕಳುಹಿದರೆ ನಾವು ಲೋಕದ ನಿಂದೆಗೆ ಗುರಿಯಾಗಬೇಕಾದೀತು.

ಅಭಿ:— ಆದರೆ ಪ್ರತಿಜ್ಞೆ ಮಾಡಿದಂತೆ ಚಕ್ರವ್ಯೂಹವನ್ನು ಭೇದಿಸದಿದ್ದರೆ ಲೋಕದ ನಿಂದೆಗೆ ನಾನೂ ಗುರಿಯಾಗಬೇಕಲ್ಲವೆ? ಅದೇನೂ ಇಲ್ಲ. ಕಕ್ಕಾ, ನನಗೆ ಆಜ್ಞೆಯನ್ನೀಯಿರಿ. ನನ್ನ ಬಾಹುಗಳು ಸ್ಫುರಣವಾಗಹತ್ತಿರುವವು ಮೈಯೊಳಗಿನ ರಕ್ತವು ಉಕ್ಕೇರುವದಕ್ಕೆ ಪ್ರಾರಭಿಸಿತು. ಚಕ್ರವ್ಯೂಹವನ್ನು ನದೆಬಡೆಯುವುದಕ್ಕೆ ನನ್ನ ಮನಸ್ಸು ಬಹಳೇ ಉತ್ಕಂಠಿತವಾಗಿರುವುದು ; ಬೇಗನೆ ನನಗೆ ಅಪ್ಪಣೆ ಕೊಡಿರಿ. ಇದೋ ನಾನು ಹೊರಟೆನು.

ಸುಭದ್ರಾ:— (ಪ್ರವೇಶಿಸಿ) ಯಾರು ನನ್ನ ಮುದ್ದು ಕುಮಾರನು ಚಕ್ರವ್ಯೂಹವನ್ನು ಭೇದಿಸುವುದಕ್ಕೆ ಹೊರಟನೆ ?

ಅಭಿ:— ಹೌದು, ಅಮ್ಮಾ, ನಿನ್ನಂತಹ ವೀರಮಾತೆಯ ಪವಿತ್ರ ಉದರದಲ್ಲಿ ಜನ್ಮಿಸಿ, ಅವಳ ಹಾಲು ಕುಡಿದು ಬೆಳೆದಂತಹ ಈ ಭಾಗ್ಯಶಾಲಿಯಾದ ಅಭಿಮನ್ಯುವೇ ಚಕ್ರವ್ಯೂಹವನ್ನು ಭೇದಿಸುವುದಕ್ಕೆ ಹೊರಟಿರುವನು.

ಅಮ್ಮಾ, ನನ್ನ ಅಂಗದಲ್ಲಿ ವೀರ ರಕ್ತವು ಕುದಿಯುತ್ತಿರುವುದು. ಅದಕ್ಕೆ ಸರಿಯಾದ ಪರಾಕ್ರಮವನ್ನು ತೋರಿಸದಿದ್ದರೆ ಪ್ರಯೋಜನ ವೇನು?

ಸುಭದ್ರಾ:— ಅಮ್ಮಯ್ಯಾ ಏನೀ ಆವೇಶವು! ಮಗುವೆ, ಈ ದಿವಸ ನಿನ್ನ ಅಂಗದಲ್ಲಿ ದೇವರ ಸತ್ವವೂ ದೈತ್ಯರ ಬಲವೂ, ಸಂಚರಿಸುವಂತೆ ಕಾಣುವುದು. ಆದರೆ ಇಂತಹ ಹಟಕ್ಕೆ ನಾನೆಂದಿಗೂ ಅವಕಾಶ ಕೊಡತಕ್ಕವಳಲ್ಲ. ಭಾವನವರೆ,—

ಭೀಮ:— ಅಮ್ಮಾ, ಅವನನ್ನು ಸಮಾಧಾನಪಡಿಸುವುದು ನಮ್ಮಿಂದ ಸಾಧ್ಯವಿಲ್ಲ. ನೀನೇ ಏನಾದರೂ ಬುದ್ಧಿಯನ್ನು ಹೇಳು.

ಸುಭದ್ರಾ:— ಕುಮಾರಾ, ಇನ್ನೂ ನಿನ್ನ ತುಟಿಯ ಮೇಲಿನ ಜೊಲ್ಲು ಕೂಡ ಒಣಗಿಲ್ಲ. ಈಗ ತಾನೇ ನೊನ್ನೆ ಮೊನ್ನೆ, ಹದಿನೈದು ವರ್ಷ ಗಳು ತುಂಬಿ ಹದಿನಾರರಲ್ಲಿ ಬಿದ್ದಿದೆ.

ಅಭಿ:— ಅಮ್ಮಾ, ನನ್ನ ವಯಸ್ಸು ಚಿಕ್ಕದಾದರೂ ನನ್ನ ಪರಾಕ್ರಮವು ಅದ್ಭುತವಾಗಿದೆ. ಗ್ರಾಮದೇವತೆಯ ಕೋಣದಂತೆ ಶರೀರವನ್ನು ಪುಷ್ಟವಾಗಿ ಬೆಳಸಿ ಹೇಡಿಯಾಗಿ ಮನೆಯಲ್ಲಿರುವುದಕ್ಕೆ ನನ್ನ ಮನಸ್ಸು ಒಪ್ಪುವುದಿಲ್ಲ. ಪ್ರಖರವಾದ ತೇಜಸ್ಸಿನಿಂದ ಜಗತ್ತನ್ನು ಪ್ರಕಾಶಿಸಿ ಅಕಾಲದಲ್ಲಿಯೇ ಪತನವಾಗುವ ನಕ್ಷತ್ರದಂತಹ ಅಲ್ಪ ಜೀವನವೇ ನನಗೆ ಧನ್ಯನೆಂದೆನಿಸುವುದು. ಅಮ್ಮಾ, ಗಮಗಮಿಸುವ ಪುಷ್ಪಗಳು ವೃಕ್ಷದಿಂದ ಬಹು ಜಾಗ್ರತೆಯಾಗಿ ಕಳಚಿ ಬೀಳುವವು; ಆದರೆ ಲೋಕಕ್ಕೆ ಆನಂದವನ್ನು ಕೊಡುವವು. ಸತ್ಕೃತ್ಯದಿಂದಲೆ ಜನ್ಮ ಸಾರ್ಥಕವಾಗುವುದು. ಕೇವಲ ದೀರ್ಘಾಯುಷ್ಯದಿಂದ ಸಾರ್ಥಕ ವಾಗದು. ನನ್ನ ಸತ್ಕೀರ್ತಿಯ ಸುಗಂಧವು ಲೋಕದಲ್ಲಿ ಪಸರಿಸಿದ ಮೇಲೆ ನನಗೆ ಮರಣ ಬಂದರೂ—

ಸುಭದ್ರಾ:— ಮಗುವೆ, ಹೀಗೆ ಅಭದ್ರ ಮಾತಾಡಬೇಡ. ದೇವ, ಜಗ ದಂಬೆ, ಅಮಂಗಳವಳಿದು ಮಂಗಳವಾಗಲಿ.

ಅಭಿ:— ಅಮ್ಮಾ, ನೀನು ನನ್ನ ಮರಣಕ್ಕೆ ಭಯ ಪಡುವಿಯಾ? ರಣಾಂಗಣ ದಲ್ಲಿ ಕಾದುತ್ತ ಕಾದುತ್ತ ನನಗೆ ಮರಣ ಬಂದರೆ— ಅಹಹ! ನನ್ನ

ನನಷ್ಟು ಭಾಗ್ಯಶಾಲಿಯು ನಾನೇ. ನಗುನಗುತ್ತ ಸ್ವರ್ಗದ ಸಿಂಹಾಸನವನ್ನೇರುವೆನು. ಆತ್ಮೋದ್ಧಾರದ ಜೊತೆಗೆ ಪಿತೃ ಕುಲವನ್ನು ಉದ್ಧರಿಸುವೆನು. ಮತ್ತು ಅಭಿಮನ್ಯು ಎಂಬ ನಾಲ್ಕು ಅಕ್ಷರಗಳನ್ನು ಚಿರಂಜೀವ ಮಾಡುವೆನು.

ಸುಭದ್ರಾ:— ಮಗುವೆ, ಬೃಹಸ್ಪತಿಯು ರಸವಾಣಿಯು ನಿನ್ನ ತುಟಿಯ ಮೇಲೆ ಅವತರಿಸಿತು ; ವೀರಾತ್ಮನ ವೀರಶ್ರೀಯು ರೋಮ ರೋಮದಲ್ಲಿ ಸಂಚರಿಸಿತು.

ಅಭಿ:— ಅಮ್ಮಾ, ಬೇಡ ಬೇಡ, ನನ್ನನ್ನು ನಿರ್ಬಂಧಿಸಬೇಡ; ನನ್ನ ಮನಸ್ಸು ಬಹಳೇ ಉತ್ಕಂಠಿತವಾಗಿರುವುದು. ವಿಜಯಶ್ರೀಯನ್ನು ಸಂಪಾದಿಸಿ ಸಂತೋಷದಿಂದ ನಾನು ಜಾಗ್ರತೆಯಾಗಿ ನಿನ್ನನ್ನು ಕಾಣಬರುವೆನು. ಅಮ್ಮಾ, ನನ್ನ ಧೈರ್ಯವನ್ನು ಕುಗ್ಗಿಸಬೇಡ. ನಾನು ವೀರ ಕುಮಾರನಲ್ಲವೆ? ತ್ರೈಲೋಕ್ಯ ಧುರಂಧರ ಪಾರ್ಥ ರಾಜನ ಕುಲದೀಪಕನಲ್ಲವೆ?

ಸುಭದ್ರಾ:— ಹೌದು ಮಗುವೆ, ನೀನು ಆ ಶ್ರೇಷ್ಠ ಕುಲದಲ್ಲಿ ಜನಿಸಿದ ವೀರಕುಮಾರನೇ ಇರುವೆ.

ಅಭಿ:— ಹಾಗಾದರೆ ನನ್ನ ಶ್ರೇಷ್ಠ ಕುಲಕ್ಕೆ ಒಪ್ಪುವಂತಹ ಶ್ರೇಷ್ಠ ಕಾರ್ಯವನ್ನು ಮಾಡುವುದು ನನಗೆ ಭೂಷಣವಲ್ಲವೆ? ಯಾವನು ಮನೆತನದ ಪ್ರತಿಷ್ಠೆಯನ್ನೂ ಕುಲದ ಕೀರ್ತಿಯನ್ನೂ ಬೆಳೆಯಿಸುವನೊ ಅವನೇ ನಿಜವಾದ ಪುತ್ರನು. ಸತ್ತರೆ ವೀರನಾದ ನಾನು ಸಮರಾಂಗಣದಲ್ಲಿಯೆ ಸಾಯುವೆನು. ಇದೇ ನನ್ನ ಪುಣ್ಯ ಸಂಕಲ್ಪವು. ಬಿಡು ಬಿಡು ನನ್ನನ್ನು. ಪುತ್ರನ ಕರ್ತವ್ಯದ ಮಾರ್ಗವನ್ನು ತಡೆಯುವುದು ವೀರ ಮಾತೆಯಾದ ನಿನಗೆ ಶೋಭಿಸುವುದಿಲ್ಲ. ಅಮ್ಮಾ, ನೀನು ವೀರ ಮಾತೆಯಲ್ಲವೆ? ಹಾಗಾದರೆ—

ರಾಗ ಬಾಗೇಶ್ರೀ, ತಾಳ ತ್ರಿವಟ.

ಕೊಡುಯೆನಗಾಜ್ಞೆಯಾ । ಜನನಿ ತವ ॥ ಪಲ್ಲ ॥ ಬಿಡು ನೀ
ಭಯವ । ನೀಡು ಅಭಯಾ ॥ ಅನುಪಲ್ಲ ॥ ಬಾಲನೆಂಬ ಮೋಹಾ
ಬಿಡು ಮಾತೇ । ಬಾಲನಲ್ಲೆ ರಿಪು ಕಾಲಾಂತಕನೆ ॥ ೧ ॥

ಸುಭದ್ರಾ:— ಕುಮಾರಾ, ನಿನ್ನ ಕರ್ತವ್ಯಕ್ಕೆ ಸುಭದ್ರೆಯು ಅಡ್ಡವಾಗಿ ಬರುವುದಿಲ್ಲ. ಆದರೆ ಅಂತಃಕರಣದ ಮಾಯೆಯು, ಅಡ್ಡಬರುವುದು. ಮಗುವೆ, ನಿನ್ನ ತೇಜಸ್ವಿಯಾದ ಬಾಲಬುದ್ಧಿಯನ್ನು ಕೊಂಡಾಡಲೆ, ಅಥವಾ ಈ ಪ್ರಸಂಗವನ್ನು ನೋಡಿ, ನಿಷ್ಠುರಳಾಗಲೆ? ಹೋಗು, ಮಗುವೇ ಹೋಗು. ಈ ವೀರ ಮಾತೆಯಾದ ಸುಭದ್ರೆಯು ತನ್ನ ವೀರಕುಮಾರನ ಯಶೋಮಾರ್ಗವನ್ನು ನಿರ್ಬಂಧಿಸುವುದಿಲ್ಲ. ಹೋಗು ನಿನಗೆ ವಿಜಯವಾಗಲಿ.

ರಾಗ ಪೀಲು, ತಾಳ ಕೇರವಾ

ಹೋಗು ಪರಾಕ್ರಮಿಯೇ । ಸಮರಕೇ । ಮಗುವೇ ವಿಮಲಕು
ಲಬಾಲರವಿಯೇ ॥ ಪಲ್ಲ ॥ ತೋರಿ ಶೌರ್ಯ । ವೈರಿ ನಿಕರವ ।
ನಾಶಗೊಳಿಸು ತನಯಾ ॥ ಧರಾತಲದಿ ನೀ ಮಹಾಯಶವಾ ।
ನ್ನೈದು ಕುಲೋದ್ಧಾರಾ ॥ ೧ ॥

ಅಭಿ:—ಆಹಹ! ಅಮ್ಮಾ, ನಿನ್ನ ಶಬ್ದಗಳಿಂದ ನನ್ನ ಉತ್ಸಾಹವು ಉಕ್ಕೇರಿತು. ಕಕ್ಕಾ, ತಾಯಿಯ ಮಂಗಲಕರವಾದ ಆಶೀರ್ವಾದದ ಛತ್ರವು ನನಗೆ ಲಭಿಸಿತು. ಹೂ, ಇನ್ನು ನೀವು ಆಶೀರ್ವಾದವನ್ನು ಮಾಡಿರಿ. ತಂದೆಯವರು ಈ ಕಾಲಕ್ಕೆ ಇಲ್ಲಿ ಇಲ್ಲದಿದ್ದರೂ ನೀವು ಮಾಡುವ ಆಶೀರ್ವಾದವೇ ಅವರದು. ತಮ್ಮ ಆಶೀರ್ವಾದದ ಗಂಗಾಭಿಷೇಕವನ್ನು ಮಾಡಿರಿ. ಎಂದರೆ ಇಕೋ ಶತ್ರುಗಳಿಗೆ ರಕ್ತಾಭಿಷೇಕವನ್ನು ಮಾಡುವುದಕ್ಕೆ ಹೊರಟೆನು. (ಧರ್ಮರಾಜನ ಕಾಲು ಹಿಡಿದು) ಸುಮ್ಮನೆ ಹೆಚ್ಚಾಗಿ ನನ್ನನ್ನು ತೊಂದರೆ ಪಡಿಸಬೇಡಿರಿ.

ಧರ್ಮ:— (ಸ್ವಗತ) ಈ ಸಮಯಕ್ಕೆ ನನಗೆ ಇಷ್ಟವಾದ್ದು ಅನಿಷ್ಟವಾದ್ದು—ಇದೇ ತಿಳಿಯದಂತಾಗಿದೆ. (ಪ್ರಕಟ) ಕುಮಾರಾ, ನಿನಗೆ ಅಖಂಡ ವಿಜಯವಾಗಲಿ ಭೀಮ-ನಕುಲ-ಸಹದೇವರೆ, ನೀವೂ ಇವನ ಜೊತೆಗೆ ಹೋಗಿರಿ. ಹೂಂ, ಬೇಗನೆ ಸಿದ್ಧತೆಯನ್ನು ಮಾಡಿರಿ.

ಭೀಮ:— ಅತ್ತಿಗೆ, ತಾವು ತಿಲಮಾತ್ರವಾದರೂ ಯೋಚನೆ ಮಾಡಬೇಡಿರಿ. ಈ ಸಿಂಹದ ಮರಿಯ ಸಂರಕ್ಷಣೆಗಾಗಿ ಈ ಭೀಮನು ತನ್ನ ಅಖಂಡ ಸಾಮರ್ಥ್ಯವನ್ನು ವೆಚ್ಚ ಮಾಡುವನು.

ಸುಭದ್ರಾ:— ಕಂದಾ, ಸ್ವಲ್ಪ ತಾಳು ನಾನೊಮ್ಮೆ ನಿನ್ನ ಸವಿಯಾದ ಮುದ್ದು ತಕ್ಕೊಳ್ಳುವೆನು.

ಅಭಿ:— ಅಮ್ಮಾ, ಇನ್ನು ಮೇಲೆ ನೀನು ಬೇಕಾದಷ್ಟು ಮುದ್ದು ತೆಗೆದುಕೊ. ಈ ದಿವಸ ಅಭಿಮನ್ಯುವು ಚಕ್ರವ್ಯೂಹವನ್ನು ಭೇದಿಸಿ ತನ್ನ ಕೀರ್ತಿಯನ್ನು ಜಗತ್ತಿನಲ್ಲಿ ಪ್ರಕಾಶಗೊಳಿಸತಕ್ಕವನೆ! ಅಮ್ಮಾ, ವೀರಶ್ರೀಯ ಮಂಗಲೋತ್ಸವದಿಂದ ವಿರಾಜಮಾನನಾದ ಈ ನಿನ್ನ ಮುದ್ದು ಕುಮಾರನು ನಿನಗೆ ಕೊನೆಯ ಅಭಿವಾದನವನ್ನು ಮಾಡುವನು. (ನಮಸ್ಕರಿಸುವನು) ಅಮ್ಮಾ ಬರುವೆನು. ಆಂ.

ಸುಭದ್ರಾ:— ಹೋಗು ಮಗನೆ, ವಿಜಯಶಾಲಿಯಾಗು. ತುಸು ತಡೆ; ಮತ್ತೊಂದು ಸಲ ನಿನ್ನ ಅಧರಾಮೃತವನ್ನು ಯಥೇಚ್ಛವಾಗಿ ಸೇವಿಸುತ್ತೇನೆ. (ಚುಂಬಿಸುವಳು.)

ಹೋಗುವನು

ಪ್ರಥಮಾಂಕ ಸಂಪೂರ್ಣಂ

ಎರಡನೆಯ ಅಂಕ

ಒಂದನೆಯ ಪ್ರಸಂಗ

(ಉತ್ತರೆಯ ಮಂದಿರ. ಉತ್ತರೆಯು ಹಾರವನ್ನು ಕಟ್ಟುತ್ತಿರುವಳು. ಸೌದಾಮಿನಿಯು ಹೂಗಳನ್ನು ಆಯ್ದು ಕೊಡುತ್ತಿರುವಳು.)

ಉತ್ತರಾ:— (ಬೇಸರದಿಂದ) ಸಾಕಾಯಿತಮ್ಮಾ ಈ ಹಾರ ಪೋಣಿಸುವುದು.

ಸೌದಾ:— ಇದೇನು ದೇವಿ, ಹೀಗೇಕೆ ಮಾಡುವಿರಿ? ಇದೊಂದು ಹಾರವಾದರೂ ಪೂರ್ತಿಯಾಗಲಿ.

ಉತ್ತರಾ:— ಸೌದಾಮಿನಿ, ಏನು ಮಾಡಲಿ ನನಗೆ ಏನೂ ತಿಳಿಯದಾಗಿದೆ, ಏನೂ ರುಚಿಸದಾಗಿದೆ. ಅವರು ನನ್ನನ್ನು ತಿರಸ್ಕರಿಸಿ ಹೋದರು. ಅದೇ ಸಮಯದಲ್ಲಿಯೆ ನನ್ನ ಎದೆಯೊಡೆದು ನೀರಾಯಿತು. ಸೌದಾಮಿನಿ, ಯುದ್ಧಕ್ಕೆ ಹೋಗಬೇಕೆನ್ನುವ ಅವರ ದೃಢವಾದ ನಿಶ್ಚಯವು, ತಿರುಗಲಿಕ್ಕಿಲ್ಲವೆ? ನನ್ನ ಪ್ರೇಮದ ಪರಮೇಶ್ವರನು, ನನ್ನ ಕಡೆಗೆ ಮರಳಿ ನೋಡಲಿಕ್ಕಿಲ್ಲವೆ? ಅವರ ವಿರಹತಾಪವನ್ನು ನಾನು ಸಹಿಸೆನು. ಅವರನ್ನು ಅಗಲಿ ಒಂದು ನಿಮಿಷ ಕಾಲಕಳೆಯುವುದು ಕೂಡ ನನಗೆ ಮರಣಪ್ರಾಯವಾಗಿದೆ, ಅದಕ್ಕೋಸುಗ

ರಾಗ ಪೀಲು, ತಾಳ ಝಂಪಾಳಿ.

ಪ್ರಾಣಪತಿಯ ವಿರಹತಾಪ । ತಾಳಲೆಂತು ನಾ ಸಖಿಯೇ
॥ ಪಲ್ಲ ॥ ಜಾಣೆ ಪೋಗಿ ಕಾಂತನೆಡೆಗೆ । ಕರೆದು ತಾರೆ ನೀ ॥
ಜಾಣ್ಮೆಯಿಂದ ಮನವನೊಲಿಸಿ । ಪೇಳು ಎನ್ನಯ ವ್ಯಥೆಯಾ
॥ ೧ ॥

ಸೌದಾ:— ಎಲ್ಲರೂ ಸೇರಿ ಚಿಕ್ಕಮಹಾರಾಜರನ್ನು ಸಮಾಧಾನಪಡಿಸುವುದಕ್ಕೆ ಎಷ್ಟು ಪ್ರಯತ್ನಿಸಿದರೂ ಅದೆಲ್ಲವೂ ನಿಷ್ಫಲವಾಯಿತು.

ಸ್ವಾರಿಯು ಆಗಮನವಾದ ಕೂಡಲೆ ಏನಾದರೊಂದು ಬಗೆಯಿಂದ ತಿಳಿಸೇ—

ಉತ್ತರಾ:— ಸೌದಾಮಿನಿ, ನೀನೆಂತಹ ಹುಚ್ಚಿಯು! ಸಮರಾಂಗಣಕ್ಕೆ ಹೋಗುವ ಕಾಲಕ್ಕೆ ಅವರು ನನ್ನನ್ನು ಕಾಣ ಬರುವರೋ ಇಲ್ಲವೋ ಇದೇ ನನಗೆ ಸಂಶಯವಿದೆ. ಅವರ ಸ್ವಭಾವದ ರೀತಿಯು ನಿನಗೆ ತಿಳಿಯದು. ನಾನು ಚೆನ್ನಾಗಿ ಬಲ್ಲೆನು.

ಸೌದಾ:— ಚಿಕ್ಕಮಹಾರಾಜರು ತಮಗೆ ಭೆಟ್ಟಿಯಾಗದೆ ಹಾಗೇ ಸಮರಾಂಗಣಕ್ಕೆ ಎಂದೂ ಹೋಗಲಾರರು. ದೇವಿ, ಅದೋ ನೋಡಿ! ಮಲ್ಲಿಕೆಯು ಬಂದಳು. ಮಲ್ಲಿಕೆ—ಚಿಕ್ಕ ಮಹಾರಾಜರು, ದ್ವಾರದಿಂದ ಯಾವ ಕಡೆಗೆ ಹೋದರು?

ಮಲ್ಲಿಕಾ:— ಅವರು ದ್ವಾರದಿಂದ ಹೊರಬಿದ್ದವರು, ಮೊದಲು ಸಮರಾಂಗಣದ ಕಡೆಗೇ ತಮ್ಮ ಮುಖವನ್ನು ತಿರುಗಿಸಿದರು. ಆದರೆ ಅಷ್ಟರಲ್ಲಿ ಮತ್ತೇನು ನೆನಪಾಯಿತೋ ಕಾಣೆ, ಸ್ವಾರಿಯು ಇತ್ತ ಕಡೆಗೇ ತಿರುಗಿತು ಇಷ್ಟರಲ್ಲಿಯೆ ಬರಬಹುದು—

ಉತ್ತರಾ:— (ಆನಂದದಿಂದ) ಏನು ಹೇಳಿದೆ, ಪ್ರಾಣನಾಥರು ಇಷ್ಟರಲ್ಲಿಯೇ ಬರುವರೆ! ಅಹಹಾ! ನನ್ನ ಭಾಗ್ಯಸೂರ್ಯನು ಉದಯವಾದನು. ಈ ಆನಂದದ ವರ್ತಮಾನವನ್ನು ತಿಳಿಸಿದ ಬಗ್ಗೆ ಇದೋ ತೆಗೆದುಕೋ ನಿನಗೆ ಬಹುಮಾನವನ್ನು, (ಮುತ್ತಿನ ಹಾರವನ್ನು ಕೊಡುವಳು.) ಸೌದಾಮಿನಿ, ಇನ್ನು ಈ ಹಾರವನ್ನು ನಾನು ಜಾಗ್ರತೆಯಾಗಿ ಪೂರೈಸುವೆನು. ನೀನು ಬೇಗನೆ ಹೋಗಿ ಪುಷ್ಪಗಳನ್ನು ತೆಗೆದುಕೊಂಡು ಬಾ, (ಸೌದಾಮಿನಿ ಹೊರಡುವಳು) ಏನೇ-ಏ ಇಲ್ಲಿ ಬಾ, ಒಳ್ಳೇ ಸುಗಂಧವಾದ ಪುಷ್ಪಗಳನ್ನು ತೆಗೆದುಕೊಂಡು ಬಾ — ಆಂ — ಹೂಂ ಹೋಗು ಬೇಗನೆ. ಇದೋ ಕೇಳು — ಏನು ಹೇಳತಕ್ಕವಳಿದ್ದೆ ನಿನಗೆ? ಸರಿ – ಏನೂ ಇಲ್ಲಾ – ಜಾಗ್ರತೆಯಾಗಿ ಬಾ – (ಸೌದಾಮಿನಿಯು ಹೊರಡುವಳು.) ಏನೆ ಇದೋ ನೆನಪಾಯಿತು. ಆ ತಾಂಬೂಲ ತಟ್ಟೆಯನ್ನು ಮರೆತು ಬರಬೇಡ. ಹೂ ಹೋಗು ಬೇಗನೆ.

(ಸೌದಾಮಿನಿ ಹೋಗುವಳು.) (ಹಾರವನ್ನು ಕೈಯಲ್ಲಿ ತೆಗೆದುಕೊಂಡು) ಎಲೈ ಹಾರವೇ, ನನ್ನ ಪ್ರಾಣೇಶನನ್ನು ಈ ನನ್ನ ಮಂದಿರದಲ್ಲಿ ತಡೆದು ನಿಲ್ಲಿಸುವುದಕ್ಕೆ ನನಗೆ ಸಹಾಯ ಮಾಡುವೆಯಾ? ಮಲ್ಲಿಕೆ, ನೀನು ಹೋಗು – ಪ್ರಾಣನಾಥರು ಮಂದಿರದಲ್ಲಿ ಪ್ರವೇಶ ಮಾಡಿದ ಕೂಡಲೆ ನನಗೆ ಬಂದು ತಿಳಿಸು – (ಉತ್ತರೆಯು ಹಾರ ಪೋಣಿಸುವುದಕ್ಕೆ ಪ್ರಾರಂಭಿಸುವಳು)

ಮಲ್ಲಿಕಾ:— (ಹೋಗುವಾಗ್ಗೆ ಮುಂದೆ ನೋಡಿ ಸ್ವಗತ) ಅಮ್ಮಯ್ಯಾ, ಚಿಕ್ಕ ಮಹಾರಾಜರು ಬಂದೇಬಿಟ್ಟರು.

ಅಭಿ:— (ರಣವೇಷದಿಂದ ಪ್ರವೇಶ ಮಾಡುವನು.) ಎಲೈ ಪ್ರೇಮದ ದೇವದೇವನೆ, – ತರುಣ ಜೀವಿಗಳ ಮೇಲೆ ನಿನ್ನ ಅಧಿಕಾರವನ್ನು ಎಷ್ಟು ಬಲವಾಗಿ ನಡಿಸುವೆ. – ಕರ್ತವ್ಯದ ಕಠೋರ ಮನಸ್ಸಿನಿಂದ ರಣಭೂಮಿಯ ಕಡೆಗೆ ಚಲಿಸಿದ ನನ್ನ ಪಾದಗಳು ಈ ಪ್ರೇಮಪಾಶಕ್ಕೆ ಸೋತು ಹಿಂದಿರುಗಿದವು. ಪ್ರಿಯಕರನನ್ನು ಪ್ರೇಮಪಾಶದಿಂದ ಕಟ್ಟುವುದಕ್ಕೆ ಸಿದ್ಧಳಾದ ನನ್ನ ಮುದ್ದಿನ ಪ್ರಿಯರಮಣಿಯೆ,—

ಉತ್ತರಾ:— ಅಮ್ಮಯ್ಯಾ,ಯಾರಿದು? ನನ್ನ ಪ್ರಾಣನಾಥರು. ಸ್ವಾಮಿಯು ಖಂಡಿತವಾಗಿ ಬರುವರೆಂದು ನಾನು ಮೊದಲೇ ತಿಳಿದಿದ್ದೆನು. ಅದಕ್ಕೋಸುಗವೇ ನಾನೀ ಹಾರವನ್ನು ಜಾಗ್ರತೆಯಾಗಿ ಮುಗಿಸುವ ಯೋಚನೆಯಲ್ಲಿದ್ದೆನು.

ಅಭಿ:— ಈ ಹಾರವನ್ನು ಹೀಗೆಯೇ ಅರ್ಧಕ್ಕೆ ಸಾಕು ಮಾಡಿ— (ಹಾರ ತಕ್ಕೊಂಡು)

ಉತ್ತರಾ:— ಅಮ್ಮಯ್ಯ, ಇದೇನು ಹುಡುಗಾಟ? ನನ್ನ ಪ್ರೇಮದ ಹಾರವು ಪೂರ್ಣವಾಗಬಾರದೆಂದು ತಮ್ಮ ಇಚ್ಛೆ ಇರುವುದೇ ಹೇಗೆ?

ಅಭಿ:— ನನ್ನ ಇಚ್ಛೆಯಲ್ಲ, ಭವಿತವ್ಯತೆಯ ಇಚ್ಛೆಯೇ ಕಠೋರವಾಗಿದ್ದರೆ ಅದಕ್ಕೆ ನೀನೇನು ಮಾಡುವೆ?

ಉತ್ತರಾ:— ಅದೇನೆ ಇರಲಿ, ನಾನು ಈ ಹಾರವನ್ನು ಪೂರೈಸತಕ್ಕವಳೇ ಸರಿ. (ಹಾರವನ್ನು ತಕ್ಕೊಳ್ಳಲಿಕ್ಕೆ ಪ್ರಯತ್ನಿಸುವಳು) ಅಮ್ಮಯ್ಯ,

ಇದೆಂಥ ಒರಟುತನವು ಕೋಮಲವಾದ ಮೊಗ್ಗೆಗಳು ಬತ್ತಿ ಬಾಡಿ ಹೋಗಲಿಕ್ಕಿಲ್ಲವೆ.

ಅಭಿ:— ಮೊದಲು ಈ ಸುಂದರವಾದ ಕಮಲದ ಅರಳುಮೊಗ್ಗೆಯನ್ನು ಚುಂಬಿಸೋಣ ಆ ಮೇಲೆ ಆ ಮೊಗ್ಗೆಗಳ ವಿಚಾರವು. (ಚುಂಬಿಸುವನು)

ಉತ್ತರಾ:— ಇದೆಂತಹ ಪರಿಹಾಸ್ಯವು. ಅದಕ್ಕೇನು ಸಮಯವಿಲ್ಲವೆ? ಆದರೆ ನಾಥಾ ತಾವು ಕ್ಷಣ ಹೊತ್ತು ಈ ಮಂಚದ ಮೇಲೆ ವಿಶ್ರಾಂತಿಯನ್ನು ಹೊಂದಿದರೆ – ನಾನು ಈಗಲೇ ಹಾರವನ್ನು ಪೂರ್ತಿಸುವೆನು.

ಅಭಿ:— ನನಗೆ ಈ ಮಂಚದ ಮೇಲೆ ಕೂಡುವದಕ್ಕೆ ಸಮಯವಿಲ್ಲ. ಅಲ್ಲದೆ ನಿನ್ನ ಈ ಹೃದಯ ಮಂಚದಲ್ಲಿ ನನಗೆ ಸ್ಥಿರವಾದ ಅಧಿಷ್ಠಾನವು ದೊರೆತಿರುವುದಿಲ್ಲವೆ? ರಣಮಂಚದ ಮೇಲೆ ಕುಳಿತು ಶೌರ್ಯರತನದ ಶೃಂಗಾರ ವಿಲಾಸಗಳ ಹಾಡುಗಳನ್ನು ಹಾಡುತ್ತ ವಿಜಯಶಾಲಿಯಾಗಿ ಬಂದ ವೀರ ಪುರುಷನಿಗೆ ಇಂತಹ ಮಂಗಲಕರವಾದ ಪುಷ್ಪಮಾಲೆಯನ್ನು ರಮಣಿಯು ಅರ್ಪಿಸಿದರೆ ಅದು ಭೂಷಣವು. ಕೊಡು, ನನಗೆ ಹೋಗುವದಕ್ಕೆ ಆನಂದದಿಂದ ಒಪ್ಪಿಗೆಯನ್ನು ಕೊಡು — ನಾನು ನಿನ್ನ —

ಉತ್ತರಾ:— ಬೇಡ ಬೇಡ ನಾಥಾ, ಇಂತಹ ಕಠೋರ ಶಬ್ದಗಳನ್ನು ನಾನು ಕೇಳಲಾರೆನು ಮತ್ತು ನಾನದನ್ನು ಸಹಿಸಲಾರೆನು

ಅಭಿ:— ಪ್ರಿಯೆ, ಪ್ರಸನ್ನ ಮನಸ್ಸಿನಿಂದ ನನಗೆ ಅಪ್ಪಣೆಯನ್ನು ಕೊಟ್ಟು ನನ್ನ ರಣೋತ್ಸಾಹವನ್ನು ವೃದ್ಧಿಗೊಳಿಸದೆ, ನನ್ನನ್ನು ನಿರುತ್ಸಾಹಿಯನ್ನಾಗಿ ಮಾಡುವಿಯಾ? ಮುಚ್ಚೀ, ಒರಿಸು, ಅಶ್ರುಗಳನ್ನು ಒರಿಸು. ಹಸನ್ಮುಖದಿಂದ ಒಂದುಸಲ ನನ್ನ ಕಡೆಗೆ ನೋಡಿಯಾದರೂ ನೋಡು.

ಉತ್ತರಾ:— ನಾಥಾ, ಏನು ಮಾಡಲಿ? ದುಃಖದಿಂದ ಒತ್ತರಿಸುವ ಅಶ್ರುಗಳನ್ನು ತಡೆಯುವುದು ನನ್ನಿಂದ ಸಾಧ್ಯವೆ?

ಅಭಿ:— ಉತ್ತರೆ, ರಮಣಿಯರ ನೇತ್ರಗಳು ಆನಂದಾಶ್ರುಗಳಿಂದ ತುಂಬಿದರೆ ವೀರಪುರುಷರ ಅಂಗದಲ್ಲಿ ಪರಾಕ್ರಮದ ರಕ್ತವು ಕುದಿಯಲಿಕ್ಕೆ

ಹತ್ತುವುದು. ಆದರೆ ಇಂತಹ ದುಃಖಕರವಾದ ಅಶ್ರುಗಳಿಂದ ವೀರರ ವೀರವೃತ್ತಿಯು ನಿರ್ವೀರ್ಯವಾಗಿ ಹೋಗುವುದು. ನನಗೆ ಜಾಗ್ರತೆಯಾಗಿ ಅನುಮತಿಯನ್ನು ಕೊಡು.

ಉತ್ತರಾ:— ನಾಥಾ, ಏನು ಮಾತಾಡಲಿ! ನನ್ನ ಮನಸ್ಸಿನಲ್ಲಿಯ ವಿಚಾರಗಳು ಮನಸ್ಸಿನಲ್ಲಿಯೇ ಇಂಗಿ ಹೋದವು ಮುಖದಿಂದ ಒಂದು ಶಬ್ದವೂ ಕೂಡ ಉಚ್ಚರಿಸಲಿಕ್ಕೆ ಬರದಂತಾಯಿತು. (ವಕ್ಷಸ್ಥಳದಲ್ಲಿ ತಲೆಯನ್ನು ಒರಗಿಸುವಳು)

ಅಭಿ:— ಬಾ. ಬಾ, ನನ್ನ ಮುದ್ದು ಜೀವವೇ, ಹೃದಯಕ್ಕೆ ಹೃದಯವು ಹೊಂದಲಿ. ಪ್ರಣಯ ರಂಗದಲ್ಲಿ ಮನಸ್ಸು ರಮಿಸಲಿ, ಪ್ರತಿಯೊಂದು ರಕ್ತವಾಹಿನಿಗಳಲ್ಲಿ ವೀರಶ್ರೀಯು ಉಕ್ಕೇರಿಸಿದರೂ ಅಂತಃಕರಣದ ಪ್ರದೇಶದಲ್ಲಿ ಪ್ರೇಮದ ಮಧುರ ಸಂಗೀತವು ಸುಳಿದಾಡುತ್ತಿರುವುದು. ಬಾ. ಬಾ. ನಿನ್ನ ಈ ವಿಶಾಲವಾದ ಭಾಲ ದರ್ಪಣದಲ್ಲಿ ನನ್ನ ಭಾಗ್ಯೋದಯದ ಪ್ರತಿಬಿಂಬವನ್ನು ನೋಡುತ್ತೇನೆ (ಉತ್ತರೆಯನ್ನು ಅಪ್ಪಿಕೊಳ್ಳುವನು.)

ಉತ್ತರಾ:— ಇದೇನು ನನ್ನ ಕುಂಕುಮ ತಿಲಕವು ಅಳಿಸಿ ಹೋಯಿತು! (ತೆರೆಯಲ್ಲಿ ರಣದುಂದುಭಿ ಮೊಳಗುವುದು)

ಅಭಿ:— ಕೇಳು, ರಣದುಂದುಭಿಯ ಧ್ವನಿಯನ್ನು ಕೇಳು. ಯುದ್ಧಕ್ಕೆ ಹೊರಡುವ ಸಮಯವು ತೀರಾ ಸಮೀಪಿಸಿತು. ಪ್ರಿಯೆ, ನಾನಿನ್ನು ಜಾಗ್ರತೆಯಾಗಿ ಹೋಗಲೇಬೇಕು. (ಉತ್ತರೆಯನ್ನು ದೂರ ಸರಿಸುವನು.)

ಉತ್ತರಾ:— ಹಾಗಾದರೆ ಯುದ್ಧಕ್ಕೆ ಹೊರಡುವ ಪ್ರಸಂಗವು ತಮ್ಮ ಮೇಲೆಯೆ ಬಂದಿತೆ?

ಅಭಿ:— ನಿನಗೆ ಈ ವಿಷಯವನ್ನು ಎಷ್ಟು ಹೇಳಿದರೂ ತಿಳಿಯದು. ತ್ರಿಗರ್ತರಾಜನು ಅತ್ತ ಕಡೆಗೆ ತನ್ನ ಐದು ಜನ ಬಾಂಧವರ ಸಹಾಯದಿಂದ, ನಮ್ಮ ಮೇಲೆ ಸಾಗಿಬಂದಿರುವನು. ಮತ್ತು ಇತ್ತ ಕಡೆಗೆ ದ್ರೋಣಾಚಾರ್ಯರು ಚಕ್ರವ್ಯೂಹವನ್ನು ರಚಿಸಿರುವರು. ಚಕ್ರವ್ಯೂಹವನ್ನು ಭೇದಿಸುವ ವಿದ್ಯೆಯನ್ನು ಶ್ರೀಕೃಷ್ಣನು ಪ್ರದ್ಯು

ಮ್ಮನು ನನ್ನ ತಂದೆಯು ಮತ್ತು ನಾನು ಈ ನಾಲ್ವರೇ ಬಲ್ಲೆವು. ಆದರೆ ಶ್ರೀಕೃಷ್ಣನೂ ನನ್ನ ತಂದೆಯೂ ಸಂಶಪ್ತಕರ ಕೂಡ ಯುದ್ಧಕ್ಕೆ ಹೋಗಿರುತ್ತಾರೆ. ಎಂದಮೇಲೆ ಚಕ್ರವ್ಯೂಹವನ್ನು ಭೇದಿಸಿ ಸ್ವಜನರ ಸಂಕಟವನ್ನು ನಿವಾರಿಸುವ ಕರ್ತವ್ಯವನ್ನು ನಾನಲ್ಲದೆ ಮತ್ತಾರು ಮಾಡಲು ಸಮರ್ಥರಿರುವರು? ಅದಕ್ಕೋಸುಗ ನಾನು ಯುದ್ಧಕ್ಕೆ ಹೋಗಲೇಬೇಕು.

ಉತ್ತರಾ:— ಸರಿ ಹಾಗಾದರೆ. ತಾವು ಯುದ್ಧಕ್ಕೆ ಹೋಗುವುದಾದರೆ ನನ್ನನ್ನೂ ಕರೆದುಕೊಂಡು ನಡೆಯಿರಿ.

ಅಭಿ:— ನಿನ್ನನ್ನು ಜೊತೆಗೆ ಕರೆದುಕೊಂಡು ಹೋಗುವುದು ನಿನ್ನ ಮನಸ್ಸಿಗಾದರೂ ಯೋಗ್ಯವೆನಿಸುವುದೆ?

ಉತ್ತರಾ:— ಹೌದು, ನಾನೂ ತಮ್ಮ ಜೊತೆಗೆ ಬರತಕ್ಕವಳೇ. ನಾಥಾ, ಬೇಡ ಬೇಡ, ಈ ದೀನ ದಾಸಿಯನ್ನು ದುಃಖಸಾಗರದಲ್ಲಿ ನೂಕಿ ಹೋಗಬೇಡಿರಿ.

ರಾಗ ಬೇಹಾಗ, ತಾಳ ದಾದರಾ.

ಪ್ರಿಯನಾಥಾ । ನಿರಾಕರಿಸಿ । ಪೋಗಬೇಡಾ ॥ ಪಲ್ಲ ॥ ದಯವಂತಾ । ವಿರಹವ್ಯಥೆ । ತಾಳಲಾರೆ ॥ ಭಯದೂರ । ಸುವಂಶವರ । ಸಮರಧೀರ ॥ ೧ ॥

(ತೆಕ್ಕೆ ಬೀಳುವಳು.) (ತೆರೆಯಲ್ಲಿ ದುಂದುಭಿ ಧ್ವನಿಯಾಗುವದು.)

ಅಭಿ:— (ಸ್ವ) ಏನು ಮಾಡಲಿ? ಪ್ರೇಮವು ಮತ್ತು ಕರ್ತವ್ಯವು ಇವೆರಡರ ಮಧ್ಯದಲ್ಲಿ ಸಿಕ್ಕು ಹೋರಾಡುತ್ತಿರುವೆನು. ಛೇ—ಕರ್ತವ್ಯಕ್ಕೋಸುಗ ನಾನು ಈ ಪ್ರೇಮ ಪಾಶವನ್ನು ಹರಿದು ಬಿಸಾಡಲೇ ಬೇಕು. ಹೃದಯವೆ, ಪ್ರೇಮಕ್ಕೆ ವಶವಾಗಬೇಡ. ಕರ್ತವ್ಯಕ್ಕಾಗಿ ಕಠೋರವಾಗು. (ಉತ್ತರೆಯನ್ನು ದೂರ ಸರಿಸಿ.) ಉತ್ತರೆ, ವೀರಪತ್ನಿಯಾದ ನಿನಗೆ ಇದು ಭೂಷಣವೆ? ವಿಚಾರ ಮಾಡು. ಈ ದಿವಸದ ಯುದ್ಧದ ಧಾರಾತೀರ್ಥದಲ್ಲಿ ದೇಹವನ್ನು ಬಿಟ್ಟು ವೀರಸ್ವರ್ಗವನ್ನು ಪಡೆಯುವ ಭಾಗ್ಯವು ನನಗೆ ಲಭಿಸಿದರೆ—

ಉತ್ತರಾ:— ಬೇಡ ಬೇಡ ಮಹಾರಾಜ, ನಿಮಗೆ ನನ್ನ ಕೊರಳಾಣೆಯಿದೆ. ಇಂತಹ ಅಮಂಗಲ ಮಾತುಗಳನ್ನು ಉಚ್ಚರಿಸಬೇಡಿರಿ.

ಅಭಿ:— ಪ್ರಿಯೆ, ನಾನು ನಿನ್ನ ಕೊರಳು ಸಾಕ್ಷಿಯಾಗಿ ಹೇಳುವೆನು. (ಕುತ್ತಿಗೆಯ ಮೇಲೆ ಕೈ ಇರಿಸುವನು. ಮಂಗಲಸೂತ್ರವು ಹರಿದುಬೀಳುವುದು.)

ಉತ್ತರಾ:— ಅಮ್ಮಯ್ಯ, ಇದೇನು ಅಪಶಕುನವು? ಮಂಗಲಸೂತ್ರವು ಹರಿಯಿತು! ಪ್ರಿಯಕರಾ, ಇನ್ನು ಮೇಲೆ ಒಂದು ನಿಮಿಷ ಕೂಡ ತಮ್ಮ ವಿಯೋಗದುಃಖವನ್ನು ಸಹಿಸಲಾರೆನು. ನನ್ನ ಮನಸ್ಸಿನಲ್ಲಿ ನಾನಾತರದ ವಿಚಾರಗಳು ಬರುತ್ತಿರುವವು.

ಅಭಿ:— (ಸ್ವ) ಇನ್ನು ಮೇಲೆ ಇಲ್ಲಿಂದ ಬೇಗನೆ ಕಾಲುಕಿತ್ತಲೇ ಬೇಕು. (ಪ್ರ) ಉತ್ತರೆ, ಇದೋ ನಾನು ಹೊರಟೆನು. ಒಂದು ಸಲ ಮುಗುಳು ನಗೆಯಿಂದ ನಕ್ಕು, ಹೋಗುವುದಕ್ಕೆ ಅಪ್ಪಣೆಯನ್ನು ಕೊಡು ನೋಡುವಾ.

ಉತ್ತರಾ:— ತುದಿನಾಲಿಗೆಯ ಮೇಲೆ ಸುಳಿದಾಡುವಂಥ 'ಹೋಗು' ಎಂಬ ಶಬ್ದವು ಹೊರಗೆ ಬಾರದೆ ಅಲ್ಲಿಯೆ ಕುಣಿಯುತ್ತಿರುವದು. ಹೋಗು, ಪರಾಕ್ರಮಿಯಾದ ನರವೀರನೇ ಹೋಗು. ವೀರಪುತ್ರಿಯೂ ವೀರ ಪತ್ನಿಯೂ ಆದ ಉತ್ತರೆಯು ನಿಮಗೆ ನಿಮ್ಮ ಕರ್ತವ್ಯಕ್ಕೋಸುಗ ಹೋಗುವುದಕ್ಕೆ ಆನಂದದಿಂದ ನಿರೋಪ ಕೊಟ್ಟಿರುವಳು.

ಅಭಿ:— ಅಹಹಾ! ಉತ್ತರೆ ನೀನು ಧನ್ಯಳು ಧನ್ಯಳು. ನಿಜವಾದ ವೀರಾಂಗನೆಯು. ಆರ್ಯಲಲನಾಮಣಿಯೆಂಬ ನಾಮವು ನಿನಗೆ ಶೋಭಿಸುವುದು. ಒಳ್ಳೇದು ನಾನು ಇನ್ನು ಬರಲೆ? (ಹೋಗತೊಡಗುವನು.)

ಉತ್ತರಾ:— ನಾಥಾ, ಸ್ವಲ್ಪ ತಡೆಯಿರಿ. ಈ ತಮ್ಮ ಸುಕುಮಾರ ದೇಹಕ್ಕೆ ಸ್ವಲ್ಪ ಗಂಧವನ್ನು ಲೇಪಿಸುತ್ತೇನೆ.

ಅಭಿ:— ಪ್ರಿಯೆ, ಸುಮ್ಮನೆ ನಿನಗೇತಕ್ಕೆ ಈ ಶ್ರಮವು. ಅದೋ ರಣದೇವತೆಯು ಶತ್ರುಗಳ ರಕ್ತವೆಂಬ ಚಂದನದ ಗಂಧವನ್ನು ಲೇಪಿಸುವುದಕ್ಕೆ ಉಲ್ಹಾಸದಿಂದ ನನ್ನನ್ನು ಕರೆಯುತ್ತಿರುವಳು, — ಬರುವೆನು. ನಾನು ಬರುವೆನು. ಆ.

ಉತ್ತರಾ:— ನಾಥಾ, ಸ್ವಲ್ಪ ತಡೆಯಿರಿ ಪಂಚಾರತಿಯನ್ನಾದರೂ ಬೆಳಗುತ್ತೇನೆ. ಏನೇ ಮಲ್ಲಿಕೆ, ಚಂದ್ರಿಕೆ,—

ಅಭಿ:— ಪ್ರಿಯೆ, ಆ ಪಂಚಾರತಿಯಲ್ಲಾದರೂ ವಿಶೇಷವೇನಿದೆ? ಅಖಂಡವಾಗಿ ಸ್ನೇಹಭರಿತವಾದ ಈ ನೇತ್ರ ನೀರಾಂಜನಗಳಿಂದ ನೀನು ನನಗೆ ದಿನಾಲು ಆರತಿಯನ್ನು ಮಾಡುತ್ತಿರುವೆಯಲ್ಲವೆ? ಅದೇ ಸಾಕು. ನನಗೆ ಬೇರೆ ಪಂಚಾರತಿ ಬೇಡ.

ಉತ್ತರಾ:—ಅದೇನು ಇಲ್ಲ. ನಾನು ತಮಗೆ ಪಂಚಾರತಿಯನ್ನು ಬೆಳಗಿಯೇ ತಮ್ಮನ್ನು ಕಳುಹುವೆನು.

(ದಾಸಿಯರು ಆರತಿಯನ್ನು ತರುವರು ಉತ್ತರೆಯು ಅಭಿಮನ್ಯುವಿಗೆ ಬೆಳಗುವಳು.)

ಅಭಿ:— ನಾನು ಇನ್ನು ಬರುವೆನು. (ಹೋಗುವಾಗ ಅಭಿಮನ್ಯುವಿನ ಖಡ್ಗವು ಆರತಿಗೆ ತಗಲಿ ಅದು ಕೆಳಗೆ ಬಿದ್ದು ನೊಂದುವುದು.)

ಉತ್ತರಾ:— ಹಾಯ್ ಹಾಯ್ ದೈವವೆ; ಅಪಶಕುನಗಳು ಮಿತಿಮೀರಿದವು. ನಾಥಾ ನಾಥಾ—

ಅಭಿ:— ಧೀರನಾದ ವೀರ ಪುರುಷನು ಶಕುನಾಪಶಕುನಗಳನ್ನು ಲಕ್ಷಿಸುವುದು ಹೇಡಿತನದ ಕೆಲಸವಾಗಿದೆ. (ಹಿಂದುರುಗಿ ನೋಡಿ ಹೊರಟು ಹೋಗುವಾಗ ಉತ್ತರೆಯು 'ಹಾ ದೈವವೆ' ಎಂದು ಮೂರ್ಛೆ ಬೀಳುವಳು).

ಎರಡನೆಯ ಪ್ರಸಂಗ

(ಸ್ಥಳ: ರಣರಂಗದ ರಸ್ತೆ. ಮೇಘನಾದನು ಪ್ರವೇಶಿಸುವನು.)

ಮೇಘ:—ಬ್ರಹ್ಮಚರ್ಯದಿಂದ ಇರು. ಏನಾದರೂ ಮಾಡು ಬ್ರಹ್ಮಚರ್ಯದಿಂದ–ಆಜನ್ಮ ಬ್ರಹ್ಮಚರ್ಯದಿಂದ–ಇರು. ಆಮೇಲೆ ಬ್ರಹ್ಮಚಾರಿಯಾದ ಭೀಷ್ಮರಂತೆ, ಶರಪಂಜರದ ಮೇಲೆ ಇಲ್ಲವೆ ಪ್ರಖರವಾದ ಅಗ್ನಿಯಲ್ಲಿ ಹುರುಪಳಿಸಿ ಮಹಾ ಕಷ್ಟದಿಂದ ಮರಣ ಬಂದರೂ ಚಿಂತೆಯಿಲ್ಲ. ಜಗತ್ತಿನ ಪೇಟೆಯಲ್ಲಿ ಬ್ರಹ್ಮಚಾರಿಗಳ ಸಂಖ್ಯೆಯು ಹೆಚ್ಚುತ್ತ

ಹೋದರೆ ಪುರುಷರ ಬೆಲೆಯು ಮಿತಿಮೀರಿ ಈ ಹೆಂಗಸರ ಡೌಲು—ಅಹಂಕಾರವು ತನ್ನಷ್ಟಕ್ಕೆ ತಾನೇ ಇಳಿದುಹೋಗುವುದು. ಈ ಸ್ತ್ರೀಯರಿಗೆ ಜೀವವಂತವಾಗಿರಲು ಸ್ವರ್ಗವು ಕಾಣಿಸಬಹುದು, ಆದರೆ ಲಗ್ನಕ್ಕೋಸುಗ ಒಬ್ಬ ಪತಿಯು ಕೂಡ ಕಾಣಿಸಬಾರದು. ಇಂತಹ ಸ್ಥಿತಿಯಾಗಬೇಕು! ಸ್ತ್ರೀಯರಿಗೆ ಗಂಡಸೆಂದರೆ ಮೋಕ್ಷಕ್ಕಿಂತಲೂ ದುರ್ಮಿಳವಾಗಬೇಕು. ಎಂದರೆ ಒಳ್ಳೇ ಚಮತ್ಕಾರವಾಗುವುದು. ಈ ಸ್ತ್ರೀಯರು ತಮ್ಮ ಪತಿಗಳನ್ನು ಕಪಲೆಬಸವಣ್ಣನಂತೆ ತಿಳಿದು ಅವರನ್ನು ಸಂಸಾರದ ಬಂಡಿಗೆ ಹೂಡಿ ಬೇಕಾದಹಾಗೆ ಕುಣಿಸುತ್ತಾರೆ. ಗಂಡಸ ಲಗಾಮು ತಮ್ಮ ಕೈಯಲ್ಲಿ, ತಮಗೆ ಮಾತ್ರ ಅನಿರ್ಬಂಧ. ಧಿಕ್ಕಾರ ಧಿಕ್ಕಾರವಿರಲಿ ಈ ಸ್ತ್ರೀಯರಿಗೆ! ತಾತ್ಪರ್ಯವೇನೆಂದರೆ ಲಗ್ನದಲ್ಲಿ ಏನೂ ಸ್ವಾರಸ್ಯವಿಲ್ಲ. ಮತ್ತು ಸಂಸಾರದಲ್ಲಿ ಅರ್ಥವಿಲ್ಲದಿದ್ದರೂ ಅನರ್ಥವು ಸಂಪೂರ್ಣವಾಗಿದೆ. ನಾನು ಸ್ವಾನುಭವದಿಂದ ಹೇಳುತ್ತೇನೆ. ನಿಶ್ಚಯವಾಗಿಯೂ ಪರಿಹಾಸ್ಯ ಮಾಡುವುದಿಲ್ಲ. ಏಕಾಂಗಿಯಾಗಿ ಸೋಟಭಯಯಂತೆ ಆಯುಷ್ಯಪ್ರವಾಸವನ್ನು ಕಳೆಯಬೇಕಲ್ಲದೆ, ಈ ಲಗ್ನವೆಂಬ ಕಬ್ಬಿಣದ ಬೇಡಿಯನ್ನು ಕಾಲಿನಲ್ಲಿ ತೊಡರಿಸಿಕೊಂಡು ಸಂಸಾರದ ಕೊಂಡವಾಡೆಯಲ್ಲಿ ಹೆಂಡತಿಯ ಗುಲಾಮನಾಗಿರುವುದು ಸರ್ವಥಾ ಬೇಡ. ಜಗತ್ತಿನಲ್ಲಿ ಬೇಕಾದಂತಹ ಪಾಪವನ್ನು ಮಾಡಬಹುದು, ಆದರೆ ಈ ಲಗ್ನದ ಪಾಪವನ್ನು ಮಾಡಿ ಈ ಹೆಂಡತಿಯೆಂಬ ಬ್ರಹ್ಮಪಿಶಾಚಿಯನ್ನು ಬೆನ್ನಿಗೆ ಕಟ್ಟಿಕೊಳ್ಳಬಾರದಪ್ಪಾ! ಪ್ರಾಣಿಯು ಹೇಗೆ ಬಂದನೋ—ಹಾಗೇ ಹೋದನು, ಈ ತತ್ವವು ನಿಜವಾಗಬೇಕು. ಬ್ರಹ್ಮಚಾರಿಯಾಗಿ ಜನ್ಮಕ್ಕೆ ಬಂದವನು; ಬ್ರಹ್ಮಚಾರಿಯಾಗಿಯೇ ಸತ್ತುಹೋಗಬೇಕು. ಆದರೆ—ಇದೋ ಈ ನಮ್ಮ ಗೃಹಲಕ್ಷ್ಮಿಯು-ಛೇ-ನಮ್ಮ ಪೀಡಾಲಕ್ಷ್ಮಿಯು ಇತ್ತಕಡೆಗೇ ಬಂದಳು.

ಸೌ ದಾ:— (ಪ್ರವೇಶಮಾಡಿ) ಏಕೆ ನೀವು ಇನ್ನೂ ಇಲ್ಲೇ ಒದ್ದಾಡುತ್ತೀರಿ ರಿ?

ಮೋಘ:— ಸಂಸಾರ ಸಮುದ್ರದಲ್ಲಿ ಪೆಟ್ಟು ತಿಂದು-ತಿಂದು ನಾನೇ ಏಕೆ; ನನ್ನ ಪ್ರಾಣವೂ ಒದ್ದಾಡುತ್ತಿರುವುದು.

ಸೌದಾ:— ಓಹೋ, ಸರಿ ತಿಳಿಯಿತು. ಯುದ್ಧಕ್ಕೆ ಹೋಗಬೇಕಾಗುವುದೆಂದು ಏನಾದರೂ ಠಕ್ಕುತನವನ್ನು ಮಾಡಿ ತಪ್ಪಿಸುವ ವಿಚಾರವಿದ್ದಂತೆ ಕಾಣುವುದು. ಅದೇನೂ ಇಲ್ಲ ಇನ್ನು ಮೇಲೆ ನಿಮ್ಮ ಲಗ್ನವು ಯುದ್ಧದಲ್ಲಿಯೇ ಆಗಲಿ.

ಮೋಘ:— ಏನೇ ಲಗ್ನವೆಂದರೇನು ? ಯುದ್ಧವೆ ! ಲಗ್ನ ಮಾಡಿಕೊಂಡು ನಿನ್ನನ್ನು ಬೆನ್ನಿಗೆ ಕಟ್ಟಿಕೊಂಡಾಗಲೇ ಯುದ್ಧಕ್ಕೆ ಪ್ರಾರಂಭಯಿತು. ಪರಮೇಶ್ವರಾ ! ನನಗೆ ಬೋರ್ಜಗಲಿಯ ಮೇಲೆಯಾದರೂ, ಆಜನ್ಮ ಬ್ರಹ್ಮಚಾರಿಯಾಗಿರಬೇಕೆಂಬ ಬುದ್ಧಿಯನ್ನು ಕೊಟ್ಟಿದ್ದರೆ ಎಷ್ಟು ಒಳ್ಳೇದಾಗುತ್ತಿತ್ತು !

ಸೌದಾ:— ಸಾಕು, ಸಾಕು, ನಿಮ್ಮಂಥ ದುಗ್ಗಾಣಿ ಬ್ರಹ್ಮಚಾರಿಗಳನ್ನು ನಾನು ಬೇಕಾದಷ್ಟು ನೋಡಿರುವೆನು. ಬ್ರಹ್ಮಚಾರಿಯೆಂದು ಇಲ್ಲಿ ಮೆರೆಯುವುದು ; ಅತ್ತಕಡೆಗೆ—

ಮೋಘ:— ಸಾಕು, ಸಾಕು ಎಲ್ಲವೂ ಗೊತ್ತಾಯಿತು. ಲಗ್ನದ ಹೆಂಡತಿಯೊಡನೆ ಸಂಸಾರವನ್ನು ಮಾಡದವನೇ ಬ್ರಹ್ಮಚಾರಿಯೆಂದು ನನ್ನ ಅಭಿಪ್ರಾಯವದೆ.

ಸೌದಾ:— ಹಾಗಾದರೆ ಲಗ್ನ ಮಾಡಿಕೊಂಡು ಸುಮ್ಮನೇ ಏತಕ್ಕೆ ಮಾಡಿದಿರಿ ಈ ಸಂಸಾರದ ವಿಸ್ತಾರವನ್ನು ?

ಮೋಘ:— ವಿಸ್ತಾರವನ್ನು ಮಾಡಿದ್ದೇನೋ ನಿಜ. ಆದರೆ ಅದನ್ನು ಈಗ ನಿಸ್ತರಿಸುವದು ಮಾತ್ರ ಬಹು ದುಸ್ತರವಾಗಿದೆ.

ಸೌದಾ:— ಸ್ವಲ್ಪ ತಡೆಯಿರಿ, ನಿಮ್ಮ ಮುಂಡವನ್ನು ಯುದ್ಧಕ್ಕೆ ಕಳಿಸುವ ವ್ಯವಸ್ಥೆಯನ್ನು ನಾನು ಈಗಲೇ ಮಾಡುತ್ತೇನೆ. (ಹೋಗುವಳು)

ಮೋಘ:— ಏನೇ, ಇಷ್ಟರಲ್ಲಿಯೇ ನನ್ನ ವ್ಯವಸ್ಥೆಯನ್ನು ಮಾಡಬೇಡ. ಪಾಪ ! ಬಡಪ್ರಾಣಿ. ಇನ್ನೂ ನಾಲ್ಕು ದಿವಸ ಈ ಜಗತ್ತಿನಲ್ಲಿ

ಬಹುಕಿಕೊಂಡಿರಲಿ. ಮಾಡಮ್ಮಾ ಮಾಡು, ಏನೇನು ನನ್ನ ಅವಸ್ಥೆ ಮಾಡುವಿಯೋ ಮಾಡು. ನಾವೇ ಸ್ವಬುದ್ಧಿಯಿಂದ ವಿಪತ್ತನ್ನು ಮೈಮೇಲೆ, ತಂದುಕೊಂಡಮೇಲೆ, ಅದನ್ನು ಭೋಗಿಸಲೇ ಬೇಕಲ್ಲವೆ? ಆದರೆ ನಾನೊಬ್ಬನೇ ಹೀಗೆ ಅಳುತ್ತಾ ಕುಳಿತರೆ ಆಗುವುದೇನು ನನ್ನಂತೆ ಯಾವತ್ತು ಪುರುಷಜಾತಿಯುವರು ಒಂದೇ ಕಾಲಕ್ಕೆ ಒಂದೇಸ್ವರದಲ್ಲಿ "ಧಿಕ್ಕಾರ ಧಿಕ್ಕಾರವಿರಲಿ ಈ ಸ್ತ್ರೀಯರಿಗೆ" ಎಂದು ಆಕ್ರೋಶಮಾಡಬೇಕು.

ಸೌದಾ:— ಧಿಕ್ಕಾರವೇ—ಯಾರಿಗೆ ಸ್ತ್ರೀಯರಿಗೋ? ಸ್ತ್ರೀಜಾತಿಗೆ ಧಿಕ್ಕಾರ ಮಾಡುವಿರಿ. ಆದರೆ ಸ್ತ್ರೀಯರೇ ಇಲ್ಲದಿದ್ದರೆ—

ಮೋಘ:— ಪುರುಷರು ಹುಟ್ಟುತ್ತಲೇ ಇರಲಿಲ್ಲಾ ಇದೇ ಅಲ್ಲವೇ ನಿನ್ನ ಅಭಿಪ್ರಾಯವು? ಪುರುಷರು ಸ್ತ್ರೀಯರ ಉದರದಲ್ಲಿ ಜನ್ಮಿಸಬೇಕಾಗುವುದೆಂಬ ವಿಷಯವು ನನಗೆ ಹುಟ್ಟುವ ಪೂರ್ವದಲ್ಲಿಯೆ ತಿಳಿದಿದ್ದರೆ ನಾನು ಬ್ರಹ್ಮದೇವರ ಮುಂದೆ "ವಿಧಾತಾ, ನನ್ನನ್ನು ಸ್ತ್ರೀಯರ ಉದರದಲ್ಲಿ ಜನ್ಮಿಸಬೇಡ." ಎಂದು ಹಟ ಹಿಡಿಯುತ್ತಿದ್ದೆ. ಇಷ್ಟು ಮಾಡಿಯೂ ನನ್ನ ಅಭಿಪ್ರಾಯವು ಆ ನಾಲ್ಕು ಮುಖದವನ ತಲೆಯಲ್ಲಿ ಬಿಂಬಿಸದಿದ್ದರೆ ತಾಯಿಯ ಉದರದಿಂದ ಪ್ರೇತವೇ ಜನ್ಮಿಸಿ ಬರುವಂತೆ, ವರವನ್ನಾದರೂ ಕೇಳಿಕೊಳ್ಳುತ್ತಿದ್ದೆ. ಆದರೆ ಇನ್ನು ಮೇಲೇತಕ್ಕೆ ಅದರ ವಿಚಾರವು? (ಸೌದಾಮಿನಿಯು ತಂದ ಆಯುಧಗಳನ್ನು ನೋಡಿ ಉಸುರು ಗರೆದು) ಆದರೆ ಇದೇನು?

ಸೌದಾ:— ಇದು ನಿಮ್ಮ ಯುದ್ಧಯಾತ್ರೆಯ ಸಿದ್ಧತೆಯು.

ಮೋಘ:— ಯುದ್ಧ ಯಾತ್ರೆಯನ್ನುವುದಕ್ಕಿಂತಲೂ ಸ್ಮಶಾನ ಯಾತ್ರೆಯೆಂದು ಹೇಳು ಅದರಲ್ಲೇನು?

ಸೌದಾ:— ಯಾಕೆ ಹೀಗೆ ಭಯಪಡುವಿರಿ? ನೀವು ಪರಾಕ್ರಮಶಾಲಿಗಳಲ್ಲವೇ?

ಮೋಘ:— (ಅಳುಬುರುಕ ಸ್ವರದಲ್ಲಿ) ಹೌದು ನಾನು ಪರಾಕ್ರಮಶಾಲಿ, ರಣಧೀರ, ಆದರೆ—

ಸೌದಾ:— ಆದರೆ ಏನು ನಿಮ್ಮಂತಹ ಹೇಡಿ ಪುರುಷರಿಗಿಂತಲೂ, ಪರಾಕ್ರಮದಲ್ಲಿ ನಾವು ಸ್ತ್ರೀಯರೇ ಮೇಲು. ಹೂಂ ಇರಲಿ ತೆಗೆದುಕೊಳ್ಳಿರಿ ಈ ಧನುಷ್ಯವನ್ನು

ಮೋಘ:— ಪ್ರಿಯೆ, ನಿನ್ನ ಈ ಡೊಂಕಾದ ಹುಬ್ಬುಗಳಿಗಿಂತ ಈ ಧನುಷ್ಯವು ಹೆಚ್ಚು ಪರಾಕ್ರಮಿ ಇರುವದೇನು ? (ಧನುಷ್ಯ ತಕ್ಕೊಳ್ಳುವನು)

ಸೌದಾ:— ತೆಗೆದುಕೊಳ್ಳಿರಿ ಈ ಬಾಣವನ್ನು

ಮೋಘ:— ಬೇಡ ಬೇಡಾ. ನಿನ್ನ ತೀಕ್ಷ್ಣವಾದ ನೇತ್ರಬಾಣದಿಂದ ಎಷ್ಟು ವ್ಯಥೆಯಾದರೂ ಅದನ್ನು ಸಹಿಸಬಹುದು. ಆದರೆ ಈ ಬಾಣವು ಮಾತ್ರ ಬೇಡ-

ಸೌದಾ:— ಹೂಂ ಈ ಶಿರಸ್ತ್ರಾಣವನ್ನು ತಲೆಯ ಮೇಲೆ ಧರಿಸಿರಿ.

ಮೋಘ:— ಈ ಶಿರಸ್ತ್ರಾಣವನ್ನು ಧರಿಸುವಷ್ಟರಲ್ಲಿ ನಾನು ಗತಪ್ರಾಣನಾಗುವುದೇ ನಿಜ.

ಸೌದಾ:— ಹೂಂ ಇರಲಿ. ಮೊದಲು ಈ ಶಿರಸ್ತ್ರಾಣವನ್ನು ತಲೆಯ ಮೇಲೆ ಧರಿಸಿರಿ,

ಮೋಘ:— ತಾರಮ್ಮಾ ತಾ ಇಲ್ಲವಾದರೆ ಬಿಸಿಬಿಸಿಯಾದ ಒದೆಗಳನ್ನು ತಿನ್ನಬೇಕಾದೀತು.

ಸೌದಾ:— ಹೂಂ ತೆಗೆದುಕೊಳ್ಳಿರಿ ಈ ಕತ್ತಿಯನ್ನು.

ಮೋಘ:— ಈ ಕತ್ತಿಗಿಂತಲೂ ನಿನ್ನ ನಾಲಿಗೆಯನ್ನೇ ಕೊಯ್ದುಕೊಡು. ಏಕೆಂದರೆ ಕತ್ತಿಗಿಂತಲೂ ನಿನ್ನ ನಾಲಿಗೆಯೇ ಹದನವಾಗಿದೆ.

ಸೌದಾ:— ಏನು ಮಾತಾಡುವಿರಿ?

ಮೋಘ:— ಕ್ಷಮಿಸು. ಆದರೆ ಯಾವತ್ತೂ ಅಲಂಕರಿಸುವದಾಯಿತಷ್ಟೇ?

ಸೌದಾ:— ಆಯಿತು. ಅಹಹ! ಈಗ ನೀವು ಒಳ್ಳೇ ಶೂರಸರದಾರರಂತೆ ಕಾಣಿಸುವಿರಿ. ಬಣಿವೆಯ ಮೇಲಿನ ಬೆದರು; ಒಳ್ಳೇ ದಿವ್ಯರೂಪ!

ಮೇಘ:— ಪ್ರಿಯೆ, ಇದೇನು ವಿಚಾರಿಸುವೆ! ಹಾಗೆ ಇರುವುದು ನನ್ನ ಪ್ರತಾಪ! ಆದರೆ ಎಷ್ಟು ಹೊತ್ತು ಸಹಿಸಲಿ ಈ ತಾಪ?

ಸೌದಾ:— ನಡೆಯಿರಿ ಇನ್ನು ಯುದ್ಧಕ್ಕೆ.

ಮೇಘ:— ಏನು ಹೇಳಿದೆ? ಯುದ್ಧಕ್ಕೆ ಹೋಗಬೇಕೆ?

ಸೌದಾ:— ನನ್ನ ಅರ್ಧ ವಚನದಂತೆ ನಡೆಯುವೆನೆಂದು ನೀವು ನನಗೆ ವಚನ ಕೊಟ್ಟಿರುವಿರಷ್ಟೆ?

ಮೇಘ:— ಹೌದು. ಈಗ ಅರ್ಧ ವಚನದಂತೆ ನಡೆಯಲಿಲ್ಲವೆ ನಾನು? ನಿನ್ನ ಅಭಿಪ್ರಾಯವೇನಿತ್ತು? ವೇಷವನ್ನು ಧರಿಸಿರಿ ಯುದ್ಧಕ್ಕೆ ಹೋಗಿರಿ, ವೇಷವನ್ನು ಧರಿಸದೆ, ಅರ್ಧ ವಚನವು ಮುಗಿಯಿತು. ಇನ್ನು ಯುದ್ಧಕ್ಕೆ ಏತಕ್ಕೆ ಹೋಗಲಿ!

ಸೌದಾ:— ಅಭಿಮನ್ಯುಮಹಾರಾಜರು ಯುದ್ಧಕ್ಕೆ ಹೋಗಿರುವರಲ್ಲವೆ?

ಮೇಘ:— ಮಹರಾಜರು ಮೂರ್ಖರಿದ್ದಾರೆ. ಬಂಗಾರದಂತಹ ಹೆಂಡತಿಯ ಸಹವಾಸದಲ್ಲಿ ಸುಖದಿಂದ ಸಂಸಾರ ಮಾಡುವುದನ್ನು ಬಿಟ್ಟು, ಅವರಿಗೆ ಎಲ್ಲಿಯ ಅನಿಷ್ಟ ಪ್ರಾರಬ್ಧವು ನೆನಪಾಯಿತೋ ಕಾಣೆ. ಆದರೆ ಪ್ರಿಯೆ, ನಿನ್ನಂತಹ ಬೆಡಗುಗಾರ್ತಿಯಾದ ಹೆಂಡತಿಯನ್ನು ಬಿಟ್ಟು ಹೋಗಲಿಕ್ಕೆ ನಾನೇನು ಅಂತಹ ಮೂರ್ಖನಲ್ಲ.

ಸೌದಾ:— ಹೌದು, ಹೌದು. ನೀವು ಅಂತಹ ಚತುರರೇ ಇರುವಿರಿ. ನಡೆಯಿರಿ, ಇಲ್ಲಿಂದ ಹೊರಟು ಹೋಗಿರಿ.

ಮೇಘ:— ನನ್ನ ಮುದ್ದಿನ ಅರಗಿಳಿಯೆ, ಬೇಡಬೇಡ. ನಾನು ಹಲವು ಬಗೆಯಿಂದ ನಿನ್ನ ಇಚ್ಛೆಯನ್ನು ಪೂರ್ಣಮಾಡುವೆನು. ನಿನ್ನನ್ನು ಗೌರಿಯಂತೆ ಮಣೆಯ ಮೇಲೆ ಕೂಡಿಸಿ ಪೂಜಿಸುವೆನು. ಪ್ರಿಯೆ, ನಿನ್ನ ಆಜ್ಞೆಯಂತೆ ನಡೆದು, ದಿನಾಲು ನಿನ್ನ ಕೂಡ ಮಾಡುವ ಪ್ರೇಮಕಲಹವೇ ನನಗೆ ಯುದ್ಧವು. ಮತ್ತು ನಿನ್ನೊಡನೆ ಮನೆಯಲ್ಲಿ ಸಾಕಿದ ಕೋಳಿಯಂತೆ ಸಂಸಾರವನ್ನು ಮಾಡಿ ನಿನ್ನ ಪಾದಗಳಲ್ಲಿ ತನು ಮನ ಧನಗಳನ್ನು ಅರ್ಪಿಸುವುದೇ ನನಗೆ ರಾಜ

ಕಾರಣವು. ಪ್ರಿಯೆ, ಬೇಕಾದ ಶಿಕ್ಷೆಯನ್ನು ಕೊಡು. ಆದರೆ ಈ ದೀಕ್ಷೆಯು ನನಗೆ ಬೇಡಾ; ಇಷ್ಟೇ ನಿನ್ನಲ್ಲಿ ಭಿಕ್ಷೆ ಬೇಡುವೆನು.

ಸೌದಾ:— ಅಭಿಮನ್ಯು ಮಹಾರಾಜರು ಯುದ್ಧಕ್ಕೆ ಹೋದರು.

ಮೋಘ:— ಹೌದು ಉತ್ತರಾದೇವಿಯವರು ಅವರನ್ನು ತಡೆಯುವುದಕ್ಕೆ ಎಷ್ಟೋ ಪ್ರಯತ್ನಮಾಡಿದರು. ನೀನು ನನ್ನನ್ನು ದಬ್ಬಿ ಬಿಡುವುದಕ್ಕೆ ಯತ್ನಿಸುತ್ತಿರುವಿ. ಅವರು ಆ ಕಾಲಕ್ಕೆ ಶೋಕ ಮಾಡಿದರು. ನೀನು ನನ್ನನ್ನು ನೋಡಿ ನಗುತ್ತಿ. ಇದೇ ಏನು ಪತಿವ್ರತೆಯರ ರೀತಿ?

ಸೌದಾ:— ಸ್ವದೇಶದ ಮರ್ಯಾದೆಯನ್ನು ರಕ್ಷಿಸುವದಕ್ಕೋಸುಗ—

ಮೋಘ:— ಸ್ವತಃ ನಮಗೇ ಮರ್ಯಾದೆ ಇಲ್ಲ; ಇನ್ನು ಸ್ವದೇಶ ಮರ್ಯಾದೆ ಯಾರಿಗೆ ಬೇಕಾಗಿದೆ? ಹಾಳಾಗಿ ಹೋಗಲಿ ಆ ಯುದ್ಧವು.

ಸೌದಾ:— ಕೈಯಲ್ಲಿ ಬಳೆ ಇಟ್ಟು ಕೊಳ್ಳಿರಿ ಬಳೆ; ಅದು ನಿಮಗೆ ಚೆನ್ನಾಗಿ ಶೋಭಿಸುವುದು.

ಮೋಘ:— ಬಳೆ ಇಡಿಸು, ಸೀರೆ ಉಡಿಸು, ಒಲೆಯ ಮುಂದೆ ಕೂಡಿಸು ಆದರೆ, ಯುದ್ಧದ ಹೆಸರು ಬೇಡ. ಈ ವಿಷಯವು ಪ್ರತ್ಯಕ್ಷವಾಗಿ ಮಾಡುವುದಕ್ಕಿಂತಲೂ ಕೇಳುವುದಕ್ಕೇ ಬಹು ಚಮತ್ಕಾರ. ಯುದ್ಧಸ್ಯ ವಾರ್ತಾರಮ್ಯಾ!

ಸೌದಾ:— ಅದೋ ಕೇಳಿರಿ, ರಣದುಂದುಭಿಗಳು ಪ್ರಾರಂಭವಾದುವು. ನಡೆಯಿರಿ ಬೇಗನೆ. ಹೋಗುವಿರೊ ಇಲ್ಲವೊ! (ದಬ್ಬುವಳು)

ಮೋಘ:— (ಕಳ್ಕಳತೆಯಿಂದ) ಹೋಗುತ್ತೇನೆ. ಆದರೆ ಪ್ರಿಯೆ, ನೀನೂ ನನ್ನ ಜೊತೆಗೆ ಬಾ. ನೀನು ನನ್ನ ಸಹಚಾರಿಣಿಯಲ್ಲವೇ? ಎಲ್ಲಿ ನಾನು ಅಲ್ಲಿ ನೀನು; ಎಲ್ಲಿ ನೀನು ಅಲ್ಲಿ ನಾನು.

ಸೌದಾ:— ರಣದುಂಧುಬಿಯು ನಿಮಗೆ ಕೇಳಿಸಿತೆ?

ಮೋಘ:— ಕೇಳಿಸಿತು. ಆದರೆ ಅದು ರಣದುಂದುಭಿಯಲ್ಲ; ಯಮದೂತರ ಗರ್ಜನೆಯು. ಒಳ್ಳೇದು, ನನ್ನನ್ನು ನಾಲ್ಕು ಹೆಜ್ಜೆ ಮುಂದಕ್ಕಾದರೂ

ಕಳಿಸುವುದಕ್ಕೆ ಬಾ. ಪಂಚಾರತಿಯನ್ನು ತಂದು ಬೆಳಗುವುದಿಲ್ಲವೆ? ಉತ್ತರಾದೇವಿಯವರು ಅಭಿಮನ್ಯು ಮಹಾರಾಜರಿಗೆ ಪಂಚಾರತಿಯನ್ನು ಬೆಳಗಿದ್ದರು. ಅದರಂತೆಯೇ ನೀನು—

ಸೌದಾ:— ಸಾಕು ಸಾಕು ಇದುವರೆಗೂ ಮಾಡಿದ ಪಂಚಾರತಿ ನಿಮಗೆ ಸಾಕಾಗಲಿಲ್ಲವೆ? ನಡೆಯಿರಿ ಸುಮ್ಮನೆ. ಧಾರಾತೀರ್ಥವೇ ಮೋಕ್ಷದ ಸಾಧನವು.

ಮೋಘ:— ಪ್ರಿಯೆ ನಿನ್ನ ಚರಣತೀರ್ಥವೇ ನನಗೆ ಮೋಕ್ಷದ ಧಾರಾತೀರ್ಥವು. (ಕಾಲು ಹಿಡಿಯುವನು.)

ಸೌದಾ:— ಸಾಕು ಮಾಡಿರಿ, ಈ ವಾಚಾಳತನವನ್ನು. ಸುಮ್ಮನೇ ಹೋಗುವಿರೋ ಎಳದಾಡುತ್ತ ತೆಗೆದುಕೊಂಡು ಹೋಗಲೋ? (ಎಳೆದಾಡುವಳು)

ಮೋಘ:— ಅನ್ಯಾಯವು, ಅತ್ಯಾಚಾರವು, ಬಲಾತ್ಕಾರವು! ಧಿಕ್ಕಾರ ಧಿಕ್ಕಾರವಿರಲಿ ಈ ಸ್ತ್ರೀಯರಿಗೆ, ಜಗತ್ತಿನಲ್ಲಿಯ ಯಾವತ್ತು ಪುರುಷರೆ, ನನ್ನ ಅವಸ್ಥೆಯನ್ನು ನೋಡಿ ನೀವೂ ಜಾಗ್ರತರಾಗಿರಿ. ಒಂದು ವೇಳೆ ನೀವು ಈ ಕಂದಕದಲ್ಲಿ ಬೀಳುವದೇ ಆದರೆ ಕನಿಷ್ಟಪಕ್ಷಕ್ಕೆ ನನ್ನನ್ನು ವಿಚಾರಿಸಿಯಾದರೂ ಬೀಳಿರಿ. ನನ್ನ ಆಗ್ರಹದ ಕೊನೆಯ ವಿಜ್ಞಾಪನೆಯೇನಂದರೆ ಬ್ರಹ್ಮಚಾರಿಯಾಗಿರು, ಏನಾದರೂ ಮಾಡು ಬ್ರಹ್ಮಚಾರಿಯಾಗಿರು.

ಸಂವಾದ

ಸೌದಾ:— ಸಮರಕೆ ಪೋಗು ಧೀರಾ। ರಣ ಗಂಭೀರಾ। ಕುಣಿಕುಣಿ
ದಾಡುತೆ। ಸಡಗರದಿ ಬೇಗಾ। ಪ್ರಿಯನಾಥಾ॥ ಪಲ್ಲ॥

ಮೋಘ:— ರಣವಲ್ಲವೆ ಎನಗಿದು ಮರಣಾ। ನಿನ್ನ ಪಾದವೆನಗೆ
ಮುಕ್ತಿ ಸ್ಥಾನಾ॥

ಸೌದಾ:— ನಡೆಯಿರಿ ತ್ವರಿತದಿ ಶೌರ್ಯವ ತೋರಿರಿ। ಕಡು ಭಯ
ವನು ಬಿಡಿ। ಪುರುಷರಿಗಿದು ಸರಿಯೇ॥

ಮೋಕ್ಷ:—ಕಳಸಳಿಪೆ । ಪ್ರಿಯ ರಮಣೀ ॥

ಸೌದಾ:—ಸೆಳೆದೊಯ್ಯುವೆ ನಾಸೀ ತೆರದೀ ॥ ೧ ॥

ಮೂರನೆಯ ಪ್ರಸಂಗ

(ಸ್ಥಳ ರಣಾಂಗಣ ದ್ರೋಣಾಚಾರ್ಯರ ಪ್ರವೇಶ)

ದ್ರೋಣ:—ಚಕ್ರವ್ಯೂಹವನ್ನು ರಚಿಸುವಂತಹ ಘಾತಕವಿಚಾರವು ನನ್ನ ತಲೆಯಲ್ಲಿ ಎತ್ತ ಕಡೆಯಿಂದ ಒಂದು ಸೇರಿತೊ ತಿಳಿಯದಾಗಿದೆ. ಶಕುನಿಯ ಕಪಟಜಾಲದಿಂದ ದುರ್ಯೋಧನನು ದುರಾಗ್ರಹವನ್ನು ಹಿಡಿದು ಈ ದ್ರೋಣನ ಸ್ವಾಭಿಮಾನೀ ಮನಸ್ಸನ್ನು ಮರ್ಮಭೇದಕ ಶಬ್ದಗಳಿಂದ ರೇಗಿಸದಿದ್ದರೆ, ಸಂತಾಪದ ಭರದಲ್ಲಿ ನನ್ನಿಂದ ಇಂತಹ ಅವಿಚಾರತನವೇ ಆಗುತ್ತಿರಲಿಲ್ಲ. ಆ ಕಾರಣಕ್ಕಾಗಿ ಕಪಟ ಪಟುಗಳ ಮಾತಿಗೆ ಮರುಳಾಗಿ ನಾನೆಂಥ ಕಪಟ ಸಾಹಸವನ್ನು ಮಾಡಿದೆನು! ಆದರೆ ಈ ಸಂತಾಪದ ಕೊನೆಯ ಪರಿಣಾಮವು ನನ್ನನ್ನು ಪಶ್ಚಾತ್ತಾಪಕ್ಕೆ ಬೇರೆ ಗುರಿಮಾಡಲಿಕ್ಕಿಲ್ಲವಷ್ಟೇ? (ದುರ್ಯೋಧನ, ಜಯದ್ರಥ ಬರುವರು)

ದುರ್ಯೋಧನ:—ಆಚಾರ್ಯರೆ, ಇನ್ನು ವಿಲಂಬವೇಕೆ? ಜಾಗ್ರತೆಯಾಗಿ ಯುದ್ಧವು ಪ್ರಾರಂಭವಾಗಬೇಕಲ್ಲವೆ?

ಜಯದ್ರಥ:—ಏಕೆ, ಈ ದಿವಸವೂ ಆಚಾರ್ಯರ ಮುಖದ ಮೇಲೆ ಉತ್ಸಾಹದ ಚಿನ್ಹವೇ ತೋರುವದಿಲ್ಲಾ?

ದುರ್ಯೋ:— ಏನಾದರೊಂದು ಪ್ರಕಾರದ ವಿಲಕ್ಷಣ ವಿಚಾರತರಂಗಗಳಿಂದ ಮನಸ್ಸು ಒಳ್ಳೇ ಗಲಾಟೆಯಲ್ಲಿ ಬಿದ್ದು ಹೋಗಿದೆ. ಅದು ಈ ಮುಖಮುದ್ರೆಯ ಮೇಲಿಂದ ಒಡೆದು ಕಾಣಿಸುವುದು.

ಜಯ:— ಆಚಾರ್ಯರ ಓಘವು, ಪಾಂಡವರ ಕಡೆಗಿರುವುದರಿಂದ ಮನಸ್ಸಿನ ಸ್ಥಿತಿಯಲ್ಲಿ ಹೀಗೆ ವ್ಯತ್ಯಾಸವಾಗುವುದು ಸಹಜವಿದೆ.

ದುಯೋರ್ಧ:— ನಿಶ್ಚಯ ಆ ವಿಷಯವಾಗಿ ನನಗೆ ಈಗೆರಡು ದಿವಸಗಳಿಂದ ಚೆನ್ನಾಗಿ ಅನುಭವಕ್ಕೆ ಬಂದಿರುವುದು. ಇದು ಮೂರನೇ ದಿವಸವು-

ದ್ರೋಣ:— ಅನುಭವವೇ, ಯಾವ ಪ್ರಕಾರದ ದುಷ್ಟ ಅನುಭವವು ನಿಮಗೆ ಬಂದಿರುವುದು. ?

ಜಯ:—ಕೌರವರ ವಿಷಯವಾಗಿ ನಿಜವಾದ ಅಂತಃಕರಣ ಬುದ್ಧಿಯು ತಮ್ಮಲ್ಲಿ ಇಲ್ಲದೆ ಇರುವುದರಿಂದ, ಆಚಾರ್ಯರ ಶೌರ್ಯವು ಶಿಥಿಲ ವಾಗುತ್ತ ನಡೆದಿರುವುದು. ಇದೇ ಅನುಭವವು.

ದ್ರೋಣ:— ಭಲೆ ! ನಿಮ್ಮ ನೀಚವಾದ ಕಪಟಬುದ್ಧಿಯ ವಿಚಾರಗಳು ತೀರಾ ಶಿಖರಕ್ಕೆ ಮುಟ್ಟಿದವು. ನಿನ್ನಿನ ಯುದ್ಧದಲ್ಲಿ ಪಾಂಚಾಲ ವೀರರ ಪರಾಜಯವಾಯಿತು. ಮತ್ಸ್ಯದೇಶದ ರಣಧುರಂಧರರು ದಿಕ್ಕೆಟ್ಟು ಓಡಿಹೋದರು. ಅದನ್ನು ಮರೆತಿರೇನು ? ನಿಶ್ಚಯವಾಗಿ ಕಪಟಿಗಳೂ ವಿಶ್ವಾಸಘಾತಕಿಗಳೂ ಆದ ಮನುಷ್ಯರಿಗೆ ಜಗತ್ತೆಲ್ಲವೂ ಅದೇ ಪ್ರಕಾರವಾಗಿ ಕಾಣುವುದು. ಭ್ರಷ್ಟ ಮತಿಗಳಾದ ನಿಮ್ಮಂಥ ದುಷ್ಟರ ಸಹವಾಸದಿಂದ ಸಜ್ಜನರ ಸರಳಬುದ್ಧಿಯು ಭ್ರಷ್ಟವಾಗದೆ ಹೇಗಿದ್ದಾವು ?

ದುಯೋರ್ಧ:— ಆಚಾರ್ಯರೇ ಈಗಿನ ನಿಮ್ಮ ಮನಸ್ಸಿನ ಸ್ಥಿತಿಯ ಪ್ರಕಾರ ವನ್ನು ನಾನು ಸಂಪೂರ್ಣವಾಗಿ ಬಲ್ಲೆನು. ಮತ್ತು ಅದಕ್ಕೋಸು ಗವೇ ನಾವು ನಿಮ್ಮ ಪರಾಕ್ರಮದ ಮೇಲೆ ವಿಶ್ವಾಸವನ್ನಿಟ್ಟು ಸುಮ್ಮನೆ ಕುಳಿತಿರುವೆವೆಂದು ತಾವು ತಿಳಿಯಬೇಡಿರಿ.

ಜಯ:— ಬ್ರಹ್ಮತೇಜವು ದುರ್ಬಲವಾಗಿದ್ದರೂ ಕೌರವರ ಕ್ಷಾತ್ರತೇಜವು ಇನ್ನೂ ಜೀವಂತವಾಗಿರುವುದು.

ದುಯೋರ್ಧ:— ಪ್ರಖರವಾದ ಕ್ಷಾತ್ರತೇಜದ ಮುಂದೆ, ನಿಸ್ತೇಜವಾದ ಬ್ರಹ್ಮತೇಜದ ಪ್ರಶಂಸೆಯನ್ನು ಕೇಳುವರಾರು ?

ದ್ರೋಣ:— ಬ್ರಹ್ಮತೇಜದ ಅವಮಾನವೇ ! ದುರ್ಯೋಧನಾ, ಕ್ಷಾತ್ರ ತೇಜದ ನಿಸ್ಸಾರವಾದ ಅಹಂಕಾರದ ಸಡಗರವನ್ನು ಯಾರ ಮುಂದೆ ತೋರಿಸುವೆ ? ಕೌರವರ ಕ್ಷಾತ್ರತೇಜವನ್ನು ನಾನೇನು ಅರಿಯೆನೆ ? ಆ ನಿಮ್ಮ ಕ್ಷಾತ್ರತೇಜಕ್ಕೆ ಬ್ರಹ್ಮತೇಜದ ಬೆಂಬಲವು ಇಲ್ಲದಿದ್ದರೆ-

ಜಯ:— ಇಲ್ಲದಿದ್ದರೇನು ? ಕೌರವರ " ಕ್ಷಾತ್ರತೇಜವು ನಿರ್ಮೂಲವಾಗಿ ಹೋಗುತ್ತಿತ್ತು " ಎಂದು ಅಲ್ಲವೆ ನಿಮ್ಮ ಅಭಿಪ್ರಾಯವು ?

ದ್ರೋಣ:— ಹೌದು. ಇದರಲ್ಲಿ ಸಂದೇಹವೇನು ? ಬ್ರಹ್ಮತೇಜವೂ ಮತ್ತು ಕ್ಷಾತ್ರತೇಜವೂ ಎರಡೂ ಜೋಡಾಗಿ ಒಂದೇ ವಿಚಾರದಿಂದ ನಡೆಯುತ್ತಿದರೇನೇ–

ದುರ್ಯೋ:— ಭರತಖಂಡದ ಉದ್ಧಾರವಾಗುವುದು ! ಭಲೆ, ಆಚಾರ್ಯರ ವೇದಾಂತವು ಬಹುಗಂಭೀರವಾಗಿದೆ. ಆದರೆ ನನ್ನ ಅಭಿಪ್ರಾಯವೇನೆಂದರೆ,ಸದ್ಯಕ್ಕೆ ಕೌರವರ ಪಕ್ಷದಲ್ಲಿ ಕ್ಷಾತ್ರತೇಜವೂ, ಬ್ರಹ್ಮತೇಜವೂ, ಒಕ್ಕಟ್ಟಾಗಿರುವವಲ್ಲವೆ ? ಹಾಗಾದರೆ ಇನ್ನೂ ವರೆಗೂ ನಮ್ಮ ಪರಾಕ್ರಮಕ್ಕೆ ಯಶವು ಏಕೆ ದೊರೆಯಬಾರದು.

ದ್ರೋಣ:— ನಿಮ್ಮ ಪರಾಕ್ರಮದ ಅಸ್ತಿಭಾರವು ಅತ್ಯಂತ ಪಾಪಮಯವಾಗಿರುವುದರಿಂದ ನಿಮ್ಮಪಕ್ಷಕ್ಕೆ ಯಶವು ಎಂದೂ ದೊರೆಯುವುದಿಲ್ಲ. ಪರಾಕ್ರಮದ ಮಂದಿರವು ಧರ್ಮದ ಅಸ್ತಿಭಾರದ ಮೇಲೆ ನಿಂತಿರಬೇಕು. ಎತ್ತಕಡೆಗೆ ಧರ್ಮವೋ ಅತ್ತಕಡೆಗೆ ಜಯವು. ಬದ್ಧದ್ವೇಷಿಗಳಾಗಿದ್ದರೂ ಕೂಡ ಅವರೊಡನೆ ಧರ್ಮಯುದ್ಧವನ್ನೇ ಮಾಡಬೇಕು.

ದುರ್ಯೋ:— ಧರ್ಮಾಧರ್ಮದ ಹೇಡಿತನದ ವಿಚಾರಗಳು, ಪರಾಕ್ರಮಿಯಾದ ಕ್ಷಾತ್ರತೇಜಕ್ಕೆ ರುಚಿಸುವುದಿಲ್ಲ. ಇಂತಹ ಕ್ಷುದ್ರವಾದ ವೇದಾಂತ ವಿಚಾರಗಳು ಬ್ರಹ್ಮತೇಜಸ್ಸಿಗೇ ಶೋಭಿಸುವವು.

ಜಯ:— ಇದು ರಣಕ್ಷೇತ್ರವಿರುವುದು. ಯುದ್ಧಕ್ಕೋಸುಗ ಮಾಡಿದಂತಹ ಯಾವತ್ತೂ ಅಧರ್ಮಗಳೂ, ಅತ್ಯಾಚಾರಗಳೂ,ಕ್ಷಮ್ಯವಾಗಿರುವವು.

ದ್ರೋಣ:— ಜಯದ್ರಥಾ, ನಾನು ಸೇನಾಪತಿಯಾಗಿರುವವರೆಗೆ ಅಧರ್ಮವನ್ನು ಎಂದೂ ಮಾಡಗೊಡಲಾರೆನು. ಬಲಿಷ್ಠನಾದ ವೀರನು ಶತ್ರುವಿನ ಕೂಡ ಸರಳ ಯುದ್ಧವನ್ನೇ ಮಾಡಬೇಕು. ಕಪಟಯುದ್ಧ

ವನ್ನು ಮಾಡುವುದಿಲ್ಲವೆಂದು ನೀವು ನನಗೆ ವಚನ ಕೊಟ್ಟದ್ದನ್ನು ಮರೆಯಬೇಡಿರಿ.

ಜಯ:— [ಒಂದು ಮಗ್ಗಲಲ್ಲಿ] ರಾಜಕಾರಣದಲ್ಲಿ ಇಂತಹ ವಚನಗಳು ಎಷ್ಟೋ ಆಗಿ ಹೋಗಿರುತ್ತವೆ. ಅವುಗಳನ್ನು ಲಕ್ಷಿಸುವವರಾರು? ಶತ್ರುವನ್ನು ತತ್‍ಕ್ಷಣವೇ ಸಂಹರಿಸಬೇಕು— ಇದೇ ನಿಜವಾದ ಧರ್ಮವು.

ಶಕುನಿ:— (ಪ್ರವೇಶಿಸಿ) ಇನ್ನು ಆ ಧರ್ಮಕರ್ಮದ ವಿಚಾರಗಳನ್ನು ಸಾಕು ಮಾಡಿರಿ. ಶತ್ರುಗಳು ತೀರಾ ಸಮೀಪಕ್ಕೆ ಬಂದು ನಿಂತಿರುವರು. ನೀವು ಇಲ್ಲಿಯೆ ಸುಮ್ಮನೆ ಇತ್ತಂಡವಾದವನ್ನು ಬೆಳಿಸಿರುವಿರಿ. ಪ್ರಸಂಗವೇನು; ನಿಮ್ಮ ನಿಮ್ಮೊಳಗೆ ಈ ಕಲಹವೇನು? ಕ್ಷಾತ್ರ ತೇಜವೂ ಶ್ರೇಷ್ಠವಿದೆ. ಬ್ರಹ್ಮತೇಜವಾದರೂ ಪ್ರಭಾವಶಾಲಿಯಿದೆ. ನಡೆಯಿರಿನ್ನು ಸಾಕು ನಿಮ್ಮ ವಾದವು.

ದುಯೋ:— ಸರಿ, ಸರಿ, ಮಾಮಾ, ನಿನ್ನ ಸಿದ್ಧಾಂತವು ಯೋಗ್ಯವಾಗಿದೆ. ರಾಮಾಯಸ್ವಸ್ತಿ, ರಾವಣಾಯ ಸ್ವಸ್ತಿ!

ಶಕುನಿ:— ಶತ್ರುವು ತೀರಾ ಬಾಗಿಲಲ್ಲಿ ಬಂದು ಕುಳಿತಿರುವನು. ನಾವು ನಮ್ಮನಮ್ಮೊಳಗೆ ಜಗಳವಾಡುತ್ತ ಕುಳಿತುಕೊಂಡರೆ ಶತ್ರುವಿನ ಸಮಾಚಾರವನ್ನು ತಕ್ಕೊಳ್ಳುವವರಾರು?

ರಾಗ ಕಾಮೋದ, ತಾಳ ಏಕ್ತಾ

ಅರಿಯು ಪ್ರಬಲನಾಗಿ ದ್ವಾರದೀ। ಬಂದು ನಿಂತಿಹ।
ತರವೇನಿದು ನಿಮ್ಮೊಳಿಂತು। ಬರಿದೆ ಕಲಹಗೈಯ್ಯುವರೆ ॥ ಪಲ್ಲ॥
ವೈರಿಗಳ ಸೈನ್ಯ ಸಮರದಿ ಚಂಡಾಡಿ॥ ರಣಸಾಹಸವ
ಸುಯಶದಾ ಕೀರ್ತಿ ತೋರಿಸಿ ॥೧॥

ಆಚಾರ್ಯರೆ, ನಡೆಯಿರಿನ್ನು ವಿಲಂಬಮಾಡಿ ಪ್ರಯೋಜನವಿಲ್ಲ.

ದ್ರೋಣ:— ದುರ್ಯೋಧನಾ, ನೀನು ಕರ್ಣ, ಕೃಪ, ದುಶ್ಯಾಸನ, ಇವ ರನ್ನು ಸಹಾಯಕ್ಕೆ ತೆಗೆದುಕೊಂಡು ಚಕ್ರವ್ಯೂಹದ ಮಧ್ಯಭಾಗದಲ್ಲಿ

ಸಿದ್ಧವಾಗಿರು. ನಾನು ಚಕ್ರವ್ಯೂಹದ ಬಾಗಿಲವನ್ನು ರಕ್ಷಿಸುತ್ತೇನೆ. ಲಕ್ಷ್ಮಣ, ಮತ್ತು ಜಯದ್ರಥರಾದರೂ ನನ್ನ ಸಹಾಯಕ್ಕಿರಲಿ.

ಶಕುನಿ:— ಯುಧಿಷ್ಠಿರನ ಸಂರಕ್ಷಣೆಗೋಸುಗ ಸಾತ್ಯಕಿಯನ್ನಿಟ್ಟು ಅರ್ಜುನನು ಸಂಶಪ್ತಕರ ಕೂಡ ಯುದ್ಧಕ್ಕೆ ಹೋಗಿರುವನೆಂದು ಗೂಢಚಾರನು ಈಗ ತಾನೇ ಸಮಾಚಾರವನ್ನು ತಂದಿರುವನು.

ಜಯ:— ಏನು, ಅರ್ಜುನನು ಇಲ್ಲವೆ? ಸರಿ ಹಾಗಾದರೆ ಈ ಜಯದ್ರಥನು ಪ್ರತ್ಯಕ್ಷ ಕಾಲನು ಬಂದರೂ ಅವನಿಗೆ ಭಯಪಡತಕ್ಕವನಲ್ಲ. ಶ್ರೀಶಂಕರನ ವರಪ್ರಸಾದದಿಂದ ಅರ್ಜುನನನ್ನು ಬಿಟ್ಟು ಮಿಕ್ಕ ಪಾಂಡವರನ್ನು ರಸಾತಲಕ್ಕೆ ತುಳಿದು ರಣಯಜ್ಞಕ್ಕೆ ಆಹುತಿಯನ್ನು ಕೊಡುವದಕ್ಕೆ ನಾನು ಸಮರ್ಥನಾಗಿರುವೆನು. ಆಚಾರ್ಯರೆ, ಈ ದಿವಸ ಯುದ್ಧದಲ್ಲಿ ಸೇನಾಪತಿಯ ಅಧಿಕಾರವು ನಿಮ್ಮದು; ಪರಾಕ್ರಮವು ನನ್ನದು. (ಹೋಗುವನು)

ದ್ರೋಣ:— ಎಲ ಎಲಾ ಎಂಥ ಉನ್ಮತ್ತತನವು (ಹೋಗುವನು)

ನಾಲ್ಕನೆಯ ಪ್ರಸಂಗ

(ಸ್ಥಳ, ಚಕ್ರವ್ಯೂಹದ ಹತ್ತರ ಅಭಿಮನ್ಯು, ಭೀಮ, ನಕುಲ, ಸಹದೇವರು ಪ್ರವೇಶ ಮಾಡುತ್ತಾರೆ.)

ಅಭಿ:— ಬಿಡು ಬಿಡು, ಬೀಮಕಕ್ಕಾ ನನ್ನನ್ನು ತಡೆಯಬೇಡ. ಈ ಅಭಿಮನ್ಯು ಒಬ್ಬನೇ ಈ ಚಕ್ರವ್ಯೂಹದಲ್ಲಿ ಧುಮುಕಿ ಇದನ್ನು ಭೇದಿಸತಕ್ಕವನು!

ಭೀಮ:— ಈ ಭೀಮನು ನಿನ್ನೊಬ್ಬನನ್ನೇ ಎಂದೂ ಬಿಡಲಾರನು.

ಅಭಿ:— ಕಕ್ಕಾ, ನಿಮ್ಮೆಲ್ಲರ ಮಂಗಲ ಆಶೀರ್ವಾದದ ಶಿರಸ್ತ್ರಾಣವು ನನ್ನ ತಲೆಯಮೇಲಿರುವುದು. ಮತ್ತು ಶ್ರೀಕೃಷ್ಣನ ಕೃಪಾಕವಚವು ನನ್ನ ಸರ್ವಾಂಗವನ್ನು ರಕ್ಷಿಸುತ್ತಿರುವದು. ಅಂದ ಮೇಲೆ ಪ್ರತ್ಯಕ್ಷ ಕಾಲನು ಬಂದರೂ ನಾನೇತಕ್ಕೆ ಭಯಪಡಲಿ? ನಡೆಯಿರಿ. ನೀವು

ಎದುರಾಗಿ ನಿಂತಿರುವ ಶತ್ರುವಿನ ಸಮಾಚಾರವನ್ನು ತೆಗೆದುಕೊಳ್ಳಿರಿ. ಅದೋ ನೋಡಿರಿ. ಶತ್ರುಸೈನ್ಯವು ಬಹಳ ವೇಗದಿಂದ ಇತ್ತಕಡೆಗೇ ಬರುತ್ತಿರುವುದು. ಅದನ್ನು ಮುಂದಕ್ಕೆ ಬಿಡದೆ ಅಲ್ಲಿಯೇ ತಡೆಹಾಕಿರಿ.

(ತೆರೆಯ ಮರೆಯಲ್ಲಿ ರಣವಾದ್ಯಗಳು ಮೊಳಗುವವು ಸೈನ್ಯದ ಹುಯ್ಲು ಕೇಳಿಸುವುದು]

ಭೀಮ:— ಈ ಗದೆಯ ಒಂದೇ ಪ್ರಹಾರದಿಂದ ಆ ಸೈನ್ಯವನ್ನು ಸಂಹರಿಸಿ, ಕೂಡಲೆ ನಿನಗೆ ಬೆಂಬಲನಾಗಲು ಈಗಲೇ ಬರುವೆನು. (ಹೋಗುವರು)

ಅಭಿ:— ಈ ಅಭಿಮನ್ಯುವಾದರೂ ಈ ಚಕ್ರವ್ಯೂಹದಲ್ಲಿ ಕೆರಳಿದ ಸಿಂಹದ ಮರಿಯಂತೆ ಜಿಗಿದು ಅದನ್ನು ಭೇದಿಸಿ— (ಆವೇಶದಿಂದ ಹೋಗುವನು)

ಜಯ:— (ಪ್ರವೇಶಿಸಿ) ಖಬರ್‌ದಾರ್, ಒಂದು ಹೆಜ್ಜೆಯನ್ನು ಮುಂದಿಟ್ಟದ್ದಾದರೆ, ಪ್ರಾಣಸಂಕಟಕ್ಕೆ ಗುರಿಯಾಗುವೆ.

ಅಭಿ:— ಎಲೋ ಹೋಗು, ನಿನ್ನಂತಹ ದುರಾತ್ಮನ ಬೆದರಿಕೆಗೆ ನಾನೇನು ಭಯಪಡತಕ್ಕವನಲ್ಲ. ಬಾ, ಹೀಗೆ ಮುಂದಕ್ಕೆ; ಯುದ್ಧಕ್ಕೆ ಸಿದ್ಧನಾಗು.

ಜಯ:— ಏನು ನಿನ್ನ ಕೂಡ ಯುದ್ಧವೇ! ಮಗುವೆ, ಯುದ್ಧವೆಂದರೆ ಹುಡುಗರ ಆಟವಲ್ಲ. ಸುಮ್ಮನೆ ಮನೆಗೆ ಹೋಗಿ ನಿನ್ನ ಹೆತ್ತ ತಾಯಿಗೆ ಒಂದು ಸವಿಯಾದ ಮುದ್ದುಕೊಟ್ಟು ಅವಳ ಜೊತೆಗೆ ಪ್ರೀತಿಯ ಮಾತುಗಳಾಡುತ್ತ ಕುಳಿತುಕೋ ಹೋಗು. ದೊಡ್ಡ ಮಾತುಗಳನ್ನಾಡಬೇಡ. (ನಗುವನು)

ಅಭಿ:— ನಕ್ಕು ನನ್ನನ್ನು ತಿರಸ್ಕಾರ ಮಾಡುವೆಯಾ? ಮೃತ್ಯುವಿನ ಬಾಯಿಗೆ ಸಿಕ್ಕುವಿಯಾ, ಜೋಕೆ! ಪ್ರಾಣದ ವಿಷಯವಾಗಿ ಜಾಗ್ರತನಾಗು, ಇಕೋ ಬಾಣವನ್ನು ಪ್ರಯೋಗಿಸುವೆನು. ಸಹಿಸು (ಬಾಣ ವೇರಿಸುವನು)

ಜಯ:— ನಿನ್ನಂತಹ ಒಂದು ಚೋಟು ಹುಡುಗನ ಕೂಡ ಯುದ್ಧವಾಡುವುದಕ್ಕೆ ಧನುಷ್ಯ ಬಾಣಗಳೇತಕ್ಕೆ, ಒಂದು ಏಟು ಕೆನ್ನೆಗೆ ಕೊಟ್ಟು ನಿನ್ನನ್ನು ಮಣ್ಣುಪಾಲು ಮಾಡುವೆನು. [ಮೈಮೇಲೆ ಹೋಗುವನು]

ಅಭಿ:— ಜಾ, ಹಾಗಾದರೆ, ನಿನ್ನನ್ನು ಈಗಲೇ ರಸಾತಲಕ್ಕೆ ಹೆಟ್ಟುವೆನು. (ಇಬ್ಬರಿಗೂ ಯುದ್ಧವಾಗಿ ಜಯದ್ರಥನು ಬೀಳುವನು) ಏಕೆ ಜಯದ್ರಥಾ, ಎಲ್ಲಿ ಹೋಯಿತು ನಿನ್ನ ಶೂರತನದ ಪೌರುಷವು? ಏಳು ಮೇಲಕ್ಕೆ, ಮತ್ತೆ ಯುದ್ಧಕ್ಕೆ ಸಿದ್ಧನಾಗು.

ಜಯ:— ಘಾತವು, ಘಾತವು. [ಮೂರ್ಛಿತನಾಗುವನು]

ಅಭಿ:— ಈತನು ಮೂರ್ಛಿತನಾಗಿ ಬಿದ್ದನು. ಮೂರ್ಛಿತನಾದವನ ಮೇಲೆ ಶಸ್ತ್ರವೆತ್ತುವುದು ವೀರನಿಗೆ ಭೂಷಣವಲ್ಲ. ಈತನು ಹೀಗೇ ಬಿದ್ದು ಕೊಳ್ಳಲಿ. (ಹೋಗುವನು)

ಜಯ:— (ಎಚ್ಚರಾಗಿ)ಹೋದನು, ಎಲ್ಲಿಹೋದನು? ಓಡಿಹೋದನು. ಈ ಕಾಲನ ಬಲೆಯಲ್ಲಿ ಸಿಕ್ಕು ಪಾರಾಗಿಹೋದನು. ಧಿಕ್ಕಾರ ಧಿಕ್ಕಾರ ವಿರಲಿ ನನ್ನ ಶೌರ್ಯಕ್ಕೆ. ಈ ವೀರನಾದ ಸಿಂಧುರಾಜನ ಪರಾಕ್ರಮವು ಯಃಕಶ್ಚಿತ ಹುಡುಗನಿಂದ ಮೊದಲುಹೊಡತಕ್ಕೇ ಮಣ್ಣು ಪಾಲಾಗಿ ಹೋಯಿತೇ? ಹುಡುಗನ ವಯಸ್ಸು ಕಿರಿದು, ಆದರೆ ಪರಾಕ್ರಮವು ಹಿರಿದು. ಇದರ ಸೇಡು ತೀರಿಸಿಕೊಳ್ಳದಿದ್ದರೆ ನಾನು ಜಯದ್ರಥನೇ ಅಲ್ಲ. (ಹೋಗುವನು.)

ಕರ್ಣ:— (ಪ್ರವೇಶಿಸಿ) ಅನರ್ಥವು, ಅನರ್ಥವು.

ಜಯ:— ಯಾರು ಕರ್ಣನೆ? ಏನಾಯಿತು?

ಕರ್ಣ:— ಅಭಿಮನ್ಯು ಅನರ್ಥಮಾಡಿದನು. ಚಕ್ರವ್ಯೂಹವನ್ನು ಭೇದಿಸಿ ಶಲ್ಯನನ್ನೂ, ದುರ್ಯೋಧನನ್ನೂ, ಮೂರ್ಛೆಗೊಳಿಸಿದನು. (ನೋಡಿ) ಅದೋ ನೋಡು, ಅಡ್ಡವಾಗಿ ಬಂದ ವೀರರ ಶಿರಸ್ಸನ್ನು ಚರಚರನೆ ಕೊಯ್ಯುತ್ತ, ಆ ಹುಡುಗನು ಚಕ್ರವ್ಯೂಹವನ್ನು ಮುರಿದು ದಿಕ್ಕೇಡು ಮಾಡುತ್ತಿರುವನು. ಹೋದನು, ಹೋದನು ಅಭಿಮನ್ಯು ಚಕ್ರವ್ಯೂಹದ ಮಧ್ಯಭಾಗಕ್ಕೆ ಹೋದನು. ಈ ದಿವಸ ಚಿಹ್ನವು ಚೆನ್ನಾಗಿ ಕಾಣುವುದಿಲ್ಲ.

ಜಯ:— ಕರ್ಣಾ, ಆ ಸಣ್ಣ ಹುಡುಗನಿಗೆ ಭಯಪಟ್ಟು ಹೆಂಗಸಿನಂತೆ ಓಡಿ ಬಂದು ಅವನ ಪರಾಕ್ರಮದ ಕೌತುಕವನ್ನು ಮಾಡುತ್ತಿರುವೆ.

ಅಭಿಮನ್ಯುವು ಈಗ ಚಕ್ರವ್ಯೂಹದ ಮಧ್ಯದಲ್ಲಿ ಸಿಕ್ಕಿರುವನು. ಇನ್ನು ಅಲ್ಲಿಂದ ಹೇಗೆ ಪಾರಾಗಿ ಬರುವನೊ ನೋಡುವೆನು. ಅಲ್ಲಿಯೇ ಅವನ ಕಪಾಳಮೋಕ್ಷವಾಯಿತೆಂತಲೇ ತಿಳಿ.

ಕರ್ಣ:— ಅದೊ ನೋಡು, ಭೀಮ, ಸಾತ್ಯಕಿ, ನಕುಲ, ಸಹದೇವ ಮೊದಲಾದ ಪಾಂಡವವೀರರು, ಅವನ ಸಹಾಯಕ್ಕೋಸುಗ ಹೇಗೆ ಧಾವಿಸಿ ಹೋಗುತ್ತಿರುವರು.

ಜಯ:— ನಡೆ ಹಾಗಾದರೆ, ಅವರನ್ನು ಅಲ್ಲಿಯೇ ತಡೆದು, ಅಭಿಮನ್ಯು ಒಬ್ಬನೇ ಕೈಗೆ ಸಿಕ್ಕುವಂತೆ ಪ್ರಯತ್ನ ಮಾಡೋಣ.

ಕರ್ಣ:— ಹೌದು ಭೀಮನನ್ನೂ ಸಾತ್ಯಕಿಯನ್ನೂ ಯುದ್ಧ ಮಾಡುತ್ತ ಮಾಡುತ್ತ ದೂರಕ್ಕೆ ತೆಗೆದುಕೊಂಡು ಹೋಗಬೇಕು. ಅಂದರೆ ಅಭಿಮನ್ಯು ಒಬ್ಬನೇ ಕೈಗೆ ಸಿಕ್ಕುವನು.

ಜಯ:— ಈ ಪ್ರಸಂಗದಲ್ಲಿ ಕೃಷ್ಣ ಕಾರಸ್ಥಾನದಿಂದಲೇ ಕಾರ್ಯವನ್ನು ಸಾಧಿಸಬೇಕು. ಶತ್ರುಗಳನ್ನು ಅಗಲಿಸಿ ಅವರ ಒಕ್ಕಟ್ಟಾಗಿರುವ ಸಾಮರ್ಥ್ಯವನ್ನು ಕ್ಷೀಣ ಮಾಡಿದ ವಿನಾ, ನಮಗೆ ಜಯವು ದೊರಕುವ ಚಿನ್ಹವು ಕಾಣುವುದಿಲ್ಲ.

[ಹೋಗುವರು]

ದ್ರೋಣ:— [ಪ್ರವೇಶಿಸಿ] ಏನು ? ದುರ್ಯೋಧನ ಪುತ್ರನಾದ ಲಕ್ಷ್ಮಣನ ಸಂಹಾರವಾಯಿತೆ ? ಶಲ್ಯ ಪುತ್ರನಾದ ರುಕ್ಮರಥನು ರಣಾಂಗಣದಲ್ಲಿ ಮಡಿದು ಹೋದನೆ? ನಾನು ಬಳ್ಳೇ ಕುಶಲತೆಯಿಂದ ಆಮಹಾ ಪರಾಕ್ರಮಶಾಲಿಯಾದ ಅರ್ಜುನನನ್ನು ಎರಡನೆಯ ಕಡೆಗೆ ಯುದ್ಧದಲ್ಲಿ ತೊಡಕಿಸಿದೆನು. ಆದರೆ—

ಅಭಿ:— (ರಕ್ತಮಯನಾಗಿ ಪ್ರವೇಶಿಸಿ) ಆದರೆ—ಏನು ? ಅದೇ ಕೇಸರಿಯ ಅರ್ಭಕನು ಚಕ್ರವ್ಯೂಹವನ್ನು ಬೇಧಿಸಿ ದಿಕ್ಕುಪಾಲು ಮಾಡಿದನು.

ದ್ರೋಣ:— (ಆಶ್ಚರ್ಯದಿಂದ) ಯಾರು ಅಭಿಮನ್ಯುವೇ ? ನನ್ನ ಪ್ರಿಯಶಿಷ್ಯ ಪಾರ್ಥನ ತನಯನಾದ ವೀರ ಅಭಿಮನ್ಯು ನೀನೆಯೆ ?

ಅಭಿ:— ಹೌದು ಆಚಾರ್ಯರೆ ಈ ಪಾರ್ಥಸುತನಾದ ಅಭಿಮನ್ಯು ತಮಗೆ ಅಭಿವಂದಿಸುವನು. ಗುರುಪೂಜೆಯನ್ನು ಸ್ವೀಕರಿಸಬೇಕು.

(ಬಾಣಗಳನ್ನು ಏರಿಸುವನು)

ದ್ರೋಣ:— [ಸ್ವಗತ] ಭಾಪು ಭಾಪು ಕುಮಾರಾ, ಭಾಪು ಭಾಪು ನಿನ್ನಂತಪ ತೇಜಸ್ವಿ ವೀರಕುಮಾರರು ರಾಷ್ಟ್ರಸೇವೆಗೋಸುಗ ಸರ್ವಸ್ವಕ್ಕೂ ತಿಲಾಂಜಲಿಯನ್ನು ಕೊಡುವುದಕ್ಕೆ ಸಿದ್ಧರಾದ ಮೇಲೆ ಈ ಭರತ ಖಂಡದ ಭಾಗ್ಯೋದಯವಾಗುವುದಕ್ಕೆ ಸಂದೇಹವೇನು ?

ಅಭಿ:— ಆಚಾರ್ಯರೆ ತಾವು ಹೀಗೇಕೆ ಸ್ತಬ್ಧರಾಗಿ ನಿಂತಿರುವಿರಿ ? ಈ ಮಂದಮತಿಯಾದ ಬಾಲಕನ ಪೂಜೆಯನ್ನು ತಾವು ಸ್ವೀಕರಿಸುವು ದಿಲ್ಲವೆ ?

ದ್ರೋಣ:— [ಸ್ವ] ಹಾಯ್ ಹಾಯ್ ! ದುಷ್ಟ ಮತಿಗಳಾದ ದುರ್ಯೋಧ ನಾದಿ ಚಾಂಡಾಲರ ಪ್ರೇರಣೆಯಿಂದ ಈ ಚಕ್ರವ್ಯೂಹವನ್ನು ರಚಿಸಿ ದೆನು. ಆದರೆ, ಈ ವೀರ ಕುಮಾರನು ಈ ಚಕ್ರವ್ಯೂಹವನ್ನು ಭೇದಿಸು ವನೆಂಬ ಕಲ್ಪನೆಯೂ ಆ ಸಮಯಕ್ಕೆ ನನ್ನ ಬುದ್ಧಿಗೆ ತೋಚಲಿಲ್ಲ. ಆಗಲಿ ಪ್ರಸಂಗ ಬಂದದ್ದನ್ನು ಅನುಭೋಗಿಸದೆ ಗತ್ಯಂತರವಿಲ್ಲ.

ಅಭಿ:— ಆಚಾರ್ಯರೆ–

ದ್ರೋಣ:— ಕುಮಾರಾ ! ನಿನ್ನಂತಹ ಬಾಲಕನ ಮೇಲೆ ಬಾಣಪ್ರಯೋಗ ವನ್ನು ಮಾಡುವುದಕ್ಕೆ ನನ್ನ ಕೈಯ್ಯಲ್ಲಿ ಸಾಮರ್ಥ್ಯವೇ ಇಲ್ಲ. ನಿನ್ನ ಪರಾಕ್ರಮದ ಕೌತುಕ ಮಾಡುವುದನ್ನು ಬಿಟ್ಟು ನಿನ್ನ ಕೂಡ ಯುದ್ಧ ಮಾಡುವುದು ನನಗೆ ಲಾಂಛನವೆನಿಸುವುದು. ಮತ್ತು ಈ ದ್ರೋಣನ ಶೌರ್ಯಕ್ಕೆ ಅದು ಕುಂದು.

ಅಭಿ:—ಆಚಾರ್ಯರೆ, ತಾವು ನಮ್ಮ ಶತ್ರುಗಳು ಕೌರವರ ಸೇನಾಧೀಶರು ಮತ್ತು—

ದ್ರೋಣ— ಧಿಕ್ಕಾರ ಧಿಕ್ಕಾರವಿರಲಿ ನನ್ನ ಸೇನಾಧೀಶ ಪದಕ್ಕೆ ! ಕೌರ ವರ ಸೇನಾಧೀಶನಾದರೂ ಈ ದ್ರೋಣನ ಅಂತಃಕರಣದಲ್ಲಿ ನ್ಯಾಯ

ಬುದ್ಧಿಯು ಇನ್ನೂ ಜಾಗ್ರುತವಾಗಿದೆ. ಬಾ ಸುಕುಮಾರಾ, ನಿನ್ನ ಅದ್ವಿತೀಯವಾದ ಪರಾಕ್ರಮವನ್ನು ಹೊಗಳಿ, ನಿನ್ನ ಶಿರಸ್ಸಿನ ಮೇಲೆ ಆನಂದಾಶ್ರುಗಳನ್ನು ಸುರಿಸಿ ಸಂತೋಷಪಡುವೆನು. (ಅವನನ್ನು ಅಪ್ಪಿಕೊಳ್ಳುವನು) ಮಗುವೇ, ಭಯಪಡಬೇಡ, ನಾನು ಪಾಂಡವರ ಶತ್ರುವಾದರೂ ನ್ಯಾಯ ನೀತಿ-ಧರ್ಮಗಳಿಗೆ ಶತ್ರುವಾಗಿಲ್ಲ. ಅಲ್ಲದೆ ನೀನು ಶತ್ರುಪಕ್ಷದವನಾದರೂ ವೀರನಾಗಿರುವೆ. ವೀರರ ಗೌರವವನ್ನು ವೀರರೇ ಮಾಡಬೇಕಲ್ಲವೆ? ಆದರೆ ಕುಮಾರಾ, ಈ ಸ್ಥಳವು ನಿನ್ನ ಜೀವಿತಕ್ಕೆ ಘಾತಕವಿದೆ. ಅದಕ್ಕೋಸುಗ ನೀನು ಒಂದು ಕ್ಷಣವಾದರೂ ಇಲ್ಲಿ ನಿಲ್ಲದೆ ಜಾಗ್ರುತೆಯಾಗಿ ಹೊರಡು.

ಅಭಿ:— ಏನು! ನಾನು ಇಲ್ಲಿಂದ ಓಡಿ ಹೋಗಲೊ ?

ದ್ರೋಣ:— ಹೌದು, ಸಮಯವನ್ನು ಸಾಧಿಸಿ ಜೀವವನ್ನು ಉಳಿಸಿಕೊಂಡು ಮರುಳಿ ಹೋಗು.

ಅಭಿ:— ಆಚಾರ್ಯರೆ, ಇಂತಹ ವಿಚಾರವನ್ನು ಸೂಚಿಸುವುದು ತಮ್ಮಂಥವರಿಗೆ ಭೂಷಣವಲ್ಲ. ಕರ್ತವ್ಯಕ್ಕೆ ವಿಮುಖನಾಗಿ ರಣಭೂಮಿಯಿಂದ ಓಡಿಹೋಗುವುದು ವೀರನಾದವನಿಗೆ ಲಾಂಛನವು. ಈ ಅಭಿಮನ್ಯು ಪ್ರತ್ಯಕ್ಷ ಕಾಲನ ಕೂಡ ಸಹ ಹೋರಾಡುವುದಕ್ಕೆ ಭಯಪಡತಕ್ಕವನಲ್ಲ. ಕೌರವರ ಹದಿನೆಂಟು ಅಕ್ಷೋಹಿಣೀ ಸೈನ್ಯವು ಏಕಕಾಲಕ್ಕೆ ನನ್ನ ಮೇಲೆ ಸಾಗಿಬಂದರೂ ನಾನು ಲಕ್ಷಿಸತಕ್ಕವನಲ್ಲ.

ದ್ರೋಣ:— ಕುಮಾರಾ, ಈ ಆತ್ಮಘಾತಕವಿಚಾರವನ್ನು ಬಿಟ್ಟು ಸುಮ್ಮನೆ ನನ್ನ ಮಾತುಗಳನ್ನು ಕೇಳಿ ಹೊರಟುಹೋಗು.

[ಪರದೆಯಲ್ಲಿ ಹೊರಟು ಹೋಗು? ಇನ್ನೆಲ್ಲಿಗೆ ಹೊರಟುಹೋಗುವೆ ?]

ಅದೋ ನೋಡು ದುಶ್ಶಾಸನಾದಿ ಕೌರವ ವೀರರು ಇತ್ತಕಡೆಗೇ ಬಂದರು. ಹೋಗು ಹೋಗು ಜಾಗ್ರುತೆಯಾಗಿ ಇಲ್ಲಿಂದ............

ಅಭಿ:— ಆಚಾರ್ಯರೆ, ತಾವೇ ಇಲ್ಲಿಂದ ಹೊರಟು ಹೋಗಿರಿ. ಇಲ್ಲವಾದರೆ ಯುದ್ಧಕ್ಕೆ ಸಿದ್ಧರಾಗಿರಿ.

ದ್ರೋಣ:— ನಿನ್ನಂತಹ ಬಾಲವೀರನ ಕೂಡ ಯುದ್ಧ ಮಾಡುವುದು ಈ ದ್ರೋಣನಿಗೆ ಧರ್ಮವಲ್ಲ; ಮತ್ತು ಪುರುಷಾರ್ಥವಲ್ಲ. (ಹೋಗುವರು)

ದುಶ್ಶಾ:— (ಪ್ರವೇಶಿಸಿ) ಹೊರಟು ಹೋಗು ? ಇನ್ನೆಲ್ಲಿ ಹೊರಟು ಹೋಗುವೆ ? ಇನ್ನು ಮೇಲೆ ಪ್ರಾಣದಾಶೆಯನ್ನು ಬಿಡು.

ಅಭಿ:— ಎಲೋ, ಹೋಗು ಹೋಗು. ನಿನ್ನಂತಹ ದುರಾತ್ಮನನ್ನು ಒಂದೇ ಕೈಯಿಂದ ಹೀಗೆ ತೂರಿ ಬಿಸಾಕುವೆನು.

ದುಶ್ಶಾ:— ಮೂರ್ತಿಯು ಚಿಕ್ಕದು, ಆದರೆ ಪರಾಕ್ರಮದ ಕೀರ್ತಿಯು ದೊಡ್ಡದು. ಅಭಿಮನ್ಯು, ನೀನು ನನ್ನನ್ನು ಮನ್ನಿಸದಿದ್ದರೂ ನನ್ನ ಹಿರಿತನದ ಸಂಬಂಧವನ್ನಾದರೂ ಮನ್ನಿಸು.

ಅಭಿ:— ಹಿರಿಯತನದ ಸಂಬಂಧ— ? ಮನುಷ್ಯನು ಸ್ವಕಾರ್ಯಸಾಧನ ಕ್ಕೋಸುಗ ದುರಭಿಮಾನಕ್ಕೊಳಗಾಗಿ ಇಲ್ಲದ ಸಂಬಂಧವನ್ನು ಹಚ್ಚುವುದಕ್ಕೆ ಯತ್ನಿಸುವನು. ಅಲ್ಲದೆ ಅಂತಹ ಸಂಬಂಧವನ್ನು ಹಚ್ಚುವುದಕ್ಕೆ ಇಲ್ಲಿಯೇನು ಹೋಳಿಗೆ ತುಪ್ಪದ ಊಟವಿಲ್ಲ. ಇದು ರಣಾಂಗಣವಿದೆ. ಯುದ್ಧಮಾಡು, ನಿನ್ನ ಪರಾಕ್ರಮವನ್ನು ತೋರಿಸು.

ದುಶ್ಶಾ:— ಏನು ಮಾಡಲಿ. ಬರೀ ಕೈಯಿಂದಲೇ ನಿನ್ನ ರುಂಡವನ್ನು ಹಿಂಡಿಬಿಡುತ್ತಿದ್ದೆನು; ಆದರೆ ನಿನ್ನಂತಹ ಚಿಕ್ಕ ಹುಡುಗನ ಮೇಲೆ ಕೈಯೆತ್ತುವುದಕ್ಕೆ ಈ ಕೈಗಳಿಗೇ ನಾಚಿಕೆಯಾಗುವುದು.

ಅಭಿ:— ಜನಲಜ್ಜೆಯನ್ನೂ ಮನಲಜ್ಜೆಯನ್ನೂ ತಲೆಗೆ ಸುತ್ತಿ, ತುಂಬಿದ ಸಭೆಯಲ್ಲಿ ನನ್ನ ದ್ರೌಪದೀಮಾತೆಯನ್ನು ನಗ್ನ ಮಾಡುವುದಕ್ಕೆ ಪ್ರಯತ್ನಿಸಿದ ದುಶ್ಶ್ಯಾಸನನ ಪಾತಕೀ ಕೈಗಳಿಗೆ ಈಗ ನಾಚಿಕೆ ಬರುವುದೇ ? ನಿರ್ಲಜ್ಜಾ, ದುರಾತ್ಮಾ, ನನ್ನ ಪರಮಪೂಜ್ಯಮಾತೆಯ ವಿಡಂಬನೆ ಮಾಡಿದ ನಿನ್ನ ಸೇಡನ್ನು ಈ ದಿವಸ ಅಭಿಮನ್ಯು ಹೀಗೆ ತೀರಿಸಿಕೊಳ್ಳುತ್ತಾನೆ. ನೋಡು. (ಅವನ ಎದೆಯ ಮೇಲೆ ಹತ್ತಿ ಕೂಡುವನು.) ಮಾತಾಡು, ಆ ಸತಿಯನ್ನು ಪಾಪದೃಷ್ಟಿಯಿಂದ ನೋಡಿದ ಈ ನಿನ್ನ ಪಾಪೀಕಣ್ಣುಗಳನ್ನು ಸಮೂಲವಾಗಿ ಕಿತ್ತು ಹೊರಗೆ ತೆಗೆಯಲೆ ?

ಪತಿವ್ರತಾಶಿರೋಮಣಿಯ ಸೀರೆಯನ್ನು ಸೆಳೆಯುವುದಕ್ಕೆ ಧಾವಿಸಿದ ನಿನ್ನ ಕೈಗಳನ್ನು, ತಿಂದು ತಿಂದು ಸೊಕ್ಕಿದ ಈ ದುಷ್ಟ ದೇಹದಿಂದ ಬೇರೆ ಮಾಡಿ ಬಿಡಲೆ? ಆದರೆ ಬೇಡ ನಿನ್ನ ನರಗಳ ರಕ್ತವನ್ನು ಕುಡಿಯುವುದಕ್ಕೋಸ್ಕರ ಭೀಮಸೇನ ಕಕ್ಕನು ಪ್ರತಿಜ್ಞೆ ಮಾಡಿರುವನು. ಆತನ ಪವಿತ್ರವಾದ ಪ್ರತಿಜ್ಞೆಗೆ ಅಡ್ಡವಾಗಿ ನಾನು ಬರುವುದಿಲ್ಲ. ಹೋಗು, ನಿನಗೆ ಜೀವದಾನ ಕೊಟ್ಟಿರುವೆನು.

ದುಶ್ಯಾ:— (ಸ್ವ) ಈತನಿಗೆ ಬಾಲಕನೆಂದು ಯಾರು ಹೇಳುವರು? ಈತನು ಅಂತಕನ ಪ್ರಾಣಾಂತಕನು. (ಹೋಗುವನು.)

ಅಭಿ:— (ನೋಡಿ) ಯಾರು? ದುರ್ಯೋಧನನು. ಬನ್ನಿ ಬನ್ನಿ ನಿಮ್ಮ ಸರ್ವರ ಮೂರ್ತಿಮಂತ ಮೃತ್ಯು ಇಲ್ಲಿ ಸಿದ್ಧನಾಗಿ ನಿಂತಿರುವನು.

ದುರ್ಯೋ:— (ಪ್ರವೇಶಿಸಿ) ಎಲ್ಲಿರುವನು? ನನ್ನ ಪ್ರಿಯ ಕುಮಾರನಾದ ಲಕ್ಷ್ಮಣನನ್ನು ಸಂಹರಿಸಿದ ಆ ಚಾಂಡಾಲ ಹುಡುಗನು ಎಲ್ಲಿರುವನು?

ಅಭಿ:— ಇಕೋ ಇಲ್ಲಿಯೇ ನಿನ್ನ ಸಮ್ಮುಖದಲ್ಲಿ ಎದೆಗೊಟ್ಟು ನಿಂತಿರುವೆನು.

ದುರ್ಯೋ:— ಎಲೋ ಹುಡುಗಾ, ನಿನಗೆ ಮೃತ್ಯುವಿನ ಭಯವೇ ಇಲ್ಲವೆ?

ಅಭಿ:— ಮೃತ್ಯುವಿನ ಭಯವು ಪಾಪಿಗಳಿಗೆ; ಹೇಡಿಗಳಾದ ದುಷ್ಟರಿಗೆ! ಬಾಣದ ತುದಿಯ ಮೇಲೆ, ಕತ್ತಿಯ ಮೊನೆಯ ಮೇಲೆ ಕುಣಿದಾಡುವಂತಹ ವೀರನನ್ನು ನೋಡಿದ ಕೂಡಲೇ ಮೃತ್ಯುವು ಭಯಪಟ್ಟು ಓಡಿ ಹೋಗುವುದು.

ದುರ್ಯೋ:— ಮೂರ್ಖಾ ಸುಮ್ಮನೆ ನನ್ನ ಮುಂದೆ ಪ್ರತಿಷ್ಠೆಯನ್ನು ತೋರಿಸುವೆಯಾ? (ಉಭಯತರಿಗೂ ಯುದ್ಧವಾಗಿ ದುರ್ಯೋಧನನು ನೆಲಕ್ಕೆ ಬೀಳುವನು) ಅಯ್ಯೋ ಅಯ್ಯೋ, ಬನ್ನಿರಿ ಯಾರಾದರೂ ನನ್ನ ಸಹಾಯಕ್ಕೆ ಬನ್ನಿರಿ!

ಜಯ:— (ತ್ವರೆಯಿಂದ ಪ್ರವೇಶಿಸಿ) ಇಗೋ ನೋಡು, ಈ ಜಯದ್ರಥನು ಆ ಹುಡುಗನನ್ನು ಮಣ್ಣುಗಾಣಿಸುವದಕ್ಕೆ ಸಿದ್ಧನಾಗಿ ಬಂದಿರುವನು.

(ಭಯಪಟ್ಟು ಸ್ವಗತ) ಎಲಾ ಈ ಹುಡುಗನ ಭೀಕರವಾದ ಮೂರ್ತಿಯ ಕಡೆಗೆ ನನ್ನಿಂದ ನೋಡುವುದಕ್ಕೆ ಆಗುವದಿಲ್ಲವಲ್ಲ. ಈ ಸಮಯದಲ್ಲಿ ಹೀಗೆ ಯುಕ್ತಿಯನ್ನು ಮಾಡಬೇಕು. (ಪ್ರಕಾಶ) ಭಾಪು ಭಾಪು, ಪರಾಕ್ರಮ ಶಾಲಿಯಾದ ಬಾಲವೀರನೆ, ಭಾಪು ಭಾಪು !

ಅಭಿ:— ಯಾಕೆ ಜಯದ್ರಥ, ನಿನ್ನ ಆವೇಶವು ಎಲ್ಲಿ ಹೋಯಿತು? ನಿನ್ನ ದುಷ್ಟತನವು ಎಲ್ಲಿ ಅಡಗಿತು ?

ಜಯ:— (ಮೊಣಕಾಲೂರಿ) ನಾನು ನಿನಗೆ ಶರಣುಬಂದಿರುವೆನು. ಶರಣಾಗತ ರಿಗೆ ಅಭಯ ಕೊಡುವುದು ವೀರರಿಗೆ ಭೂಷಣವಲ್ಲವೆ?

ಅಭಿ:— ನಿನಗೆ ಅಭಯ ಕೊಟ್ಟಿರುವೆನು. ಆದರೆ ಚಕ್ರವ್ಯೂಹದ ಹೊರಗೆ ಹೋಗುವ ಮಾರ್ಗವನ್ನು ಸರಿಯಾಗಿ ನನಗೆ ತೋರಿಸು.

ಜಯ:— (ಸ್ವ) ಸ್ವಲ್ಪ ತಾಳು. ನಿನಗೆ ಸ್ವರ್ಗದ ಮಾರ್ಗವನ್ನೇ ತೋರಿ ಸುತ್ತೇನೆ. (ಪ್ರಕಟ) ತೋರಿಸುತ್ತೇನೆ. ಆದರೆ ಕೈಯಲ್ಲಿರುವ ಧನುಷ್ಯ ಬಾಣಗಳನ್ನು ಮತ್ತು ಕತ್ತಿಯನ್ನು ಆಚೆಗೆ ದೂರವಾಗಿ ಚೆಲ್ಲು ನನಗೆ ಭಯವಾಗುವುದು.

ಅಭಿ:— ಥೂ ಹೇಡಿಯೇ ! ಇದೋ ನಿನ್ನ ಮಾತುಗಳ ಮೇಲೆ ವಿಶ್ವಾಸ ವನ್ನಿಟ್ಟು ಈ ನನ್ನ ಶಸ್ತ್ರಾಸ್ತ್ರಗಳನ್ನು ಇದೋ ಬಿಸಾಡುತ್ತೇನೆ. (ಹಾಗೆ ಮಾಡುವನು.) ನಡೆಯಿನ್ನು.

ಜಯ:— ಇನ್ನೆಲ್ಲಿ ಹೋಗುವೆ? ಬನ್ನಿರೋ, ಎಲ್ಲರೂ ಒಮ್ಮೆಲೆ ಬನ್ನಿರಿ. ಈ ಹುಡುಗನನ್ನು ನೆಲಕ್ಕುರುಳಿಸಿರಿ.

(ಅಶ್ವತ್ಥಾಮ, ಕರ್ಣ, ದುಶ್ಶಾಸನ ಮೊದಲಾದವರು ಬರುವರು.)

ಅಭಿ:— ಎಲಾ ಎಲಾ, ಘಾತವು ಘಾತವು! ಷಂಢಾ ಜಯದ್ರಥಾ, ನನ್ನನ್ನು ಹಿಡಿಯುವುದಕ್ಕೋಸುಗ ಕೊನೆಗೆ ನಿನಗೆ ಇಂಥಾ ಕಪಟ ಕಾರಸ್ಥಾನವನ್ನೇ ಮಾಡಬೇಕಾಯಿತೆ? ತನ್ನಿರಿ ತನ್ನಿರಿ ಯಾರಾದರೂ ನನ್ನ ಖಡ್ಗವನ್ನು ನನ್ನ ಕೈಗೆ ಕೊಡಿರಿ. ಈ ಕಪಟಿಗಳಾದ ರಾಕ್ಷಸ ರನ್ನು ಮಣ್ಣುಗಾಣಿಸುತ್ತೇನೆ.

(ಬೃಹದ್ಬಲನನ್ನು ಕೊಂದುಹಾಕುತ್ತಾನೆ.)

ದುರ್ಯೋಧನ:— ಎಲ ಎಲಾ, ಈ ಹುಡುಗನು ಮಾತಾಡುತ್ತ ಮಾತಾಡುತ್ತಾ ಆವೇಶದ ಭರದಲ್ಲಿ ಬೃಹದ್ಬಲನನ್ನು ಕೂಡಾ ಸಂಹರಿಸಿದನು. ಹಿಡಿಯಿರಿ ಈತನನ್ನು ಗಟ್ಟಿಯಾಗಿ ಹಿಡಿಯಿರಿ.

(ಮುತ್ತಿಗೆ ಹಾಕಿ ಭಾಲೆಗಳಿಂದ ಗುರಿಯಿಡುವರು)

ಅಭಿ:— ಭೀಮಸೇನರ್ಕ್ಕಾ ! ಸಾತ್ಯಕಿ ! (ಕೂಗುವನು.)

ಜಯ:— ಇನ್ನು ಬೇಕಾದಷ್ಟು ಒದ್ದಾಡು ಚೀರಾಡು. ಇನ್ನು ಮೇಲೆ ಯಾರೂ ಬರುವ ಹಾಗಿಲ್ಲ. ಈ ಬಹದ್ದೂರನು ಅವರನ್ನು ಆಗಲೇ ದೂರ ಓಡಿಸಿ ಬಂದಿರುವನು. ಹೂ, ಇನ್ನು ಮೇಲೆ ದೇವರ ನಾಮ ಸ್ಮರಣೆಯನ್ನು ಮಾಡು.

ಅಭಿ:— ಹಾಯ್ ಹಾಯ್ ನಾಲ್ಕೂ ಕಡೆಯಿಂದ ದುರ್ದೈವವು ನನಗೆ ಮುತ್ತಿಗೆ ಹಾಕಿತು. ಆಚಾರ್ಯರೇ ಆಚಾರ್ಯರೇ ಇದು ನಿಮಗೆ ಧರ್ಮವೇ ? ಮಾತಾಡಿರಿ, ಆಚಾರ್ಯರೇ ಇಂತಹ ವಿಶ್ವಾಸಘಾತದಿಂದ ನನಗೆ ಮರಣಬರುವದು ನಿಮ್ಮ ಧರ್ಮಬುದ್ಧಿಗೆ ಯೋಗ್ಯವೆನಿಸುವುದೆ ? ಆಚಾರ್ಯರೆ, ಮಾತಾಡಿರಿ. ಸುಮ್ಮನೆ ಏಕೆ ನಿಂತಿರುವಿರಿ.

ದ್ರೋಣ:— ಹಾ, ಖಬರದಾರ್ ! ನೀಚ ರಾಕ್ಷಸರೇ, ಇದು ವಿಶ್ವಾಸಘಾತವು, ಅಧಮತನವು, ಅತ್ಯಾಚಾರವು ! ಧಿಕ್ಕಾರ ಧಿಕ್ಕಾರವಿರಲಿ. ನಿಮ್ಮ ಶೌರ್ಯಕ್ಕೆ ! ನಿರ್ಲಜ್ಜರಾದ ನಪುಂಸಕರೆ, ಒಬ್ಬ ವೀರ ಬಾಲಕನನ್ನು ವಿಶ್ವಾಸಘಾತದಿಂದ ಸಂಹರಿಸುವುದಕ್ಕೆ ಪ್ರಯತ್ನ ಮಾಡುವಿರಾ ? ಇಂತಹ ಪಾತಕವು ನಿಮ್ಮ ಕುಲವನ್ನು ನಾಶಮಾಡದೆ ಬಿಟ್ಟೀತೆ ?

ಜಯ:— ಆಚಾರ್ಯರೇ, ಈ ನಿಮ್ಮ ಪಾಪ ಪುಣ್ಯದ ಪುರಾಣವನ್ನು ಸಾಕು ಮಾಡಿರಿ.ನಿಮ್ಮಿಂದ ಇಂತಹ ಪ್ರಸಂಗವನ್ನು ನೋಡುವದಕ್ಕಾಗದಿದ್ದರೆ ಮುಖವನ್ನು ಕಪ್ಪುಮಾಡಿಕೊಂಡು ಹೊರಟು ಹೋಗಿರಿ.

ದ್ರೋಣ:— ಹಾಯ್ ದುರ್ದೈವವೇ ಈ ದುಷ್ಟರ ಸಹವಾಸದಿಂದ ಇಂತಹ

ಘೋರ ಕೃತ್ಯವನ್ನು ನಾನು ನೋಡಬೇಕಾಯಿತು. ಧಿಕ್ಕಾರ ಧಿಕ್ಕಾರವಿರಲಿ ನನ್ನ ಜನ್ಮಕ್ಕೆ.

ಅಭಿ:— ಆಚಾರ್ಯರೆ, ನಿಮ್ಮ ಕಣ್ಣೆದುರಿಗೆ ನಡೆದ ಈ ಘೋರ ರಾಕ್ಷಸಿ ಕೃತ್ಯವನ್ನು ನೋಡುತ್ತ ನೀವು ಸುಮ್ಮನೆ ನಿಂತಿರುವಿರಿ. ಇದು ನಿಮಗೆ ಧರ್ಮವೆ? ಮಾತಾಡಿರಿ, ಆಚಾರ್ಯರೆ ಇಂತಹ ವಿಶ್ವಾಸ ಘಾತದಿಂದ ನನಗೆ ಮರಣಬರುವುದು ನಿಮ್ಮ ಧರ್ಮಬುದ್ಧಿಗೆ ಯೋಗ್ಯವೆನಿಸುವುದೆ? ಆಚಾರ್ಯರೆ, ಮಾತಾಡಿರಿ ಸುಮ್ಮನೆ ಏಕೆ ನಿಂತಿರುವಿರಿ.

ದ್ರೋಣ:—ವತ್ಸಾ, ಈ ಸಮಯದಲ್ಲಿ ನ್ಯಾಯದಿಂದ, ಧರ್ಮದಿಂದ, ಸತ್ಯದಿಂದ ಮಾತಾಡುವದಕ್ಕೆ ಈ ದ್ರೋಣಾಚಾರ್ಯನ ಮುಖದಲ್ಲಿಯ ನಾಲಿಗೆಯು ನಿರ್ಮೂಲವಾಗಿ ಹೋಗಿದೆ! ಆ ನಾಲಿಗೆಯು ಈ ಕೌರವರ ಪಾಪಮಯವಾದ ಅನ್ನವನ್ನು ತಿಂದು ಸುಟ್ಟು ಬೂದಿಯಾಗಿ ಹೋಗಿದೆ! ಕುಮಾರಾ, ನೀನು ಹೇಗೆ ಚಕ್ರವ್ಯೂಹದಲ್ಲಿ ಸಿಕ್ಕಿರುವೆಯೊ, ಹಾಗೆ ನಾನಾದರೂ ಮೂರ್ತಿಮಂತ ಅಧರ್ಮ ಅನಾಚಾರದ ಪ್ರಭುಗಳಾದ ಈ ಚಾಂಡಾಲರ ಗುಲಾಮಗಿರಿಯ ಚಕ್ರವ್ಯೂಹದಲ್ಲಿ ಸಿಕ್ಕಿರುವೆನು. ಈ ಸಮಯದಲ್ಲಿ ನಾವೀರ್ವರೂ ಅನಾಥರು ಸಹಾಯರಹಿತರು.

ಜಯದ್ರಥ:— ಯಾಕೆ ಆಚಾರ್ಯರೆ ವಿವೇಕವು ನಿಮ್ಮ ನಾಲಿಗೆಯನ್ನು ಮುತ್ತಿತೇ?

ದ್ರೋಣ:— ಕೃತಕರ್ಮದ ಪ್ರಾಯಶ್ಚಿತ್ತವು ನನ್ನನ್ನು ಮೂಕನನ್ನಾಗಿ ಮಾಡಿತು. ಕೌರವರ ಪಾಪಮಯ ಅನ್ನವನ್ನು ಸೇವಿಸದೆ ಇದ್ದರೆ, ಈ ದ್ರೋಣಾಚಾರ್ಯನಿಗೆ ಇಂತಹ ಅಧರ್ಮದ ಕೊಲೆಯನ್ನು ನೋಡಿ ಅಂತಃಕರಣ ಶೂನ್ಯನಾಗಿ ಬೋರ್ಗಲ್ಲಿನಂತೆ ಹೀಗೆ ನಿಲ್ಲುವ ಪ್ರಸಂಗವೇ ಬರುತ್ತಿರಲಿಲ್ಲ. ದುರ್ಯೋಧನಾ, ನಿನ್ನ ಕಲ್ಯಾಣದ ವಿಷಯವನ್ನು ಹೇಳುತ್ತೇನೆ. ಇಂತಹ ಕಪಟದಿಂದ ಈ ಕುಮಾ

ರನ ಕೊಲೆಯನ್ನು ಮಾಡಬೇಡ. ರೌರವ ನರಕಕ್ಕೆ ಗುರಿಯಾಗ ಬೇಡ.

ದುರ್ಯೋಧನ:— ಅಂದರೆ, ಈ ಸರ್ಪದ ಮರಿಯನ್ನು ಜೀವಂತವಾಗಿ ಬಿಡೋಣವೆ?

ದ್ರೋಣ:— ಎಲೋ, ಇದು ಸರ್ಪದ ಮರಿಯಲ್ಲ; ಪರಾಕ್ರಮಿಯಾದ ಸಿಂಹದ ಮರಿಯು. ಇಂತಹ ರಾಕ್ಷಸೀ ಕೃತಿಯನ್ನು ಮಾಡಿ ನಿಮ್ಮ ಶೌರ್ಯಕ್ಕೆ ಮತ್ತು ನಿಮ್ಮ ಕುಲಕ್ಕೆ ಕುಂದು ತರಬೇಡಿರಿ. ದುರ್ಯೋಧನಾ, ಕೊಡು ಅಭಿಮನ್ಯುವಿಗೆ ಜೀವದಾನವನ್ನು ಕೊಡು.

ಜಯ:— ಏಕೋ ಹುಡುಗಾ, ನಿನಗೆ ಜೀವದಾನವು ಬೇಕೆ?

ಅಭಿ:— ಇಲ್ಲ; ಕಾಲತ್ರಯಕ್ಕೂ ಪ್ರಾಣಭಿಕ್ಷೆಯನ್ನು ಬೇಡಲಾರೆನು. ಪ್ರಾಣಭಿಕ್ಷೆಯನ್ನು ಬೇಡುವುದು, ಕ್ಷತ್ರಿಯನಾದವನಿಗೆ ಪುರುಷಾರ್ಥವಲ್ಲ. ಈ ಅಭಿಮನ್ಯುವನ್ನು ನೀವು ಯಾರೆಂದು ತಿಳಿದಿರುವಿರಿ? ಈ ಪಾರ್ಥಪುತ್ರನು ದುಷ್ಟರ ಕೃಪಾಪೇಕ್ಷೆಯನ್ನು ಸರ್ವಥಾ ಮಾಡಲಾರನು.

ದ್ರೋಣ:— ಭಾಪು, ಭಾಪು, ಅಭಿಮನ್ಯುವೆ! ನೀನು ನಿಶ್ಚಯವಾಗಿ ಸಮರ ಕೇಸರಿಯ ವೀರಪುತ್ರನಾಗಿ ಶೋಭಿಸುವೆ. ನಿನ್ನನ್ನು ಹೆತ್ತ ಆ ನರಕೇಸರಿಯು ಧನ್ಯನು.

ದುರ್ಯೋ:— (ದ್ವೇಷದಿಂದ) ನರಕೇಸರಿಯೆ? ಯಾವನವನು- ಆ ಅರ್ಜುನನೇ? ಆಚಾರ್ಯರೆ, ಜೋಕೆ, ಇನ್ನೊಂದು ಸಲ ಆ ಮರ್ಕಟನಿಗೆ ಕೇಸರಿಯೆಂದು ಉಚ್ಚರಿಸಿದರೆ ಬಹಳ ಪ್ರಮಾದವಾದೀತು! ಕೇಸರಿಯಂತೆ ಕೇಸರಿ! ಈ ಶಬ್ದಗಳನ್ನು ಕೇಳಿದ ಕೂಡಲೆ ನನ್ನ ಸರ್ವಾಂಗವು ತಪ್ತವಾಗಿ ಹೋಗುವುದು.

ದ್ರೋಣ:— ಆ ಕೇಸರಿಯ ಯೋಗ್ಯತೆಯು ನಿಮ್ಮಂತಹ ಕಾಡು ನರಿಗಳಿಗೆ ಹೇಗೆ ತಿಳಿಯುವುದು? ಆ ನರಕೇಸರಿಯು ಈ ಸಮಯದಲ್ಲಿ ಇಲ್ಲಿ

ಬಂದಿದ್ದರೆ ಇಂತಹ ಸೊಕ್ಕಿನ ಶಬ್ದಗಳನ್ನು ಮಾತಾಡುವುದಕ್ಕೆ ನೀವು ಈ ಜಗತ್ತಿನಲ್ಲಿ ಜೀವಂತವಾಗಿ ಉಳಿಯುತ್ತಿರಲಿಲ್ಲ. ದುರ್ಯೋಧನಾ, ಅವನಿಗೋಸುಗವಾಗಿ ನಾನು ನಿನಗೆ ಬಿಕ್ಷೆ ಬೇಡುತ್ತೇನೆ. ನನ್ನ ಮಾತುಗಳನ್ನು ಕೇಳಿ ಈ ಅಭಿಮನ್ಯುವಿಗೆ ಪ್ರಾಣದಾನವನ್ನು ಕೊಡು.

ದುರ್ಯೋ:— ಅಭಿಮನ್ಯು, ಹೇಳು, ನಿನಗೆ ಯಾವದಾನವು ಬೇಕು? ಜೀವದಾನದ ಭಿಕ್ಷೆಯು—

ಅಭಿ:— ಬೇಡ ನನಗೆ ಸರ್ವಥಾ ಬೇಡ. ನೀವು ವೀರ ವಂಶದಲ್ಲಿ ಜನ್ಮಿಸಿದ್ದರೆ ವೀರರಿಗೆ ಉಚಿತವಾದ ದಾನವನ್ನು ನನಗೆ ಕೊಡಿರಿ. ನನ್ನ ಖಡ್ಗವನ್ನು ಧನುಸ್ಸುಭಾಣಗಳನ್ನು ನನ್ನ ಕೈಯಲ್ಲಿ ಕೊಟ್ಟು ಸಮರಾಂಗಣದಲ್ಲಿ ವೀರರಂತೆ ನನ್ನ ಕೂಡ ಯುದ್ಧ ಮಾಡುವುದಕ್ಕೆ ಸಿದ್ಧರಾಗಿರಿ. ಇದೇ ದಾನವು ನನಗೆ ಬೇಕು.

ಜಯ:— ಇನ್ನು ಮೇಲೆ ಆ ದಾನವನ್ನು ಕೊಡುವುದಕ್ಕೆ ನಾವೇನು ಅಷ್ಟು ಮೂರ್ಖರಲ್ಲ ತಿಳಿಯಿತೆ?

ಅಭಿ:— ಥೂ ಥೂ, ನಿಮ್ಮ ಶೌರ್ಯಕ್ಕೂ ಪರಾಕ್ರಮಕ್ಕೂ ಧಿಕ್ಕಾರ ವಿರಲಿ. ಇದೋ ನೋಡು, ಈ ಅಭಿಮನ್ಯುವು ಬರೀ ಅಂಗಸಾಮರ್ಥ್ಯ ದಿಂದಲೇ ನಿಮ್ಮನ್ನು ಸಂಹರಿಸುವನು.

ದುಶ್ಯಾ:— ಸಾಕು, ಸಾಕುಮಾಡು ಬಡಬಡಿಕೆಯನ್ನು ನಡೆ, ಇನ್ನು ಪರ ಲೋಕಯಾತ್ರೆಗೆ! (ಎಲ್ಲರೂ ಕೂಡಿ ಅವನನ್ನು ಹೊಡೆಯುವರು. ಅಭಿಮನ್ಯುವು ಘಾಯವಾಗಿ ಬೀಳುವನು)

ಅಭಿ:— ಹಾಯ್ ಹಾಯ್! ಕೊನೆಗೆ ಈ ದುಷ್ಟರ ಕಪಟ ಕಾರಸ್ಥಾನಕ್ಕೆ ಬಲಿ ಬೀಳಬೇಕಾಯಿತೇ? ಆಚಾರ್ಯರೆ— ಆಚಾರ್ಯರೆ—

ದ್ರೋಣ:— (ಹಣೆ ಬಡಿದುಕೊಂಡು) ಧಿಃಕಾರವಿರಲಿ, ಈ ಆಚಾರ್ಯನ ಅಧಮ ವೃತ್ತಿಗೆ! ದಿಕ್ಕಾರವಿರಲಿ ನನ್ನೀ ದಾಶ್ಯತ್ವದ ಪಾಪಿ ಜೀವನಕ್ಕೆ!

ಅಭಿ:— (ಒದ್ದಾಡುತ್ತ) ಪಂಚಮಹಾಭೂತಗಳಿರಾ, ನಾನು ಹೋಗುವೆನು.

ಹೋಗುವೆನು. ಈ ಅತ್ಯಾಚಾರಿಗಳಾದ ಅಧಮರು ಕೇವಲ ಕಪಟತನದಿಂದ ನನ್ನನ್ನು ಸಂಹಾರ ಮಾಡಿದರು. ಇದಕ್ಕೆ ನೀವೇ ಸಾಕ್ಷಿ. ಆದರೆ ಈ ಅಭಿಮನ್ಯುವು ಮಾತ್ರ ತನ್ನ ಶೌರ್ಯವನ್ನು ಶಿಖರಕ್ಕೆ ಮುಟ್ಟಿಸಿದನು.

ಜಯ:— ಎಲೊ ಮೂರ್ಖಾ, ಸಾಯುವ ಕಾಲಕ್ಕೆ ಹೀಗೇಕೆ ಕಂಠಶೋಷ ಮಾಡಿಕೊಳ್ಳುವೆ? ಇನ್ನು ಸುಖದಿಂದ ಪ್ರಾಣಬಿಡು. ನನ್ನ ಸೇಡು ನಾನು ತೀರಿಸಿಕೊಂಡೆನು. (ಮಸ್ತಕಕ್ಕೆ ಒದೆಯುವನು)

ಅಭಿ:— ಹಾಯ್ ಹಾಯ್! ಮಸ್ತಕಕ್ಕೆ ಪಾದಪ್ರಹಾರವು! ಜಯದ್ರಥಾ, ಈ ಪ್ರಹಾರವು ನನ್ನನ್ನು ಸ್ವರ್ಗಕ್ಕೆ ಏರಿಸುವುದು. ಆದರೆ ನಿನ್ನನ್ನು ಮಾತ್ರ ಪ್ರಾಣಸಂಕಟಕ್ಕೆ ಗುರಿಮಾಡುವುದು. ರೌರವ ನರಕವನ್ನು ಕಾಣಿಸುವುದು. ಇದನ್ನು ಮಾತ್ರ ಲಕ್ಷ್ಯದಲ್ಲಿಡು. ತಂದೆಯೆ! ಅವಮಾನವು! ಸೇಡು–ಸೇಡು ತೀರಿಸು!

ದ್ರೋಣ:— ಎಲ ಎಲಾ, ನಿಮ್ಮ ದುರಾಚಾರವು ಶಿಖರಕ್ಕೆ ಮುಟ್ಟಿತು. ಜಯದ್ರಥಾ, ಗಾಯಾಳುವಾದ ಸಿಂಹದ ಮರಿಗೆ ಮಾಡಿದ ಲತ್ತಾಪ್ರಹಾರವು ನಿನ್ನ ವಂಶವನ್ನು ನಾಶಮಾಡದೆ ಎಂದಿಗೂ ಬಿಡಲಾರದು. ಈ ಅಭಿಮನ್ಯುವಿನ ರಕ್ತದ ಒಂದೊಂದೇ ಬಿಂದುಗಳಿಂದ ಅಸಂಖ್ಯ ವೀರ ಅಭಿಮನ್ಯುಗಳು ಈ ಭರತಖಂಡದಲ್ಲಿ ಹುಟ್ಟುವರು. ಮತ್ತು ದುರ್ಯೋಧನನಂತಹ ರಾಕ್ಷಸೀ ಕೃತ್ಯಮಾಡುವ ನೀಚ ರಾಜರನ್ನು ರಸಾತಲಕ್ಕೆ ಮೆಟ್ಟದೆ ಎಂದೂ ಬಿಡಲಾರರು.

ಅಭಿ:— ಆಚಾರ್ಯರೆ, ನನ್ನ ಅಂತ್ಯಕಾಲದ ಸತ್ಯಸಂದೇಶವೂ ಇದೇ. ಅದು ನಿಮ್ಮ ಮುಖದಿಂದ ಹೊರಬಿತ್ತು. ಆ–ಚಾ–ಯ–ರ್–ರೇ,— ಪ್ರ–ಣಾ–ಮ–ವು— ಶ್ರೀ–ಕೃ–ಷ್ಣಾ— ಅ–ಪ್ಪಾ— ಅ–ಮ್ಮಾ— ಪ್ರಿ–ಯೇ— ಉ–ತ್ತ–ರೇ— ಶ್ರೀ–ಕೃ–ಷ್ಣಾ—! (ಮೃತನಾಗುವನು.)

ಜಯ:— (ಆನಂದದಿಂದ) ಹೋದನು, ಹೋದನು. ಸಿಂಹಾರ್ಭಕನು ಮೃತ್ಯುವಿನ ಬಾಯಿಗೆ ಬಲಿಯಾದನು.

ದ್ರೋಣ:— ಜಯದ್ರಥಾ, ಈ ವೀರ ಕಂಠೀರವ ಕುಮಾರನ ಸ್ವರೂಪದಲ್ಲಿ ಅಡಗಿದ್ದ ನಿನ್ನ ಪೂರ್ವಪುಣ್ಯ ತೇಜೋರಾಶಿಯು ಈ ನಿನ್ನ ಲತ್ತಾ ಪ್ರಹರದಿಂದ ಬುಡಸಹಿತವಾಗಿ ಹಾಳಾಗಿ ಹೋಯಿತು.

(ಅಭಿಮನ್ಯುವಿನ ತಲೆಯ ಮೇಲೆ ಕಾಲಿಟ್ಟುಕೊಂಡು ಪ್ರಸನ್ನಮುಖನಾಗುವನು ಕೌರವ ಸಪ್ತವೀರರು ಹೆಣದ ಮೇಲೆ ಭಾಲೆಗಳನ್ನೂರುವರು. ದ್ರೋಣಾಚಾರ್ಯರು ಹತಾಶರಾಗಿ ಮುಖ ತಿರುವಿಕೊಂಡು ನಿಲ್ಲುವರು. ಅಭಿಮನ್ಯುವಿನ ಮೇಲೆ ದೇವತೆಗಳು ಹೂಮಳಗರೆಯುವರು.)

(ದ್ವಿತೀಯಾಂಕ ಸಮಾಪ್ತ)

ಮೂರನೆಯ ಅಂಕು

ಒಂದನೆಯ ಪ್ರಸಂಗ

(ಸ್ಥಳಃ— ಜಂಗಲರಸ್ತೆ ಪಾತ್ರಗಳು— ಶ್ರೀಕೃಷ್ಣ, ಅರ್ಜುನ)

ಅರ್ಜುನ:— ಭಗವನ್ ಬಲಾಢ್ಯವೀರರಾದ ಸಂಶಪ್ತಕರ ಕೂಡ ಯುದ್ಧವನ್ನು ಮಾಡಿ ವಿಜಯವನ್ನು ಸಂಪಾದಿಸಿದ ವಿಷಯವಾಗಿ ಈ ದಿವಸ ನನ್ನ ಮನಸ್ಸಿಗೆ ವಿಂತಿಮೀರಿ ಆನಂದವಾಗಿದೆ. ಆದರೆ ದೇವಾ, ಈ ಆನಂದವು ತಮ್ಮ ಕೃಪಾಪ್ರಸಾದದಿಂದಲೇ ಲಭಿಸಿತು.

ಕೃಷ್ಣ:— ಅರ್ಜುನಾ, ನಿನ್ನ ಆನಂದಕ್ಕೆ ಸಹಾಯಕರ್ತನು ನಾನಿದ್ದರೂ ನಿನ್ನ ಕೀರ್ತಿಯ ಪಾಲುಗಾರನು ಮಾತ್ರ ನಾನು ಖಂಡಿತವಾಗಿಯೂ ಅಲ್ಲ. ನನ್ನದೆಂತಹ ಕೃಪೆಯು ! ನಿನ್ನ ಪರಾಕ್ರಮವೇ ನಿನಗೆ ವಿಜಯವನ್ನು ಸಂಪಾದಿಸಿಕೊಟ್ಟಿರುವದು. ನೀನು ನಿಜವಾದ ಪರಾಕ್ರಮಶಾಲಿಯು, ಮಹಾರಥಿಕನು. ನಾನೇನು ಹೇಳಿಕೇಳಿ ನಿನ್ನ ಸಾರಥಿ!

ಅರ್ಜುನ:— ಬೇಡಬೇಡ, ಭಗವನ್ ಇಂತಹ ಮರ್ಮಭೇದಕವಾದ ಶಬ್ದಗಳಿಂದ ನನ್ನನ್ನು ನೋಯಿಸಬೇಡ. ದೇವಾ, ಈ ಪಾಂಡವರ ಪರಾಕ್ರಮಕ್ಕೆ ನಿನ್ನ ಕೃಪೆಯ ಬೆಂಬಲವು ಇಲ್ಲದಿದ್ದರೆ—

ಕೃಷ್ಣ:— ಅರ್ಜುನಾ, ನಾನು ನಿಶ್ಚಯವಾಗಿಯೂ ಪಾಂಡವ ಪಕ್ಷಪಾತಿಯಲ್ಲ. ಆದರೆ ಅವರ ಸತ್ಯನಿಷ್ಠೆಗೂ, ಭಾವ, ಭಕ್ತಿಗೂ ಮೆಚ್ಚಿ ಅವರ ಕಿಂಕರನಾಗಿರುವೆನು. ಈ ಕೃಷ್ಣನು ಯಾವಾಗಲೂ ನಿರ್ಮಲವಾದ ಭಕ್ತಿಯನ್ನೇ ಅಪೇಕ್ಷಿಸುವನು.

ಅರ್ಜುನ:— ದೇವಾ, ತಮ್ಮ ಮಂಗಲಕರವಾದ ವರದ ಹಸ್ತವು ಈ ಪಾಂಡವರ ಶಿರಸ್ಸಿನ ಮೇಲೆ ಚಿರಕಾಲವಿರಬಹುದಲ್ಲವೇ ?

ಕೃಷ್ಣ:— ಹುಚ್ಚಾ, ಇಂಥ ವಿಪರೀತ ಸಂಶಯುವು ನಿನ್ನ ಮನಸ್ಸಿನಲ್ಲಿ ಹೇಗೆ ಬಂತು? ಈ ನನ್ನ ಭಕ್ತವತ್ಸಲ ಹಸ್ತವು, ದುಷ್ಟರ ಸಂಹಾರಕ್ಕೋಸುಗ ಹಾಗೂ ಧರ್ಮನೀತಿಯು ಉದ್ಧಾರಕ್ಕೋಸುಗವೇ ಇರುವುದು.

ರಾಗ ಖಮಾಚ, ತಾಳ ಝಂಪಾ

ಭಕ್ತ ಪರಿಪಾಲನಾ । ಸತ್ಯ ಮಮ ಜೀವನಾ ॥ ಪಲ್ಲ ॥
ಭಕ್ತಾಪರಾಧಗಳ । ಎಣಿಸದಲೆ ಕ್ಷಮಿಸುತೇ । ಸಕಲ
ಸೌಭಾಗ್ಯದಾ । ಸೌಖ್ಯವ ನಾ ನೀಡೆ ॥ ೧ ॥

ಆದರೆ ಅರ್ಜುನಾ, ಒಮ್ಮೆಲೇ ನಿನ್ನ ಮುಖಮುದ್ರೆಯು ನಿಸ್ತೇಜವಾಯಿತು. ಮತ್ತು ನಿನ್ನ ಆನಂದವೃತ್ತಿಯು ನಾಶವಾದಂತೆ ತೋರುತ್ತಿರುವುದು! ಕಾರಣವೇನು?

ಅರ್ಜುನ:— ಅದೇನು ಕಾರಣವೋ ನನಗೂ ಹೇಳಲಿಕ್ಕೆ ಬರುವಂತಿಲ್ಲ. ಆದರೆ ಅಕಲ್ಪಿತವಾಗಿ ಮನಸ್ಸಿಗೆ ಪೆಟ್ಟು ತಗಲಿದಂತಾಗಿ ನನ್ನ ಉತ್ಸಾಹವು ಕುಗ್ಗಿ ಉದಾಸೀನತೆಯು ಹೆಚ್ಚುತ್ತ ನಡೆಯಿತೇನೋ ನಿಶ್ಚಯು. ಏನಾದರೂ ಅಘೋರ ವಿಪತ್ತು—

ರಾಗ ಮಾರವಾ ತಾಳ ತ್ರಿವಟ.

ಸಂತೋಷ ಮನ । ಚಿಂತಾತುರದೇ । ಭ್ರಾಂತವಾದು
ದ್ಯೆಯ್ಯಾ ॥ ಪಲ್ಲ ॥ ಮಿತಿ ಇಲ್ಲದ ಈ । ಅಪಶಕುನಗಳಾ ।
ಅತಿ ಸಂತಾಪದ । ಬಾಧೆಯು ಸಹಿಸೇ । ಗತಿಯು ।
ಮುಂದಕೆ । ನಾ ಕಾಣೆ ॥ ೧ ॥

ಕೃಷ್ಣ:— ಅರ್ಜುನಾ ಮನುಷ್ಯನ ಮನಸ್ಸಿನ ರಚನೆಯೇ ಹೀಗೆ ರಹಸ್ಯಪೂರ್ಣವಾಗಿದೆ. ಆನಂದವು ಮತ್ತೆ ವಿಷಾದವು ಇವುಗಳ ಭಾವೀ ಬರುವಿಕೆಯನ್ನು ಆತನ ಮನಸ್ಸು ಆತನಿಗೆ ಮುಂದಾಗಿಯೇ ಸೂಚಿಸುವುದು.

ಅರ್ಜುನ:— ಅದೊ, ನೋಡಿದಿಯಾ, ನಮ್ಮ ಬಿಡಾರವು ಸ್ಮಶಾನದಂತೆ ಹೇಗೆ ಅಲಕ್ಷಣವಾಗಿ ತೋರುತ್ತಿರುವುದು! ನನ್ನ ವಿಜಯವಾರ್ತೆಯಿಂದ ಯಾವ ಸ್ಥಳದಲ್ಲಿ ಆನಂದವೇ ಆನಂದವಾಗಿ ಹೋಗಬೇಕೋ ಆ ಸ್ಥಳದಲ್ಲಿ ಈ ಕಾಲಕ್ಕೆ ಹೀಗೆ ಸ್ಮಶಾನದಂತೆ ದುಃಖ ಸೂಚಕವಾದ ಅಸ್ವಸ್ಥತೆಯು ಪಸರಿಸಬೇಕೆ? ಬೇಡ! ಹೃದಯವನ್ನು ಭೇದಿಸುವಂತಹ ಕಠೋರ ಕಲ್ಪನೆಯನ್ನೆ ನಾನು ಸಹಿಸಲಾರೆನು. ಚಕ್ರವ್ಯೂಹ! ಅಭಿಮನ್ಯು! ನಡೆ, ಕೃಷ್ಣಾ ಈ ಸ್ಥಳದಲ್ಲಿ ನನಗೆ ಒಂದು ನಿಮಿಷವೂ ನಿಲ್ಲುವುದಕ್ಕೆ ಮನಸ್ಸಾಗುವುದಿಲ್ಲ. ಇಲ್ಲಿಲ್ಲದ ಕಲ್ಪನೆಗಳಿಂದ ನನ್ನ ಮನಸ್ಸು ವಿಷಾದಪೂರ್ಣವಾಗುತ್ತಿರುವುದು.

ಕೃಷ್ಣ:— ಎಲೋ, ಸುಮ್ಮನೆ ಹೀಗೇಕೆ ಭಯಪಟ್ಟು ಧೈರ್ಯಹೀನನಾಗುವೆ? ವೀರರ ವಜ್ರಹೃದಯವು ಎಷ್ಟು ಕಠೋರವೋ ಅಷ್ಟೇ ಕೋಮಲವು. ಮುಂಗೋಪಿಯೂ ಸಾತ್ವಿಕವೂ ಇರುವುದೆಂಬುದು ಸುಳ್ಳಲ್ಲ. ಅರ್ಜುನಾ, ಎಂತಹ ಪ್ರಸಂಗ ಬಂದರೂ ಮನುಷ್ಯನು ತನ್ನ ವಿವೇಕವೃತ್ತಿಯನ್ನು ಅತಿಕ್ರಮಿಸಿ ಹೋಗಬಾರದು. ಮನುಷ್ಯನು ಬರುವ ಸುಖದುಃಖಗಳ ಸ್ವಾಗತಕ್ಕಾಗಿ ಸಮಬುದ್ಧಿಯಿಂದ ವಿಚಾರಮಾಡಿ ಅನುಭೋಗಿಸುವುದೇ ಸಂಸಾರಕ್ಕೆ ಶ್ರೇಯಸ್ಕರವಾಗಿದೆ.

ರಾಗ ಮಿಯಾಮಲಾರ, ತಾಳ ತ್ರಿವಟ.

ಈ ಭವಸಾಗರದೇ । ಸಮಭಾವ ಮನಕೆ ಶಾಂತಿ । ಪಲ್ಲ॥
ವಿಕಾರ ಮತಿಗೆ । ವಶವಾಗಿರದೆ । ಶೋಕ ತಾಪಕೇ ।
ವ್ಯಸನ ಗೈಯ್ಯದೇ ॥ ಏಕಭಾವದೀ । ಎನ್ನ ಭಜಿಸುವವ ।
ಲೋಕದೊಳುತ್ತಮನೇ ಪಾರ್ಥಾ ॥೧॥

(ಹೋಗುವರು. ಎರಡನೆಯ ಬದಿಯಿಂದ ಉತ್ತರಾ, ಸೌದಾಮಿನಿಯರು ಬರುವರು.)

ಉತ್ತರಾ:— ಸೌದಾಮಿನಿ, ಬಿಡು ನನ್ನನ್ನು! ಮತ್ತು ನೀನು ಬಿಡಾರಕ್ಕೆ ಹೋಗು.

ಸೌದಾ:— ದೇವಿಯವರೆ, ತಾವು ಎತ್ತ ಕಡೆಗೆ ಹೋಗುವಿರಿ?

ಉತ್ತರಾ:— ಎತ್ತ ಕಡೆಗೆ? ಅಂದರೆ ನನಗೆತ್ತ ಮಾರ್ಗವು ತೋರುವುದೋ ಅತ್ತಕಡೆಗೆ ಹೋಗುವೆನು. ಸೌದಾಮಿನಿ, ಈ ಯುದ್ಧವು ಇನ್ನೂ ಮುಗಿಯಲಿಲ್ಲವೇನೆ? ಸಾಯಂಕಾಲದ ಸಮಯವು ಮೀರಿ ಕತ್ತಲೆಯಾಯಿತು. ಸ್ವಾಮಿಯು ಇನ್ನೂವರೆಗೂ ಬಿಡಾರಕ್ಕೆ ಯಾಕೆ ಬರಲಿಲ್ಲ.? ಛೀ! ಛೀ! ನಾನಾತರದ ವಿಚಾರತರಂಗಗಳು ನನ್ನ ಮನಸ್ಸನ್ನು ಭಯಪಡಿಸುತ್ತಿರುವವು.

ರಾಗ ಗಾರಾ, ತಾಳ ದಾದರಾ.

ಕಾಣದೆ ಚಾರುಪತಿಯ ಮುಖ। ಮನದಿ ನಾ ಮರು
ಗುವೆ। ಸಹಿಸೆ ವಿರಹತಾಪ॥ ಪಲ್ಲ॥ ಅನುದಿನದೇ
ತಳಮಳಿಸುವೆ। ಮತಿಯು ಭ್ರಾಂತವಾಯಿತೆ॥೧॥

ಸೌದಾ:— ದೇವಿ, ತಾವು ಬಿಡಾರದಲ್ಲಿಯೇ ಮಾರ್ಗನಿರೀಕ್ಷಣ ಮಾಡುತ್ತ ಕುಳಿತುಕೊಳ್ಳಿರಿ. ಸ್ವಾಮಿಯವರು ಇಷ್ಟರಲ್ಲಿಯೇ ದಯಮಾಡಿಸಬಹುದು. ಇಂತಹ ಅಂಧಃಕಾರದ ಸಮಯದಲ್ಲಿ ತಾವು ಸಂಚರಿಸುವುದನ್ನು ಯಾರಾದರೂ ನೋಡಿದರೆ—

ಉತ್ತರಾ:— ಸೌದಾಮಿನಿ, ಪ್ರೇಮವು ವಿವೇಕವನ್ನು ನೋಡುವುದಿಲ್ಲ. ಜಗತ್ತಿನ ಮಾನಮರ್ಯಾದೆಯನ್ನು ಲಕ್ಷಿಸುವುದಿಲ್ಲ. ಇನ್ನೂ ನಾನು ಎಲ್ಲಿಯವರೆಗೆ ಮಾರ್ಗನಿರೀಕ್ಷಣೆ ಮಾಡಲಿ? ಇಲ್ಲಿಯವರೆಗೆ ಅವರ ಮಾರ್ಗನಿರೀಕ್ಷಣೆ ಮಾಡುತ್ತ ಕುಳಿತು ವ್ಯರ್ಥವಾಗಿ ಕಾಲಹರಣ ಮಾಡಿದೆನು. ಇನ್ನು ಮೇಲೆ ನಾನು ಮರಳಿ ಬರಲಾರೆನು. ಹೀಗೇ ರಣಾಂಗಣಕ್ಕೆ ಹೋಗಿ ಸ್ವಾಮಿಯನ್ನು ಶೋಧಿಸುವೆನು.

ಸೌದಾ:— ಅಂದರೆ, ಈಗ ತಾವು ರಣಾಂಗಣಕ್ಕೆ ಹೋಗತಕ್ಕವರೆ?

ಉತ್ತರಾ:— ಹೌದು ನಿನಗೇನು. ಆಶ್ಚರ್ಯವೆನಿಸಿತು? ನಾನು ವೀರ ಕನ್ನೆಯು, ವೀರಪತ್ನಿಯು, ಪತಿಪ್ರೇಮದ ದಿವ್ಯಪ್ರಕಾಶದಿಂದ

ಮಾರ್ಗವನ್ನು ಹುಡುಕುತ್ತ ಈ ಉತ್ತರೆಯು ರಣಾಂಗಣದಲ್ಲಿ ಅಷ್ಟೇ. ಏಕೆ ಪ್ರತ್ಯಕ್ಷ ಮೃತ್ಯುವಿನ ದರ್ಬಾರದಲ್ಲಿ ಕೂಡ ಏನೂ ಭಯವಿಲ್ಲದೆ ಹೋಗಿ ಬರುವಳು.ಅಮ್ಮಯ್ಯಾ; ನಾನು ಇದನ್ನೇನು ನೋಡುವೆನು (ಭಯದಿಂದ-ಆನಂದಾಶ್ಚರ್ಯದಿಂದ) ಯಾರು ? ನಾಥ,ನಾಥ! ಸೌದಾಮಿನೀ (ಭ್ರಮಿಷ್ಟೆಯಂತೆ ಮಾಡುವಳು)

ಸೌದಾ:— (ಗಾಬರಿಯಾಗಿ) ದೇವಿಯವರೇ, ಜಾಗ್ರತರಾಗಿರಿ, ಜಾಗ್ರತರಾಗಿರಿ.

ಉತ್ತರಾ:— ಸೌದಾಮಿನೀ, ಅದೋ, ಅವೊ, ಅಲ್ಲಿ ನೋಡು, ವಿಮಾನವನ್ನು. ಆ ದಿವ್ಯವಿಮಾನದಲ್ಲಿ ಕುಳಿತು ಸ್ವಾಮಿಯು ಚಂದ್ರಲೋಕಕ್ಕೆ ಹೋಗುತ್ತಿರುವರು. ಸೌದಾಮಿನಿ, ನೋಡಿದೆಯಾ ಸ್ವಾಮಿಯು ಬ್ರಹ್ಮಾನಂದದಲ್ಲಿ ಮುಳುಗಿ ಹೋಗಿರುವರು. ನನ್ನ ಕಡೆಗೆ ನೋಡಿ ನಗುತ್ತಿರುವರು. ನಾಥಾ !

ಸೌದಾ:— (ಸ್ವಗತ) ದೇವಿಯವರಿಗೆ ನಿಶ್ಚಯವಾಗಿ ಭ್ರಮೆಯುಂಟಾಗಿರುವುದು. ಏನು ಮಾಡಬೇಕು; ಅದೇ ತಿಳಿಯದಾಗಿದೆ.

ಉತ್ತರಾ:— ಸೌದಾಮಿನಿ, ಇಲ್ಲಿ ನನ್ನೊಬ್ಬಳನ್ನೆ ಬಿಟ್ಟು ಹೋಗುವುದಕ್ಕೆ ಪ್ರಾಣನಾಥರಿಗೆ ಹೇಗೆ ಮನಸ್ಸಾಯಿತೇ ? ಅವರಿಗೆ ನನ್ನ ವಿಷಯವಾಗಿ ಸ್ವಲ್ಪಾದರೂ ದಯಹುಟ್ಟಲಿಲ್ಲವೆ ? ಅಮ್ಮಯ್ಯಾ– ಅದೋ ನೋಡು ಸ್ವಾಮಿಯು ನನ್ನನ್ನು ಸಹ ತಮ್ಮ ಕಡೆಗೇ ಕರೆಯುತ್ತಿರುವರು. ನಾಥಾ, ಇದೋ ಬಂದೆನು ! ಬಂದೆನು ! ತಾವು ಅಲ್ಲಿಯೇ ನಿಲ್ಲಿರಿ ಇಷ್ಟೇಕೆ ಅವಸರ ! ನನಗಾಗಿ ಸ್ವಲ್ಪ ತಡೆಯುವುದಿಲ್ಲವೆ ?

ರಾಗ ಖಮಾಜ ಮಾಂಡ, ತಾಳ ದಾದರಾ.

ಕರುಣಾಭರಣಾ । ಪ್ರಿಯ ಸತೀ । ದೀನಾನಾಥಾ ॥
ನೆರೆನೋಡು ನಯದೆ ॥ ಪಲ್ಲ ॥ ಪ್ರಾಣಸಖಾ ನಿನ್ನನು
ನಾ ಅಗಲಿರಲಾರೆ ॥ ಎನಗಾರು ಗತೀ ಬರುವೆನಿದೊ ।
ಸಮರ ವಿಹಾರಾ । ಭುವನೈಕ ಸುಂದರಾ ॥ ೧ ॥

ನಾಥಾ. ಹೀಗೆ ಬಿಡಾರಕ್ಕೆ ಹೋಗಿ, ಅರ್ಧವಾಗಿ ಹೆಣೆದಿಟ್ಟ ಪ್ರೇಮದ

ಹಾರವನ್ನು ಹಾಗೆಯೇ ತೆಗೆದುಕೊಂಡು ಬರುತ್ತೇನೆ. ಸ್ವರ್ಗದ ನಂದನವನದಲ್ಲಿ ನಾವು ಉಭಯತರು ಜೊತೆಯಾಗಿ ಆ ಪ್ರೇಮದ ಹಾರವನ್ನು ಪೂರ್ತಿಸೋಣ. ಛೇ, ಬೇಡ. ಆಕಾಶದಲ್ಲಿಯು ತೇಜಃ ಪುಂಜವಾದ ತಾರಾ ಕುಸುಮಗಳ ಮೋಹನಮಾಲೆಯನ್ನೇ ನಾನು ಕಮ್ಮ ಕೊರಳಲ್ಲಿ ಹಾಕುತ್ತೇನೆ. ಇದೋ, ಬಂದೆನು, ಬಂದೆನು. (ಹೋಗತೊಡಗುವಳು)

ಸೌದಾ:— (ತಡೆದು) ದೇವಿಯವರೆ, ಭ್ರಮಿಷ್ಠರಂತೆ ಹೀಗೇಕೆ ಮಾಡುವಿರಿ?

ಉತ್ತರಾ:— ಬಿಡು, ಬಿಡು. ನನಗೆ ಮಾತಾಡುವುದಕ್ಕೆ ಸಮಯವಿಲ್ಲ. ನೀನು ನಿನ್ನ ದಾರಿಹಿಡಿದು ಹೊರಟುಹೋಗು. (ಕೈ ಕೊಸರಿಕೊಂಡು ಹೋಗುತ್ತಾಳೆ).

ಸೌದಾ:— ಅಮ್ಮಯ್ಯಾ, ಇವರಂತೂ ಹೊರಟುಹೋದರು. ನಾನೂ ಇವರ ಬೆನ್ನು ಹತ್ತಲೋ, ಅಥವಾ ಯಾರನ್ನಾದರೂ ಕರೆಯಲೊ? (ವಿಚಾರಿಸಿ) ವೇಷಾಂತರಿಸಿಕೊಂಡು ಇವರ ಬೆನ್ನುಹತ್ತಿಯೇ ಹೋಗುವೆನು. ಮೊದಲು ಈ ಸಮಾಚಾರವನ್ನು ಸುಭದ್ರಾದೇವಿಯವರಿಗೆ ತಿಳಿಸೋಣ. (ಹೋಗುವಳು.)

೨ನೆಯ ಪ್ರಸಂಗ

(ಸ್ಥಳ:— ಪಾಂಡವರ ಬಿಡಾರ, ಪಾತ್ರಗಳು:— ಯುಧಿಷ್ಠಿರ ಭೀಮ ಮೊದಲಾದವರು ಖಿನ್ನ ಮುದ್ರೆಯಿಂದ ಕುಳಿತಿರುವರು.)

ಯುಧಿಷ್ಠಿರ:— (ದುಃಖದಿಂದ) ಹಾಯ್, ಹಾಯ್ ಈ ದಿವಸ ಕುಮಾರ ಅಭಿಮನ್ಯುವು ಧಾರಾತೀರ್ಥದಲ್ಲಿ ದೇಹವನ್ನು ಬಿಟ್ಟನೆಂದು ಹೇಳುವುದಕ್ಕಿಂತಲೂ ಈ ಪಾಂಡವರ ಶೌರ್ಯ-ಶಕ್ತಿಯೇ ಮಣ್ಣುಪಾಲಾಯಿತೆಂದು ಹೇಳಬಹುದು. ಮತ್ತು ಈ ಯುಧಿಷ್ಠಿರನ ಪುಣ್ಯಬಲವು ಸಂಪೂರ್ಣವಾಗಿ ಅಳಿದು ಹೋಯಿತು. ಧೈರ್ಯವು ಉತ್ಸಾಹವೂ ಅಗ್ನಿಗೆ ಆಹುತಿಯಾದವು.

ಭೀಮ:— ಅಸದಳರಾದ ಶೌರ್ಯತೇಜಸ್ಸಿನಿಂದ ಶತ್ರು ಸಮೂಹವನ್ನು

ನುಗ್ಗುಮಾಡಿ ಆ ಬಾಲಪುತ್ರನು, ಆ ಕಾಲದಲ್ಲಿ ಭೂಮಿಗೆ ಪತನ ವಾದನು. ವೀರಮರಣದ ಮಂಗಲಲೇಪವನ್ನು ಲೇಪಿಸಿಕೊಂಡು ಆ ವೀರಕುಮಾರನು ಒಳ್ಳೇ ಹಕ್ಕಿನಿಂದ ಸ್ವರ್ಗದ ಸಿಂಹಾಸನವನ್ನೇರಿ ದನು. ಈ ಭೀಮನ ಬ್ರಹ್ಮಾಂಡಶಕ್ತಿಗೆ– ಈ ದಿವಸ ಅಪಜಯದ ಕುಂದು ಹತ್ತಿತು. ಧಿಕ್ಕಾರ! ಧಿಕ್ಕಾರವಿರಲಿ!! ಈ ಭೀಮನ ಪೊಳ್ಳು ಗದೆಯ ಅಹಂಕಾರಕ್ಕೆ! ಆ ಸಿಂಹಾರ್ಭಕನು ಚಕ್ರವ್ಯೂಹವನ್ನು ಭೇದಿಸಿದನು. [ಶ್ರೀಕೃಷ್ಣ ಅರ್ಜುನರು ಬರುವರು]

ಅರ್ಜುನ:— [ಆನಂದದ ಆತುರತೆಯಿಂದ] ಏನು ಚಕ್ರವ್ಯೂಹವನ್ನು ಭೇಧಿಸಿ ದನೇ? ಯಾರು ಶೂರನಾದ ಮುದ್ದು ಅಭಿಮನ್ಯುವೇ?

ಯುಧಿ:— ಹೌದು– ಅದೇ ಸಿಂಹಾರ್ಭಕನು ಚಕ್ರವ್ಯೂಹವನ್ನು ಭೇದಿಸಿ ದನು– ಆದರೆ

ಕೃಷ್ಣ:— [ಆತುರತೆಯಿಂದ] ಆದರೆ–ಆದರೆ– ಆ ವೀರ ಕುಮಾರನ ಎಲ್ಲಿರುವನು?

ಭೀಮ:— [ಉಸುರ್ಗರೆದು] ಚಕ್ರವ್ಯೂಹವನ್ನು ಭೇದಿಸಿದನು. ಆದರೆ ಕೊನೆಗೆ ರಣಾಂಗಣದಲ್ಲಿ ಬಿದ್ದನು!

ಅರ್ಜುನ:— ದುಃಖದಿಂದ ಹಾಯ್ ದುರ್ದೈವವೆ! ಶಿರಸ್ಸಿನ ಮೇಲೆ ವಜ್ರಾಘಾತವಾಯಿತು. ಭೀಮಾ, ನೀನಿದನ್ನು ಏನು ಹೇಳುವೆ?

ಭೀಮ:— ಅರ್ಜುನಾ, ಏನು ಹೇಳಲಿ! ದುಷ್ಟಪ್ರಾರಬ್ಧವು ಹೇಳಬಾರ ದಂತಹ ಮಾತನ್ನು ಹೇಳುವಂತಹ ಪ್ರಸಂಗ ತಂದಿತು.!

ಅರ್ಜುನ:— [ಹತಾಶನಾಗಿ] ಉಶ್! ಇಂತಹ ದುರ್ವಾರ್ತೆಯನ್ನು ಕೇಳು– ವಂತಹ ಕರ್ಣಗಳು ಬಧಿರವಾಗಿದ್ದರೆ ಲೇಸಾಗುತ್ತಿತ್ತು. ದೇವಾ! ಆ ಬಾಲಸೂರ್ಯನನ್ನು ಕಾತಕೇತುವು ಮತ್ತೆ ಎಂದೂ ದೃಷ್ಟಿ ಗೋಚರವಾಗದಂತೆ ನುಂಗಿದನು! ಈ ಪಾಂಡವರು ತಮ್ಮ ಸ್ವಹಸ್ತ ದಿಂದಲೇ ತಮ್ಮ ಪರಾಕ್ರಮಕ್ಕೆ ಕಪ್ಪು ಹತ್ತಿಸಿಕೊಂಡರು.

ಶ್ರೀಕೃಷ್ಣ:— [ಸ್ಮರಣೆಯ ಸ್ವರದಲ್ಲಿ] ಫಾರ್ಥಾ, ಸ್ಥೈರಿಸು, ಸ್ಥೈರಿಸು, ಪುತ್ರ

ಶೋಕವನ್ನು ಸ್ಫುರಿಸು, ಅಖಂಡವಾಗಿ ತಿರುಗುವಂತಹ ದೈವಚಕ್ರದ ತಿರುಗಣಿಯಲ್ಲಿ ಯಾವನು ತಾನೆ ಬಿಡುಗಡೆ ಹೊಂದಿರುವನು ?

ಅರ್ಜುನ:— ನನ್ನ ಕುಮಾರ ಕುಲದೀಪಕನು ಮೃತನಾಗಲಿಲ್ಲ– ಆದರೆ ಈ ಅರ್ಜುನನ ಜೀವನ ಸರ್ವಸ್ವದ ಆಶೆಯ ನಂದಾದೀಪವು, ಕಾಲನ ಬಿರುಗಾಳಿಯಿಂದ ಶಾಂತವಾಯಿತು! ಹೇಳು, ಅಣ್ಣಾ ಧರ್ಮರಾಜಾ ಹೇಳು, ನನ್ನ ವೀರಕುಮಾರನನ್ನು ಸಮರಭೂಮಿಗೆ ಕಳುಹಿಸಿದವ ರಾರು ? ಮತ್ತು ಅವನನ್ನು ಮೃತ್ಯುವಿನ ಮುಖಕ್ಕೆ ಗುರಿ ಮಾಡಿ ದವರಾರು ?

ಯುಧಿ:— ನಾನೇ ಚಾಂಡಾಲನಾದ ನಾನೇ. ಅವನಿಗೆ ಹೋಗುವದಕ್ಕೆ ಆಜ್ಞೆಯನ್ನಿತ್ತೆನು. ವಿನಾಶಕಾಲಕ್ಕೆ ವಿಪರೀತಬುದ್ಧಿಯು ಸೂಚಿಸಿತು; ಅಲ್ಲಿದೆ ಮತ್ತೇನು ?

ಅರ್ಜುನ:— ಆದರೆ ಭೀಮಾ, ಸಮರಭೂಮಿಯಲ್ಲಿ ವೀರಕುಮಾರನ ರಕ್ಷಣ ಮಾಡುವುವುದಕ್ಕೆ–

ಭೀಮ:— ಈ ಭೀಮನು ಜೀವದ ಹಂಗುದೊರೆದು, ಆತನ ಬೆನ್ನು ಬಿಡದೆ ಧಾವಿಸುತ್ತ ನಡೆದಿದ್ದನು,

ಅರ್ಜುನ:— ನಿನ್ನಂತಹ ಕಾಲಾಂತಕನು ನನ್ನ ಮಗುವಿನ ಸಂರಕ್ಷಣೆ ಮಾಡುತ್ತಿರಲು ನನ್ನ ಅಭಿಮನ್ಯುವಿನ ಮೇಲೆ ಕಣ್ಣುತಪ್ಪಿಸಿ ಹೊಂಚು ಹಾಕಿ ತನ್ನ ಕಾರ್ಯವನ್ನು ಸಾಧಿಸಿಕೊಳ್ಳುವುದಕ್ಕೆ ಆ ಮೃತ್ಯುವಿಗೆ ಹೇಗೆ ಧೈರ್ಯವಾಯಿತು.? ಈ ಭೀಮನ ಗದೆಯು ಒಳ್ಳೇ ಸಮಯಕ್ಕೆ? ಹೊಡತ ಕೊಟ್ಟಿತು–

ಭೀಮ:— ಇಲ್ಲ ಇಲ್ಲ. ತನ್ನ ವಜ್ರಪ್ರಹಾರದಿಂದ ಭೂಮಂಡಲವನ್ನೇ ನಿರ್ಭೇದಿಸುವಂತಹ ಈ ಭೀಮನ ಪರಾಕ್ರಮಶಾಲಿ ಗದೆಯು ಅಖಂಡವಾಗಿ ವಿಜಯವನ್ನು ಸಂಪಾದಿಸಿತು. ಆದರೆ ಜಯದ್ರಥನು ವಿಶ್ವಾಸಘಾತ ಮಾಡಿದನು. ಮತ್ತು ದುರ್ದೈವವು ಸಮಯವನ್ನು ಸಾಧಿಸಿತು.

ಶ್ರೀಕೃಷ್ಣ:— ಏನು ಜಯದ್ರಥನು ವಿಶ್ವಾಸಘಾತ ಮಾಡಿದನೇ ?

ಭೀಮ:— ಅಹುದು. ಚಕ್ರವ್ಯೂಹದ ಬಾಯಿಗೆ ಆ ಕಂಟಕನು ಅಡಗಿಕೊಂಡು ಕುಳಿತಿದ್ದನು. ಪ್ರಥಮದಲ್ಲಿ ಆಚಾರ್ಯರು ಸಹಿತ ಜಯದ್ರಥನೇ ಮೊದಲಾದ ಅಸಂಖ್ಯ ವೀರರನ್ನು ಮಣ್ಣುಗೂಡಿಸುತ್ತ ವೀರಅಭಿಮನ್ಯುವು ಚಕ್ರವ್ಯೂಹವನ್ನು ಭೇದಿಸುತ್ತ ನಡೆದಿದ್ದನು. ಆ ಸಮಯದಲ್ಲಿ ಜಯದ್ರಥನು ಮೋಸಮಾಡಿ ನನಗೂ ಮತ್ತು ಅಭಿಮನ್ಯುವಿಗೂ ತಪ್ಪುಗಂಟು ಮಾಡಿ ಇತ್ತಕಡೆಗೆ ನಮ್ಮನ್ನು ಯುದ್ಧದಲ್ಲಿ ತೊಡಗಿಸಿದನು. ಅತ್ತ ಅಭಿಮನ್ಯುವು ತೀಕ್ಷ್ಣವಾದ ಬಾಣದಂತೆ ಚಕ್ರವ್ಯೂಹದಲ್ಲಿ ಹೊಕ್ಕನು. ನಮಗೂ ಅವನಿಗೂ ಮಹದಂತರವಾಯಿತು. ಎಲ್ಲವೂ ವಿಪರೀತವಾಗಿ ಕೊನೆಗೆ ದುರ್ದೈವವು ತನ್ನ ಹಟವನ್ನು ಸಾಧಿಸಿತು.

ಅರ್ಜುನ:— ಎಲಾ ನೀಚಾ, ಜಯದ್ರಥಾ, ಇಂತಹ ವಿಶ್ವಾಸಘಾತದಿಂದ ನಿನ್ನ ದುಷ್ಟತನಕ್ಕೆ ನನ್ನ ಕುಮಾರನನ್ನು ಬಲಿ ತೆಕ್ಕೊಂಡೆಯಾ? ಆದರೆ ಭೀಮಾ, ಜಯದ್ರಥನಂತಹ ಒಬ್ಬ ಕ್ಷುದ್ರ ಮರ್ಕಟನು ನಿನ್ನ ಮಾರ್ಗವನ್ನು ತಡೆದು ನಿನ್ನನ್ನು ಅಡ್ಡಗಟ್ಟಿದನೇ?

ಶ್ರೀಕೃಷ್ಣ:— ಅರ್ಜುನಾ ಜಯದ್ರಥನ ಪರಾಕ್ರಮಕ್ಕೆ ಭಗವಾನ್ ಶಂಕರನ ವರಪ್ರದಾನದ ಬೆಂಬಲವಿರುವುದಲ್ಲವೆ? ಆ ವರದಾನದ ದೈವೀಶಕ್ತಿಯ ಮುಂದೆ ಈ ಭೀಮನ ಪರಾಕ್ರಮವು ಕುಗ್ಗಿ ಹೋಯಿತು. ಇದರಲ್ಲಿ ಆಶ್ಚರ್ಯವೇನು ?

ಅರ್ಜುನ:— (ಕ್ರೋಧದಿಂದ) ಆ ನೀಚ ರಾಕ್ಷಸನಿಗೆ ಭಗವಾನ್ ಶಂಕರನ ವರದಾನವೇ ಇರಲಿ. ಆ ವರದಾನದ ದೈವೀಶಕ್ತಿಯನ್ನು ಈ ದಿವಸ ಈ ಪಾರ್ಥನು ಮಣ್ಣುಗೂಡಿಸುವನು. ನೋಡು! ನೋಡು! ನನ್ನ ಕುಮಾರ ಅಭಿಮನ್ಯುವಿನ ರಕ್ತವು, ಭೂಮಿಯಲ್ಲಿ ಇಂಗುವ ಪೂರ್ವದಲ್ಲಿಯೇ ಆ ದುಷ್ಟನ ಪಾಪೀ ರಕ್ತವನ್ನು ಅದರ ಮೇಲೆ ಸಿಂಪಡಿಸುವೆನು. ವಾತಾವರಣದಲ್ಲಿ ಹಾರಾಡುವಂತಹ ಅಣುರೇಣುಗಳಿರಾ,

ಈ ಧನುರ್ಧಾರಿ ಪಾರ್ಥನ ಪವಿತ್ರ ಪ್ರತೀಕಾರದ ಸಂದೇಶವನ್ನು ಆ ಜಯದ್ರಥನಿಗೆ ತಿಳುಹಿಸಿರಿ.

ಯುಧಿ:— ಅರ್ಜುನಾ ಶಾಂತನಾಗು, ಶಾಂತನಾಗು.

ಅರ್ಜುನ:— ಛೇ, ಇನ್ನೆಲ್ಲಿಯ ಶಾಂತತೆಯು ! ವೀರ ಕುಲಕ್ಕೆ ಕಳಂಕ ಹಚ್ಚುವಂತಹ ಆ ಉನ್ಮತ್ತ ನರಾಧಮನು ವಿಶ್ವಾಸಘಾತದಿಂದ ಕುಮಾರನ ಕೊಲೆಯನ್ನು ಮಾಡಿದ ವಾರ್ತೆಯನ್ನು ಕೇಳಿ, ಆತನ ತಂದೆಯಾದ ನಾನು, ಹಣೆಯಮೇಲೆ ಕೈಯಿಟ್ಟುಕೊಂಡು ಶೋಕ ಮಾಡುತ್ತ ಸುಮ್ಮನೇ ಕೂಡಬೇಕೇ ?

ಶ್ರೀಕೃಷ್ಣ:— ಹಾಗಾದರೆ ಈಗ ನೀನು ಏನು ಮಾಡತಕ್ಕವನು.

ಅರ್ಜುನ:— [ಶೋಕಸಂತಪ್ತನಾಗಿ] ಅಭಿಮನ್ಯುವಿನ ಪವಿತ್ರ ಆತ್ಮಕ್ಕೆ ಶಾಂತಿ ಉಂಟಾಗುವಂತೆ ಒಂದು ಘೋರ ಪ್ರತಿಜ್ಞೆಯನ್ನು ಮಾಡುವೆನು. ಶ್ರೀಕೃಷ್ಣಾ, ನಿಮ್ಮ ಪವಿತ್ರ ಚರಣಗಳ ಸಾಕ್ಷಿಯಾಗಿ, ಕುಲಪೂರ್ವಜರ ಪುಣ್ಯವನ್ನು ಸ್ಮರಿಸಿ, ನಾನು ಸತ್ಯಪ್ರತಿಜ್ಞೆ ಮಾಡುವುದೇನಂದರೆ;— ನಾಳೆ ಸೂರ್ಯನು ಅಸ್ತಾಚಲಕ್ಕೆ ಹೋಗುವ ಪೂರ್ವದಲ್ಲಿಯೇ ಆ ಉನ್ಮತ್ತ ಜಯದ್ರಥನ ರುಂಡವನ್ನು ಕತ್ತರಿಸಿ ಚಂಡಾಡುವೆನು ಇಲ್ಲವಾದರೆ—

ಶ್ರೀಕೃಷ್ಣ:— ಹಾ, ಹಾ, ಅರ್ಜುನಾ ಸ್ವಲ್ಪ ತಾಳು, ಜಯದ್ರಥನ ಸಂಹಾರಕ್ಕೆ ಏನಾದರೊಂದು ವಿಪರೀತ ಪ್ರತಿಜ್ಞೆಯನ್ನು ಮಾಡಬೇಡ. ಏಕೆಂದರೆ ಅವನಿಗೆ ಭಗವಾನ್ ಶಂಕರನ ವರದಾನವಿರುವದು. ನನ್ನ ಮಾತು ಕೇಳು.

ಅರ್ಜುನ:— ಇಲ್ಲ, ಇಲ್ಲ ನನ್ನ ಮೇಲೆ ಈ ಪಾರ್ಥನು ನಿಮ್ಮ ಶಬ್ದಗಳನ್ನು ಮನ್ನಿಸುವುದಿಲ್ಲ; ಶಂಕರನ ವರದಾನವನ್ನೂ ಲಕ್ಷಿಸುವುದಿಲ್ಲ ಈ ಗಾಂಡೀವ ಧನುರ್ಧಾರಿ ಪಾರ್ಥನು ಜಯದ್ರಥನ ಸಂಹಾರ ಮಾಡದೆ ಹಾಗೇ ಭೂಮಿಯ ಮೇಲೆ ಜೀವಿಸಲಾರನು.

ಸಂಹಾರವು ಮತ್ತು ಅದು—ನಾಳೆ ಸೂರ್ಯಾಸ್ತವಾಗುವದರೊಳಗಾಗಿಯೆ— ಇದೇ ನನ್ನ ಸತ್ಯಪ್ರತಿಜ್ಞೆಯು! ಈ ಪ್ರತಿಜ್ಞೆಗೆ ಶ್ರೀಕೃಷ್ಣಾ, ನಿಮ್ಮ ಮತ್ತು ಧರ್ಮರಾಜನ ಪುಣ್ಯಾಚರಣಗಳೇ ಸಾಕ್ಷಿ. ಈ ಪ್ರತಿಜ್ಞೆಯನ್ನು ನಾನು ಪೂರ್ಣಮಾಡದಿದ್ದರೆ ಅಗ್ನಿ ಕಾಷ್ಠಗಳನ್ನು ಸೇವಿಸಿ ಈ ದೇಹವನ್ನು ಅಗ್ನಿನಾರಾಯಣನಿಗೆ ಸಮರ್ಪಿಸುವೆನು.

ಕೃಷ್ಣ:— ಅರ್ಜುನಾ, ಸಂತಾಪದ ಭರದಲ್ಲಿ ಪ್ರತಿಜ್ಞೆಯನ್ನು ಮಾಡಿದೆ. ಆದರೆ ಹುಚ್ಚಾ, ಆ ಪ್ರತಿಜ್ಞೆಗೆ— ಅಗ್ನಿ ಕಾಷ್ಠ ಭಕ್ಷಣದ ಈ ಶುಷ್ಕ ಕಾಷ್ಟವನ್ನೇಕೆ ಬೆನ್ನಿಗೆ ಹಚ್ಚಿಕೊಂಡೆ?

ಅರ್ಜುನ:— ಏಕೆ? ಇನ್ನೂ ಪಾಂಡವರ ಪುಣ್ಯಕ್ಕೇನು ಒಡತನ ಬಂದಿಲ್ಲ.

ಭೀಮ:— ಈ ಭೀಮನ ಪರಾಕ್ರಮ ಶಾಲಿಯಾದ ಗದೆಯು ಇನ್ನೂ ಸನ್ಯಾಸವನ್ನು ಸ್ವೀಕರಿಸಿಲ್ಲ.

ಅರ್ಜುನ:— ಅರ್ಜುನನ ಈ ಗಾಂಡೀವ ಧನುಷ್ಯವು ಮುರಿದುಹೋಗಿಲ್ಲ.

ಕೃಷ್ಣ:— ಅಲ್ಲದೆ ನಮ್ಮ ಸುದರ್ಶನ ಚಕ್ರವಂತೂ ಕೊನೆಗೆ ನಿಮ್ಮ ಸಹಾಯಕ್ಕೋಸುಗ ಸಿದ್ಧವಾಗಿಯೇ ಇದೆ.

ಅರ್ಜುನ:— ಪಾಂಡವರ ರಕ್ಷಣಕ್ಕೋಸುಗ ಶ್ರೀಕೃಷ್ಣನ ಮತ್ತು ಆತನ ಸುದರ್ಶನ ಚಕ್ರದ ಸಹಾಯವಂತೂ ನಮಗೆ ಇದ್ದೇ ಇರುವುದು. ಆದರೆ ಈ ಪಾರ್ಥನ ಕೈಯಲ್ಲಿಯ ಈ ಪರಾಕ್ರಮಿಯಾದ ಗಾಂಡೀವ ಧನುಷ್ಯವು— ಈ ಪ್ರತಿಜ್ಞೆಯನ್ನು ಪೂರ್ಣಗೊಳಿಸಲಿಕ್ಕೆ ಸಾಕಾಗಿದೆ. (ಗಾಂಡೀವ ಧನುಷ್ಯದ ಠಣತ್ಕಾರ ಮಾಡುತ್ತಾನೆ.) ಬರೀ ಠಣತ್ಕಾರದ ಗಂಭೀರ ಗರ್ಜನೆಯಿಂದಲೇ ಬ್ರಹ್ಮಾಂಡವನ್ನು ಭಯಪಡಿಸುವಂತಹ ಸಾಮರ್ಥ್ಯವು ಈ ಧನಂಜಯನ ಧನುಷ್ಯದಲ್ಲಿ ಇಲ್ಲವೇನು? (ತೆರೆಯಲ್ಲಿ:— ಇಲ್ಲ ಇಲ್ಲ, ಖಂಡಿತವಾಗಿಯೂ ಇಲ್ಲ.) ಯಾರು? ಸುಭದ್ರಾ ಪುತ್ರಶೋಕ ಪ್ರತ್ಯಕ್ಷ ಪ್ರತಿಮೆಯೇ ಬಂದಳು.

ಕೃಷ್ಣ:— ಸರಿ. ಇನ್ನು ಮೇಲೆ ಶೋಖದ ಪರಮಾವಧಿಯು ಶಿಖರಕ್ಕೆ ಮುಟ್ಟುವುದು.

ಯುಧಿ— ದೇವಾ, ಸುಭದ್ರಾದೇವಿಗೆ ಈ ಕಷ್ಟಾದ ಮುಖವನ್ನು ಹೇಗೆ ತೋರಿಸಲಿ ?

ಕೃಷ:— ಧರ್ಮರಾಜಾ ನೀನು ವಿವೇಕಶಾಲಿಯು; ಶಾಂತಶೀಲನು. ನೀನೇ ಹೀಗೆ ಶೋಕಮಾಡುತ್ತ ಕುಳಿತರೆ ಸುಭದ್ರೆಯ ಸಮಾಧಾನ ಮಾಡತಕ್ಕವರಾರು ?

ಸುಭದ್ರಾ:— (ಪ್ರವೇಶಿಸಿ, ಶೋಕಸಂತಾಪದಿಂದ) ಇಲ್ಲ ಇಲ್ಲ,ಖಂಡಿತವಾಗಿಯೂ ಇಲ್ಲ. ನಿಮ್ಮ ಪರಾಕ್ರಮದ ಪೊಳ್ಳು ಅಹಂಕಾರವು ಸರ್ವ ಜಗತ್ತಿಗೆ ತಿಳಿದುಹೋಯಿತು. ನಿಮ್ಮ ಧನುಷ್ಯದಲ್ಲಿ ಸಾಮರ್ಥ್ಯವಿರುತ್ತಿದ್ದರೆ ನನ್ನ ಮುದ್ದು ಕುಮಾರನು ಮೃತ್ಯುಮುಖಕ್ಕೆ ಗುರಿಯಾಗುತ್ತಿದ್ದನೆ! ನನ್ನ ಅಭಿಮನ್ಯುವು ರಣಾಂಗಣದಲ್ಲಿ ಬಿದ್ದನು. ನನ್ನ ಬೆಲೆಯುಳ್ಳ ಮಾಣಿಕವನ್ನು ಕಾಲನು ಗ್ರಾಹಿಸಿದನು. ಭೀಮ ಭಾವನವರೆ, ತಾವು ನನ್ನ ಬಾಲಕನ ಸಂರಕ್ಷಣಕ್ಕೋಸುಗ ಆತನ ಬೆನ್ನು ಹತ್ತಿ ಹೋದವರಲ್ಲವೆ ?— ಹಾಗಾದರೆ, ಹೇಳಿರಿ ಹೇಳಿರಿ, ನನ್ನ ಕುಮಾರ ಕಂಠೀರವನು ಎಲ್ಲಿರುವನು. ಹೇಳಿರಿ. ಮಾತಾಡಿರಿ, ಧರ್ಮರಾಜರೇ ಮಾತಾಡಿರಿ, ನನ್ನ ಅಭಿಮನ್ಯುವು ಎಲ್ಲಿರುವನು ? ಅವನನ್ನು ಕರೆದುಕೊಂಡು ಹೋಗಿ ಒಬ್ಬನನ್ನೇ ಎಲ್ಲಿ ಬಿಟ್ಟು ಬಂದಿರಿ? ಏಕೆ. ಮಾತಾಡುವುದಿಲ್ಲ ? ನೀವೇ, ನೀವೇ ನನ್ನ ಮುದ್ದುಕುಮಾರನ ಮರಣಕ್ಕೆ ಕಾರಿಣೀಭೂತರಾದಿರಿ. ತಾಯಿ ಮಕ್ಕಳನ್ನು ಅಗಲಿಸಿದಿರಿ. ಏಕೆ? ಈಗೇಕೆ ಮಾತಾಡುವುದಿಲ್ಲ ? ನನ್ನ ಕುಮಾರನನ್ನು ನನಗೆ ಬೇಗನೇ ತಂದು ತೋರಿಸಿರಿ. ಇಲ್ಲವಾದರೆ, ನಾನು ಇಲ್ಲಿಯೇ ನನ್ನ ತಲೆಯನ್ನು ಅಪ್ಪಳಿಸಿ–ಪ್ರಾಣವನ್ನು ಬಿಡುವೆನು.

ಕೃಷ್ಣ:— ತಂಗೀ ಸುಭದ್ರೆ, ಶೋಕವನ್ನು ಸೈರಿಸು. ವಿವೇಕದಿಂದ ವಿಚಾರ

ಮಾಡು; ಸಂತಾಪದಿಂದ ನಿನಗೆ ಹುಚ್ಚು ಹಿಡಿಯಿತೋ ಹೇಗೆ? ಸಂಸಾರದಲ್ಲಿರತಕ್ಕ ಪ್ರಾಣಿಗಳಿಗೆ ಇಂತಹ ಪ್ರಸಂಗವು ಸಂಭವಿಸುವದು ಸ್ವಾಭಾವಿಕವೆ! ಕ್ಷತ್ರಿಯ ಕನ್ನೆಯೂ ವೀರ ಮಾತೆಯೂ ಶ್ರೀಕೃಷ್ಣನ ಭಗಿನಿಯೂ ಆದ ನೀನು ಹೀಗೆ ಶೋಕ ಮಾಡುವದು ಭೂಷಣವಲ್ಲ.

ರಾಗ ಖಮಾಚ, ತಾಳ ತ್ರಿವಟ

ಸೈರಿಸು ಪ್ರಲಾಪವಾ । ಸುನೀತೆ ॥ ಪಲ್ಲ ॥ ವೀರಾಂಗನೆ
ತವ । ಪುತ್ರಶೋಕ ಸಾಕು ನಿಲಿಸು ॥ ತರವೆ ನಿನಗೆ
ಸುಗುಣಮಣಿಯೇ ॥ ಅನುಪಲ್ಲ ॥ ವೀರಮಾತೆಯೇ ।
ಬಿಡು ನೀ ಮೋಹಾ ॥ ವೀರರ ಮರಣಕೆ ಶೋಕ ಮಾಡುವರೆ ॥೧॥

ಸುಭದ್ರಾ:— ಕೃಷ್ಣಾ! ಶೋಕವನ್ನು ಹೇಗೆ ತಡೆಯಲಿ? ಈ ಸುಭದ್ರೆಯ ತಲೆಯಮೇಲೆ ಬ್ರಹ್ಮಾಂಡದ ಗೋಲವೆ ಉರುಳಿ ಬಿತ್ತು. ಅವಳ ಆಶೆಯ ಆಧಾರಸ್ತಂಭವು ಬುಡಸಹಿತವಾಗಿ ಕಳಚಿಬಿತ್ತು. ಅಭಿಮನ್ಯುವೇ! ಅಭಿಮನ್ಯುವೇ! (ಮೂರ್ಛಿತಳಾಗುವಳು)

ಕೃಷ್ಣ:— ತಂಗಿ ಸುಭದ್ರೆ, ಜಾಗೃತೆಯಾಗು. ಜಾಗೃತೆಯಾಗು!

ಯುಧಿ:— ಮಾಯಾಳುವಾದ ಮಾತೆಯು ಪುತ್ರಶೋಕದ ಆಘಾತದಿಂದ ಪಾಷಾಣವು ಸಹ ಕರಗಿ ನೀರಾಗುವದು. ಸುಭದ್ರಾದೇವಿ, ನಿನ್ನ ಪುತ್ರಶೋಕಕ್ಕೆ ನಾನೇ ಕಾರಣೀಭೂತನಾದೆನು. ನನ್ನ ಅಪರಾಧವನ್ನು ಕ್ಷಮಿಸು!

ಸುಭದ್ರಾ:—ನೀವೆ ಈ ಪ್ರಸಂಗದಲ್ಲಿ ನನ್ನನ್ನು ಕ್ಷಮಿಸಿರಿ. ಪುತ್ರಶೋಕದ ಸಂತಾಪದಲ್ಲಿ ವಿಚಾರಶೂನ್ಯಳಾಗಿ ನಾನು ನಿಮಗೆ ಕೆಟ್ಟ ಮಾತುಗಳನ್ನಾಡಿ ತಮ್ಮ ಮನಸ್ಸನ್ನು ನೋಯಿಸಿದೆನು. ಕೃಷ್ಣಾ, ಪುತ್ರಶೋಕವನ್ನು ಹೇಗೆ ಸೈರಿಸಲಿ! ಪ್ರೇಮ ಪಾಶವನ್ನು ಹೇಗೆ ಹರಿದು ಬಿಸಾಕಲಿ? ನನ್ನ ಅಭಿಮನ್ಯುವಿನ ಮರಣದಿಂದ ನನಗೆ ದಶದಿಕ್ಕುಗಳು ಶೂನ್ಯವಾದವು.

ಕೃಷ್ಣ:—ಭಗಿನೀ, ಕುಮಾರ ಅಭಿಮನ್ಯುವು ನಮ್ಮನ್ನು ತೊಲಗಿ ಹೋದನು. ಆದರೆ ಅವನು ಯಾರಿಗೂ ದೊರೆಯದಂತಹ ಯಶಸ್ಸನ್ನು ಸಂಪಾದಿಸಿ ಸ್ವರ್ಗಸೋಪಾನವನ್ನೇರಿದನು. ಮರಣವನ್ನು ಕಾಲಿನಿಂದ ಒದ್ದು ಅವನು ಚಿರಂಜೀವಿಯಾದನು. ನಿನಗೆ ವೀರವಾತೆಯ ಪುಣ್ಯಪದವಿಯನ್ನು ಸಂಪಾದಿಸಿಕೊಟ್ಟು ಆ ಕುಲದೀಪಕನು ಅಜರಾಮರನಾದನು. ಸುಭದ್ರೆ, ನೀನು ಧನ್ಯಳು, ಧನ್ಯಳು. ಇಂತಹ ವೀರ ಕುಮಾರನ ಮಾತೆಯಾಗುವ ಭಾಗ್ಯವು ಲಭಿಸಿತು. ನಿನ್ನ ಜನ್ಮವು ಸಾರ್ಥಕವಾಯಿತು. ಆದರೆ ಹುಚ್ಚೀ, ನೀನೆ ಹೀಗೆ ಶೋಕಮಾಡುತ್ತ ಕುಳಿತರೆ, ಪಾಪ ಆ ಉತ್ತರೆಯ ಸಮಾಧಾನ ಮಾಡತಕ್ಕವರಾರು? ಅವಳಿಗೆ ಧೈರ್ಯ ಹೇಳತಕ್ಕವರಾರು? ಆ ದೀನ ಬಾಲೆಯ ಶಿರಸ್ಸಿನ ಮೇಲೆ ಅಕಾಲದಲ್ಲಿಯೇ ವೈಧವ್ಯದ ವಜ್ರಾಘಾತವು ತಗಲಿತು. ಈ ದುಷ್ಟ ಅಮಂಗಲ ವಾರ್ತೆಯನ್ನು ಕೇಳಿ, ಅವಳ ಮನಸ್ಸಿನ ಸ್ಥಿತಿಯು ಏನಾಗುವದೆಂಬುದರ ಕಲ್ಪನೆಯೇನಾದರೂ ನಿನಗಿರುವದೆ?

ಸುಭದ್ರಾ:— ಅವಳ ದಾರುಣವಾದ ಆಕ್ರೋಶದಿಂದ ಬ್ರಹ್ಮಾಂಡದ ಕಿವಿಗಳು ಕೂಡಾ ಮಂದವಾಗಿ ಹೋಗುವವು.

ಕೃಷ್ಣ:— ಅಂದಮೇಲೆ-ಅವಳ ಸಮಾಧಾನವನ್ನು ಮೊದಲು ಮಾಡಬೇಕಲ್ಲವೆ? ಇಲ್ಲವಾದರೆ ಭಯಂಕರ ಅನರ್ಥವು !

ಸೌದಾಮಿನಿ:— (ಪ್ರವೇಶಿಸಿ) ದೇವಿಯವರೆ, ಅನರ್ಥವು ! ಅನರ್ಥವು ! ಭಯಂಕರವಾದ ಅನರ್ಥವು !

ಸುಭದ್ರಾ:— ಏನೇ? ಏನಾಯಿತು? ಉತ್ತರೆಯು ಎಲ್ಲಿರುವಳು?

ಸೌದಾಮಿನಿ:— ಅವರು ಆಗಲೆ ಬಿಡಾರದಿಂದ ಹೊರಗೆ ಹೋದರು. ಆದರೆ ತಾವೆ ಅತ್ತಕಡೆಗೆ ನಡೆಯಿರಿ—ಎಲ್ಲವನ್ನೂ ಹೇಳುತ್ತೇನೆ.

ಕೃಷ್ಣ:— ಸುಭದ್ರೆ, ಹೋಗು ಹೋಗು. ಬೇಗನೆ ಹೋಗು. ಕಠಿಣ ಪ್ರಸಂಗವು ಬರಬಾರದಿತ್ತು, ಬಂದನಂತರ ಅದಕ್ಕೆ ಎದೆಗೊಟ್ಟು ನಿಲ್ಲದವಿನಹ ಗತ್ಯಂತರವಿಲ್ಲ. (ಸುಭದ್ರಾ, ಸೌದಾಮಿನಿ ಹೋಗುವರು.) ಅರ್ಜುನಾ ಭೀಮಾ, ನೀವೂ ನಡೆಯಿರಿ. ಇದು ಶೋಕ ಮಾಡುತ್ತ ಕೂಡುವ ಸಮಯವಲ್ಲ.

ಭೀಮ:— ಇದೋ ನೋಡು! ಅಶ್ರುಗಳನ್ನು ಒರಸಿದೆನು. ಈ ಶೋಕದಿಂದ ಪ್ರಜ್ವಲಿತವಾದ ಅಗ್ನಿಯನ್ನು ಅಸ್ತ್ರಧಾರೆಯಿಂದ ಅಲ್ಲ—ಶತೃಗಳ ರಕ್ತದಿಂದ ಈ ಭೀಮಸೇನನು ನೊಂದಿಸಿ ಬಿಡುವನು. ಈ ಗದೆಯು ಒಂದೇ ಪ್ರಹಾರದಿಂದ ಯಾವತ್ತೂ ಕೌರವರಿಗೆ ನರಕದ ಮಾರ್ಗವನ್ನೆ ತೋರಿಸುವೆನು.

ಅರ್ಜುನ:— ನಾಳಿನ ದಿವಸ ಅಸ್ತಾಚಲಕ್ಕೆ ಹೋಗುವ ಸೂರ್ಯನ ಕಿರಣಗಳಿರಾ! ನೀವೆ ಜಯದ್ರಥನ ವಧಕ್ಕೆ ಸಾಕ್ಷಿದಾರರಾಗಿ ನನ್ನ ಅಭಿಮನ್ಯುವಿನ ಭಯಂಕರ ಪ್ರತಿಕಾರದ ಆನಂದವಾರ್ತೆಯನ್ನು ಸ್ವರ್ಗಕ್ಕೆ ಹೋಗಿ ತಿಳಿಸಿರಿ! ದುರಾತ್ಮಾ, ಜಯದ್ರಥಾ ಇನ್ನುಮೇಲೆ ಎಲ್ಲಿ ಪಾರಾಗಿ ಹೋಗುವೆ? ಇದೋ ನೋಡು, ನಿನ್ನ ಮೂರ್ತಿಮಂತ ಕಾಲನು ನಿನ್ನನ್ನು ಗ್ರಾಸಿಸುವದಕ್ಕೋಸ್ಕರ ಪ್ರತಿಜ್ಞೆಯನ್ನು ಮಾಡಿ ನಿನ್ನ ಬೆನ್ನು ಹತ್ತಿರುವನು.

ಕೃಷ್ಣ:— ಎಲ. ಎಲಾ! ಪುತ್ರನ ಮರಣದ ವಿಷಯವಾಗಿ ಸೇಡು ತೀರಿಸುವ ಪ್ರಸಂಗವು ತಂದೆಗೆ ಬರಬೇಕೆ? ಕುಟಿಲ ಕಾಲದ ದುರ್ವಿಲಾಸದ ಅಘಟಿತ ಪ್ರಸಂಗವು ಇದಕ್ಕಿಂತಲೂ ಮತ್ತಾವುದು!

ರಾಗ ಶುದ್ಧ ಕೇದಾರ, ತಾಳ ರೂಪಕ

ಕುಟಿಲ ಗತಿಯ ಪರಮಾಶ್ಚರ್ಯ ಗಮನ ಲೀಲೆಯಾ ಪರಿ
ಯಾ ॥ಪಲ್ಲ॥ ಕಠಿಣ ಕರ್ಮ ಘಟನೆಯಾ। ಅರಿಯರಾರು
ನಾ ಕಾಣೆ ॥ಅನುಪಲ್ಲ॥ ಸತಿಸುತಮೋಹಾತುರದೆ।
ಪತಿತನಾಗಿ ಪರಗತಿಯಾ। ಪಥವಗಾಣದೇ ಇರುವಾ।
ಅತಿ ಬಳಲುವ ಪಾಮರಾ ॥೧॥

೩ ನೆಯ ಪ್ರವೇಶ

(ವನ ಪ್ರದೇಶ. ಘೋಷನಾದನು ಖಡ್ಗವನ್ನು ತಕ್ಕೊಂಡು ಗಾಬರಿಯಾಗಿ ಪ್ರವೇಶಿಸುವನು.)

ಘೋಷ:— ಯುದ್ಧಕ್ಕೆ ಹೋಗುವದಕ್ಕೋಸ್ಕರ ನಮ್ಮ ಹೆಂಡತಿಯು ನಮಗೆ ಅಜ್ಞೆಯನ್ನು ಮಾಡಿದಳು. ಆದರೆ ಅಲ್ಲಿಗೆ ಹೋಗಿ ನಾವು

ಬಂದಿರಬಹುದೋ ? ಪಾಪ ಬಡಪ್ರಾಣಿಯು ನಾನು ಸತ್ತಿರುವೆನೆಂದು ಕಾತರೆಯಾಗಿ ಶೋಕಿಸುವಂತೆ ಕಾಣುವದು. ಸರಿ. ಸರಿ ಈ ಸಂಕ್ರಾಂತಿಯು ನಮ್ಮ ಮೇಲೆ ಬಂದಿತು. ಇನ್ನುಮೇಲೆ ನಾನಾದರೂ ಸತ್ತವನಂತೆ ನಟನೆಯನ್ನು ತೋರಿಸುತ್ತ ಚಮತ್ಕಾರವನ್ನು ಮಾಡೋಣ.

ಉತ್ತರಾ:—ನಾಥಾ, ನಿಮ್ಮ ಮನೋಹರ ಮೂರ್ತಿಯನ್ನು ಎಲ್ಲಿ ಕಾಣಲಿ? ನಿಮಗೋಸ್ಕರ ಈ ರಣಾಂಗಣವನ್ನೆಲ್ಲ ಸುತ್ತುಹಾಕಿದೆನು.

ಮೋಘ:— (ಸ್ವ) ಆದರೆ ಇತ್ತ ಕಡೆಗೇತಕ್ಕೆ ಬಂದೆ ನಮ್ಮ ಹತ್ತರ ಸುಮ್ಮನೆ?

ಉತ್ತರಾ:— ನಾಥಾ, ನಿಮ್ಮ ಮನೋಹರ ಮೂರ್ತಿಯನ್ನು ಎಲ್ಲಿ ಕಾಣಲಿ? ಭ್ರಮಿಷ್ಟಳಾಗಿ ಎಲ್ಲಿಯವರೆಗೆ ಹೀಗೆ ತಿರುಗಲಿ ? (ನೋಡಿ) ಅಮ್ಮಯ್ಯಾ ಯಾರು ? ಯಾರದು ?

ಮೋಘ:—(ಸ್ವ) ಜೀವವಿದ್ದು ಸತ್ತವನಂತೆ ಇರುವ ಮಹಾವೀರನು.

ಉತ್ತರಾ:—ಮಾತಾಡುವದಿಲ್ಲವೇಕೆ?

ಮೋಘ:— ಸತ್ತಂತವ ಮನುಷ್ಯನು ಹೇಗೆ ಮಾತಾಡುವನು ? (ಸ್ವ) ಆದರೆ ಇವಳು ನಮ್ಮವಳಲ್ಲ. ಯಾವಳಾದರು ಎರಡನೆ ಸ್ತ್ರೀಯಳು. ಅಂದ ಮೇಲೆ ಚಮತ್ಕಾರ ಮಾಡುವದಕ್ಕೇನು ಸಾಧ್ಯವಿಲ್ಲ. ಇನ್ನುಮೇಲೆ ಇಲ್ಲಿಂದ ಮೆಲ್ಲನೆ ಓಡಿ ಹೋಗೋಣ. ಇಲ್ಲವಾದರೆ ಪ್ರಸಂಗವು ಮೈಮೇಲೆ ಬಂದೀತು. (ಮೆಲ್ಲನೆ ಹೋಗಹತ್ತುವನು)

ಉತ್ತರಾ:— ತಡೆಯಿರಿ ! ತಡೆಯಿರಿ ! ಯಾರು ನೀವು ?

ಮೋಘ:— (ಭಯದಿಂದ) ಅಯ್ಯೋ ವಿಧಿಯೆ-ಭೂತವು-ಭೂತವು. ಸತ್ತೆನು, ಸತ್ತೆನು. ನನ್ನನ್ನು ಯಾರಾದರು ರಕ್ಷಿಸಿರಿ.

ಉತ್ತರಾ:— ಭಯಪಡಬೇಡಿರಿ, ಯಾರು ನೀವು, ಭಯಪಟ್ಟಿರಾ?

ಮೋಘ:— ಹಾ-ಹಾ-ಹಾಗೇನು ಭಯಪಟ್ಟಿಲ್ಲಾ—ನಾನೊಬ್ಬ ಯುದ್ಧದೊಳಗಿಂದ ಓಡಿಬಂದ ಮಹಾವೀರನು. ನಾನು ರಣಾಂಗಣದಲ್ಲಿ ಒಬ್ಬನ ಶಿರಸ್ಸನ್ನಾದರೂ ಹಾರಿಸದಿದ್ದರೂ ಒಳ್ಳೆ ಚಾತುರ್ಯದಿಂದ

ಮಾಡುವ ಕರ್ತವ್ಯವೇನು? ಇದನ್ನೇನು ಆ ಅಟವಿಯು ಸೂಚಿಸಲಿಲ್ಲ. ಕೈಯಲ್ಲಿ ಕತ್ತಿಯನ್ನು ಹೇಗೆ ಹಿಡಿಯಬೇಕೆಂಬ ವಿಷಯವು ನನಗೆ ಏಕೆ—ನಮ್ಮ ಪೂರ್ವಶಿರೋಮಣಿಗಳಾದ ತೀರ್ಥರೂಪರಿಗೂ ಕೂಡ ಗೊತ್ತಿರಲಿಲ್ಲ. ತಂದೆಯಂತೆ ಮಗನು. ಆದರೆ ದೈವದ ಗತಿಯೇ ವಿಪರೀತವು. ಯುದ್ಧವು ಪ್ರಾರಂಭವಾದ ಕೂಡಲೆ ಆ ಕಂದಕದಲ್ಲಿ ತಲೆ ಬಗ್ಗಿಸಿ ಅಡಗಿಕೊಂಡು ಕುಳಿತವನು ಯುದ್ಧವು ಸಮಾಪ್ತವಾದ ಸೂಚನೆಯು ಗೊತ್ತಾದ ಕೂಡಲೆ ಇದೊ ಹೊರಗೆ ಬಂದೆನು. ಅತ್ತ ಕಡೆಗೆ ಕಂದಕದಲ್ಲಿ ನಾನು ನನ್ನ ದೈವಗತಿಯನ್ನು ಕುರಿತು ಅಳುತ್ತ ಕುಳಿತಿದ್ದೆನು. ಇತ್ತ ಕಡೆಗೆ ಈ ಮಲ್ಲವೀರರು ಯುದ್ಧ ಮಾಡುತ್ತಿದ್ದರು. ಸುಮ್ಮನೆ ಸಾಯುವದಕ್ಕೆ ಏಕೆ ಯುದ್ಧ ಮಾಡುತ್ತಾರೋ ಯಾರಿಗೆ ಗೊತ್ತು! ಆದರೆ ನನ್ನ ದೈವವು ತನ್ನ ಕಾರ್ಯವನ್ನು ಸಾಧಿಸಿತು; ಅಲ್ಲಲ್ಲಿಯೇ ನಿಂತುಕೊಂಡಿದ್ದ ರಕ್ತದ ಕುಣಿಯಲ್ಲಿ ಸ್ವಲ್ಪ ತಪ್ಪಿ ನನ್ನ ಕಾಲು ಜಾರಿಬಿದ್ದು, ಈ ರಕ್ತದ ರಂಗಪಂಚಮಿಯ ಗುರುತು ನಮ್ಮ ಮೇಲೆ ಸ್ಪಷ್ಟವಾಗಿ ಕಾಣಿಸಹತ್ತಿತು. ನಮ್ಮ ಪರಾಕ್ರಮವು ನೋಡಿದರೆ ಶೂನ್ಯ! ಗುರುತು ನೋಡಿದರೆ ಮಹಾ ಬಿಂಕ! ಇನ್ನು ಮೇಲೆ ಈ ಮೇಘನಾದನಿಗೆ ಶೂರನಲ್ಲವೆಂದು ಅನ್ನುವ ಧೈರ್ಯವು ಯಾವನದಿರುವದು. ಆದರೆ ಈ ಕಾಲು ಸಪ್ಪಳವು ಯಾರದು? ಸತ್ತಂತಹ ಶಿಪಾಯಿಗಳ ಭೂತಗಳು ಈ ಅಂಧಃಕಾರದಲ್ಲಿ ಸಂಚರಿಸುತ್ತ ಬರುವವೋ? ಅಥವಾ ಜೀವಂತವಾಗಿದ್ದ ನಾನೇ ಪ್ರೇತನಾದೆನೋ? ಅಲ್ಲದೆ ಈ ರಣದಲ್ಲಿಯ ಪ್ರೇತಗಳೇ ಜೀವಂತವಾದವೋ— ಹೇಗೆ ತಿಳಿಯಬೇಕು. ಛೆ— ಛೆ- ಪ್ರೇತಕ್ಕೆ ಜೀವ ಬರುವದೆಂದರೇನು— ತೀರ ಅಶಕ್ಯ. (ಅತ್ತಿತ್ತ ತಿರುಗಾಡುವನು. ಪರದೆಯಲ್ಲಿ ನಾಥಾ ನಾಥಾ ನಿಮ್ಮನ್ನು ಎಲ್ಲಿ ಹುಡುಕಲಿ.) ಅಯ್ಯೋ ವಿಧಿಯೇ, ಇದು ಸತ್ತಂತಹ ಪ್ರೇತವಲ್ಲ-ಜೀವಂತ ಪ್ರೇತವಿದೆ. ಆದರೆ ಸಂಪೂರ್ಣ ಪ್ರೇತವೋ ಅಥವಾ ಮುಂಡವಿಲ್ಲದ್ದೋ ಇದು ಕತ್ತಲಲ್ಲಿ ಚನ್ನಾಗಿ ಕಾಣುವದಿಲ್ಲ. (ಪರದೆಯಲ್ಲಿ ಪೂರ್ವೋಕ್ತ) ಇದು ಸ್ತ್ರೀ ಧ್ವನಿಯಂತೆ ಕೇಳುತ್ತದೆ. ಪಿಶಾಚಿನಿಯೋ ಅಥವಾ ಯಾವಳಾದರೂ ಡಾಕಿನಿಯೋ, ಅಲ್ಲದೆ ನನ್ನನ್ನು ಶೋಧಿಸುತ್ತ ನನ್ನ ಪ್ರಿಯಳೆ

ಬಂದಿರಬಹುದೋ ? ಪಾಪ ಜಡಪ್ರಾಣಿಯು ನಾನು ಸತ್ತಿರುವೆನೆಂದು ಕಾತರೆಯಾಗಿ ಶೋಕಿಸುವಂತೆ ಕಾಣುವದು. ಸರಿ. ಸರಿ ಈ ಸಂಕ್ರಾಂತಿಯು ನಮ್ಮ ಮೇಲೆ ಬಂದಿತು. ಇನ್ನುಮೇಲೆ ನಾನಾದರೂ ಸತ್ತವನಂತೆ ನಟನೆಯನ್ನು ತೋರಿಸುತ್ತ ಚಮತ್ಕಾರವನ್ನು ಮಾಡೋಣ.

ಉತ್ತರಾ:—ನಾಥಾ, ನಿಮ್ಮ ಮನೋಹರ ಮೂರ್ತಿಯನ್ನು ಎಲ್ಲಿ ಕಾಣಲಿ? ನಿಮಗೋಸ್ಕರ ಈ ರಣಾಂಗಣವನ್ನೆಲ್ಲ ಸುತ್ತುಹಾಕಿದೆನು.

ಮೋಘ:— (ಸ್ವ) ಆದರೆ ಇತ್ತ ಕಡೆಗೇತಕ್ಕೆ ಬಂದೆ ನಮ್ಮ ಹತ್ತಿರ ನುಮ್ಮನೆ?

ಉತ್ತರಾ:— ನಾಥಾ,ನಿಮ್ಮ ಮನೋಹರ ಮೂರ್ತಿಯನ್ನು ಎಲ್ಲಿ ಕಾಣಲಿ? ಭ್ರಮಿಷ್ಟಳಾಗಿ ಎಲ್ಲಿಯವರೆಗೆ ಹೀಗೆ ತಿರುಗಲಿ ? (ನೋಡಿ) ಅಮ್ಮಯ್ಯಾ ಯಾರು ? ಯಾರದು ?

ಮೋಘ:—(ಸ್ವ) ಜೀವವಿದ್ದು ಸತ್ತವನಂತೆ ಇರುವ ಮಹಾವೀರನು.

ಉತ್ತರಾ:—ಮಾತಾಡುವದಿಲ್ಲವೇಕೆ?

ಮೋಘ:— ಸತ್ತಂತಹ ಮನುಷ್ಯನು ಹೇಗೆ ಮಾತಾಡುವನು ? (ಸ್ವ) ಆದರೆ ಇವಳು ನಮ್ಮವಳಲ್ಲ. ಯಾವಳಾದರು ಎರಡನೆ ಸ್ತ್ರೀಯಳು. ಅಂದ ಮೇಲೆ ಚಮತ್ಕಾರ ಮಾಡುವದಕ್ಕೇನು ಸಾಧ್ಯವಿಲ್ಲ. ಇನ್ನುಮೇಲೆ ಇಲ್ಲಿಂದ ಮೆಲ್ಲನೆ ಓಡಿ ಹೋಗೋಣ. ಇಲ್ಲವಾದರೆ ಪ್ರಸಂಗವು ಮೈಮೇಲೆ ಬಂದೀತು. (ಮೆಲ್ಲನೆ ಹೋಗಹತ್ತುವನು)

ಉತ್ತರಾ:— ತಡೆಯಿರಿ ! ತಡೆಯಿರಿ ! ಯಾರು ನೀವು ?

ಮೋಘ:— (ಭಯದಿಂದ) ಅಯ್ಯೋ ವಿಧಿಯೆ-ಭೂತವು-ಭೂತವು. ಸತ್ತೆನು, ಸತ್ತೆನು. ನನ್ನನ್ನು ಯಾರಾದರು ರಕ್ಷಿಸಿರಿ.

ಉತ್ತರಾ:— ಭಯಪಡಬೇಡಿರಿ, ಯಾರು ನೀವು, ಭಯಪಟ್ಟಿರಾ?

ಮೋಘ:— ಹಾ-ಹಾ-ಹಾಗೇನು ಭಯಪಟ್ಟಿಲ್ಲಾ—ನಾನೊಬ್ಬ ಯುದ್ಧದೊಳಗಿಂದ ಓಡಿಬಂದ ಮಹಾವೀರನು. ನಾನು ರಣಾಂಗಣದಲ್ಲಿ ಒಬ್ಬನ ಸಿರಸ್ಸನ್ನಾದರೂ ಹಾರಿಸದಿದ್ದರೂ ಒಳ್ಳೆ ಚಾತುರ್ಯದಿಂದ

ಸ್ವಂತದ ಶಿರಸ್ಸನ್ನು ಇನ್ನೂ ಕಾದುಕೊಂಡಿದ್ದೇನೆ. ಅಮ್ಮಾ, ಎರಡ ನೆಯವರ ಶಿರಸ್ಸನ್ನು ಹಾರಿಸುವದಕ್ಕಿಂತಲೂ ಸ್ವಂತದ ಶಿರಸ್ಸನ್ನೇ ಕಾಯ್ದುಕೊಳ್ಳುವದಕ್ಕೆ ತಲೆಮೆದುಳನ್ನು ಹೆಚ್ಚು ಖರ್ಚು ಮಾಡ ಬೇಕಾಗುವದು. ಶತ್ರುಗಳ ಕೂಡಾ ಕಾದಾಡುವ ರೀತಿಯು ನನಗೆ ಗೊತ್ತಿಲ್ಲದಿದ್ದರೂ ರಣಾಂಗಣದಿಂದ ಮೆಲ್ಲನೆ ಕಾಲು ತೆಗೆದು ಓಡಿ ಹೋಗುವಂತಹ ಧೀರನು ನನ್ನ ಹೊರ್ತು ನಿಮಗೆ ಮತ್ತಾರು ದೊರೆ ಯಲಿಕ್ಕಿಲ್ಲ. ಮತ್ತೆ ಈ ಪಲಾಯನದ ವಿದ್ಯೆಯನ್ನು ಪರಾಕ್ರಮ ಶಾಲಿಯಾದ ನಾನೊಬ್ಬನು ಮತ್ತು ನಮ್ಮ ಮೂರ್ಖ ಶಿರೋಮಣಿ ತೀರ್ಥರೂಪರು. ಇಬ್ಬರೇ ಬಲ್ಲರು.

ಉತ್ತರಾ:— ಈ ದಿವಸದ ಯುದ್ಧದ ಸಮಾಚಾರವು ತಮಗೆ ಗೊತ್ತಿರ ಬಹುದಲ್ಲವೇ ?

ಮೇಘ:— ಅಮ್ಮಾ, ಆ ವಾರ್ತೆಯನ್ನು ಏನು ಹೇಳಲಿ ? ಪಾಂಡವರು ಸೋತರು.ಚಕ್ರವ್ಯೂಹದಲ್ಲಿ ನಾಲ್ಕೂ ದಿಕ್ಕಿನಿಂದ ಮುತ್ತಿ, ಅಭಿ ಮನ್ಯು ಮಹಾರಾಜರನ್ನು ಸ್ವರ್ಗಕ್ಕೆ ಅಟ್ಟಿದರು.

ಉತ್ತರಾ:— ಹಾಯ್.ಹಾಯ್! ನನ್ನ ಸೌಭಾಗ್ಯಕ್ಕೆ ಸಿಡಿಲು ಬಡಿಯಿತು. ನಾಥಾ, ನಾಥಾ. (ಬೀಳುವಳು)

ಮೇಘ:— ಎಲಾ, ಇನ್ನೇನು ಮಾಡಬೇಕು ? ಧರ್ಮ ಮಾಡುವದಕ್ಕೆ ಹೋದರೆ,ಅದು ಕರ್ಮವಾಯಿತು.ಇವಳು ಯಾರು? ಮೂರ್ಛೆಬಂದು ಬಿದ್ದಳು. ಈ ಸ್ಥಳದಲ್ಲಿ ನೀರು ಎಲ್ಲಿ ಸಿಗುವದು ? ಛೆ ಛೆ, ಕಣ್ಣೀರು ತೆಗೆ ಯುವ ಪ್ರಸಂಗವೆ ಇದು. ನನ್ನ ಜೀವವೇ ನೀರು ನೀರಾಗಿ ಹೋಗಿದೆ. (ಹೋಗುವನು)

ಉತ್ತರಾ:— (ಎಚ್ಚತ್ತು) ದುರ್ದೈವವೆ, ಎಷ್ಟು ಜನ್ಮದ ಸೇಡು ತೀರಿಸಿಕೊಂ ಡಿಯೊ ಕಾಣೆ.ನನ್ನ ಸೌಭಾಗ್ಯ ಸೂರ್ಯನು ಮುಳುಗಿದನು. ಸಂಸಾರ ಸೌಖ್ಯವು ಮಣ್ಣುಪಾಲಾಯಿತು.ಪ್ರಾಣೇಶ್ವರಾ,ತಮ್ಮ ಸುಕುಮಾರ ದೇಹದ ಕೊನೆಯ ದರ್ಶನವಾದರೂ ಒಂದುಸಲ ಈ ಪಾಪಿಣಿಗೆ ಲಭಿಸಲಿಲ್ಲವಲ್ಲ!

ರಾಗ ಖಮಾಜ, ತಾಳ ದೀಪಚಂದಿ

ಕಾಂತೆಯನಗಲಿ ಪೋದೆಯ । ಪದುಳನಾಥಾ ॥ ಪಲ್ಲ ॥
ಖಲನಾದ ವಿಧಿ ನಿನ್ನ, ಸೆಳೆದುಕೊಂಡೊಯ್ದನೆ ॥ ಬಲು
ಪಾಪಿ ನಾನಯ್ಯೋ ! ಇಳೆಯೊಳ್ ಜೀವಿಸಲೆಂತೂ ॥೧॥

(ಆಕ್ರೋಶ ಮಾಡುತ್ತ ಹೋಗುವಳು. ಮೇಘನಾದನು ಬರುವನು)

ಮೇಘ:— ಅಯ್ಯೋ ಪಾಪ, ಎಲ್ಲಿ ಹೋದಳು? ಹೇಗೆ ಎಚ್ಚತ್ತಳು ? ಆದರೆ ಇನ್ನುಮೇಲೆ ನಾವು ಕೂಡ ನಮ್ಮ ಮಾರ್ಗವನ್ನು ಸ್ವಲ್ಪ ಸುಧಾರಿಸೋಣ. (ಹೋಗ ಹತ್ತುವನು. ಪುರುಷವೇಷದಲ್ಲಿ ಸೌದಾಮಿನಿಯು ಬರುವಳು.)

ಸೌದಾ:— ಅಹಹಾ ! ಈ ಲತೆಗಳನ್ನು ಮತ್ತು ವಸಂತಾಗಮನದಿಂದ ಸೌಭಾಗ್ಯಯುಕ್ತವಾದ ಈ ವನಶ್ರೀಯ ವಿಲಾಸವನ್ನು ನೋಡಿದರೆ ನಮ್ಮ ದೇವಿಯರ ಕೋಮಲವಾದ ಲತೆಯ ಭವಿತವ್ಯತೆಯ ಕಲ್ಪನೆಯು ನನ್ನ ಸ್ಮರಣಕ್ಕೆ ಬರುವದು.

ಮೇಘ:— ಏನು ಸ್ವಾಮಿ ಸಭ್ಯಗೃಹಸ್ಥನೆ, ಕೊಂಚ ಮನುಷ್ಯರನ್ನು ನೋಡಿ ನಡೆಯಿರಿ.

ಸೌದಾ:— ಮನುಷ್ಯರನ್ನು ನೋಡಿಯೇ ನಡೆದಿರುವೆನು.

ಮೇಘ:— ಅಂದರೆ! ನಾನು ನಿಮಗೆ ಮನುಷ್ಯರಂತೆ ಕಾಣುವದಿಲ್ಲವೆ-ಹೇಗೆ ? ನಡೆ ದಾರಿಯನ್ನು ಬಿಡು.

ಸೌದಾ:— ದೇವಿಯವರನ್ನು ಹುಡುಕಿ, ಹುಡುಕಿ, ನಾನಂತೂ ತೀರಾ ಬೇಸತ್ತೆನು.

ಮೇಘ:— (ಗರ್ಜಿಸಿ) ಯಾಕೆ ಕೇಳಿಸುವದಿಲ್ಲವೆ? ಹಾಗಾದರೆ ಕಿವಿಯ ಗೂಟಗಳನ್ನು ತಿರುಗಿಸುತ್ತೇನೆ.

ಸೌದಾ:—(ಸ್ವ) ಓಹೊ, ಇದು ನಮ್ಮ ಪತಿರಾಜರ ಸವಾರಿಯು.ಈ ಪುರುಷವೇಷದಲ್ಲಿ ಇವರಿಗೆ ನನ್ನ ಗುರ್ತು ಸಿಕ್ಕುವದೇಯಿಲ್ಲ. ಹಾಗಾದರೆ ಚನ್ನಾಗಿ ಇವರಿಗೆ ಫಜೀತಿಯನ್ನು ಮಾಡೋಣ.

ಮೇಘ.— ಎಲೋ,ಕೋಣಪ್ಪಾ, ಏ ಮಾತಾಡುವದಿಲ್ಲವೇಕೆ ? ಹೀಗೇಕೆ ಮೂಕನಂತೆ ನಿಂತಿರುವೆ ?

ಸೌದಾ:— ಯಾಕೆ ನಾಲಿಗೆಯು ಬಹಳ ಉದ್ದವಾಯಿತು?

ಮೇಘ:— ಯಾಕೆ, ಬಹಳ ಬೆದರಿಸಿ ವಿಚಾರಿಸುವಿರಿ. ನಾನು ಯಾರೆಂದು ತಿಳಿದಿರುವಿರಿ!

ಸೌದಾ:— ನಾನೊಬ್ಬ ಮಹಾವೀರನು! ನೀನುಯಾರು?

ಮೇಘ:— ನಾನಾದರೂ ಒಬ್ಬ ಪ್ರಚಂಡ ವೀರನಿರುವೆನು! ಕಾಣುವದಿಲ್ಲವೆ?

ಸೌದಾ:— ಕಾಣುವದು. ಆದರೆ ಜಗತ್ತಿನಲ್ಲಿ ಮೇಲೆ ಕಾಣಿಸುವಂತೆ ಒಳಗೆ ಏನೂ ಸತ್ತ್ವವಿರುವದಿಲ್ಲ.

ಮೇಘ:— ಹಾ! ಹಾಗಾದರೆ ಈ ರಕ್ತವು ನಿಮಗೆ ಏನು ಹೇಳುವದು?

ಸೌದಾ:— ಇದು ವೀರರ ರಕ್ತವಲ್ಲೆಂದು ಹೇಳುವದು. ವೀರನೆಂದು ಬೊಗಳುತ್ತಿ—ಆದರೆ ಸರಿಯಾಗಿ ಕತ್ತಿಯನ್ನು ಹಿಡಿಯಲಿಕ್ಕೆ ಬರುವದಿಲ್ಲ. ವೀರನೋ—ಕವಡಿ ಪೀರನೋ?

ಮೇಘ:— ಹಾ! ನೆಟ್ಟಗೆ ಮಾತಾಡು. ಕತ್ತಿಯನ್ನು ತಿರುಮುರುವಾಗಿ ಅಥವಾ ಬೇಕಾದ ಹಾಗೆ ಹಿಡಿಯುವೆನು. ಅದನ್ನು ಕೇಳುವದಕ್ಕೆ ನಿನಗೇನು ಅಧಿಕಾರವಿದೆ? (ಸ್ವಗತ) ಇನ್ನುಮೇಲೆ ಪ್ರಸಂಗವು ಕಠಿಣವಿದೆ.

ಸೌದಾ:— ಯಾರಯ್ಯಾ ನೀನು? ಯಾವ ಪಕ್ಷದ ವೀರನು? ನಿನ್ನದು ಯಾವ ಪಕ್ಷ—

ಮೇಘ:— ಕೃಷ್ಣಪಕ್ಷ! ನನ್ನ ಜನ್ಮವು ಕೃಷ್ಣಪಕ್ಷದಲ್ಲಿಯಾಗಿದೆ.

ಸೌದಾ:— ನಿನ್ನ ಜನ್ಮದ ವಿಚಾರವು ಹಾಳಾಗಿ ಹೋಗಲಿ ಬಿಡು, ಯಾರಿಗೆ ಬೇಕಾಗಿದೆ!

ಮೇಘ:— ಹಾಗಾದರೆ, ಅಯ್ಯಾ, ನನ್ನ ಮರಣದ ವಿಚಾರವನ್ನು ಹೇಳಬೇಕೆನ್ನುವಿಯೋ ಹೇಗೆ?

ಸೌದಾ:— ನಿನ್ನದು ಪಾಂಡವ ಪಕ್ಷವೊ ಕೌರವ ಪಕ್ಷವೊ? ಪುಣ್ಯದ ಪಕ್ಷವೊ ಪಾಪದ ಪಕ್ಷವೊ?

ಮೇಘ:— ಇದೊ ನೋಡು. ಪಾಪಪುಣ್ಯದ ವಿಚಾರವು ನಿನಗೇಯಿರಲಿ. ಆದರೆ ನನ್ನದು ರಾಜ ಪಕ್ಷವು.

ಸೌದಾ:—ರಾಜಪಕ್ಷವೆಂದರೇನು ಸ್ಪಷ್ಟವಾಗಿ ಹೇಳು ?

ಮೇಘ:—ಸ್ಪಷ್ಟವಾಗಿ ಏನು ಹೇಳಲಿ. ನೀನೆ ಸ್ವಲ್ಪ ತಲೆ ಖರ್ಚುಮಾಡು ಅಂದರೆ ತಾನೇ ಗೊತ್ತಾಗುವದು. ರಾಜಪಕ್ಷವೆಂದರೆ ಪ್ರಜಾಪಕ್ಷವನ್ನು ಯಥೇಚ್ಛವಾಗಿ ನಿಂದಿಸೋಣ ಮತ್ತು ರಾಜಪ್ರತಿನಿಧಿಗಳ ಬಾಲವನ್ನು ಬಡೆದು, ದುರ್ಬಲರನ್ನು ಹಿಂಸಿಸಿ ಬಂದ ಹಣದಿಂದ ಸುಖದಿಂದ ಸಂಸಾರ ಮಾಡುವದೇ ನಮ್ಮ ಜನ್ಮದ ರಹಸ್ಯವು. ಇದರ ಮೇಲಿಂದ ನನ್ನದು ಯಾವ ಪಕ್ಷವೆಂಬುದನ್ನು ನೀವೆ ಗುರುತಿಸಿರಿ-ನೋಡೋಣ. (ಸ್ವ) ಪ್ರಸಂಗವನ್ನು ಸಾಧಿಸಿ ಹೀಗೆ ಏನಾದರೊಂದು ಗತ್ತುಮಾಡಿ ಪಾರಾಗಬೇಕು.

ಸೌದಾ:—ಎಲೊ ಕಳ್ಳಾ, ಹಾಗಾದರೆ ನೀನು ಪಾಂಡವ ಪಕ್ಷದವನೇನು ?

ಮೇಘ:—ಏನು ? ಈ ಮೇಘನಾದನು ಪಾಂಡವ ಪಕ್ಷದವನೆಂದು ತಿಳಿದಿಯಾ. ಸರಿ, ನಿನ್ನ ಬುದ್ಧಿಯೂ ಶುಂಭವಿದೆ. ಎಲೊ, ಈ ರಾಜನಿಷ್ಠ ವೀರನು ಕೌರವ ಪಕ್ಷದವನು ತಿಳಿಯಿತೆ.

ಸೌದಾ:—ಏನು ಕೌರವ ಪಕ್ಷದವನೆ ? ಹೂ, ಹಾಗಾದರೆ ಯುದ್ಧಕ್ಕೆ ಸಿದ್ಧನಾಗು.

ಮೇಘ:—(ಸ್ವ) ಓಹೊ, ಈತನು ಪಾಂಡವ ಪಕ್ಷದವನಂತೆ ಕಾಣುವನು. ಸಮಯವನ್ನು ಸಾಧಿಸಿ ಏನಾದರೊಂದು ಸುಳ್ಳು ಹೇಳಿ ಪಾರಾಗಬೇಕು. (ಪ್ರಕಾಶ) ಏನು ರಾಯರೆ,ನೀವು ಮೋಸಹೋದಿರಿ. ನೀಟಾಗಿ, ವಿಚಾರಿಸಿದರೆ ನಾನು ಪಾಂಡವ ಪಕ್ಷದವನಿರುವೆನು.

ಸೌದಾ:—ಏನು ಪಾಂಡವ ಪಕ್ಷದವನೆ. ತೆಗೆದುಕೊ ಹಾಗಾದರೆ ದೇವರ ಹೆಸರನ್ನು.

ಮೇಘ:—(ಸ್ವ) ಎಲಾ, ಒಳ್ಳೇ ಕಷ್ಟ ಬಂತು. ಪಾಂಡವ ಪಕ್ಷದವನೆಂದರೂ ಮರಣ.ಕೌರವ ಪಕ್ಷದವನೆಂದರೂ ಮರಣ. (ಪ್ರ) ಇದೋ ನೋಡು, ನಾನು ಯಾವ ಪಕ್ಷದವನೂ ಅಲ್ಲ. ಕೌರವರು ಸತ್ತರೂ ಮೈಲಿಗೆ ಬರುವಂತಿಲ್ಲ. ಪಾಂಡವರು ಸತ್ತರೂ ನನಗೆ ವಿಷಾದವೆನಿಸುವದಿಲ್ಲ. ನನ್ನದು ಸ್ವಾತಂತ್ರ್ಯಪಕ್ಷವು. ನನ್ನ ಮತಗಳು ಕ್ಷಣಕ್ಷಣಕ್ಕೆ ಬದಲಾಗುವವು. ಆದರೆ ಆ ಮತಕ್ಕೆ ರೀತಿಯಿಲ್ಲ. ಭೀತಿಯಿಲ್ಲ. ಕೋತಿಯು

ಸಾಂಪ್ರದಾಯವು. ಹೊಟ್ಟೆಗಿಲ್ಲದೆ ಬೇಕಾದವರು ಸಾಯಲಿ, ಆದರೆ ಹೋಳಿಗೆ ತುಪ್ಪವನ್ನು ತಿಂದು ಯಾವಾಗಲೂ ಪುತ್ರನಾಗಿರುವದೆ ನಮ್ಮ ಮನೆತನದ ಶ್ರೇಷ್ಠ ಸಾಂಪ್ರದಾಯವು. ಆದರೆ ಅದು ಹೋಗಲಿ. ನೀನು ಯಾವ ಪಕ್ಷದವನು ? (ಸಮೀಪಕ್ಕೆ ಹೋಗುವನು)

ಸೌದಾ:—ದೂರಾಗು ಮೂರ್ಖಾ, ಪ್ರಸಂಗವು ಮೈಮೇಲೆ ಬಂದಿತೆಂದು ಹೀಗೆ ಬಾಲವನ್ನು ಗುಂಡಾಡಿಸಲಿಕ್ಕೆ ಪ್ರಾರಂಭಿಸಿದಿಯಾ ? ಒಳ್ಳೇ ಮಾತುಗಳಿಂದ ಯುದ್ಧಕ್ಕೆ ಸಿದ್ಧನಾಗು.

ಮೋಘ:—(ಸ್ವ) ಬಂತು,ನಮ್ಮ ಪ್ರಾಣಕ್ಕೆ ಚಕ್ರವು.ಮೋಘನಾದಾ- ಬೆಳಿಗ್ಗೆ ಎದ್ದು ನೀನು ಯಾರ ಮುಖವನ್ನು ನೋಡಿದಿಯೋ ? ಯಾರ ಮುಖ ವನ್ನೇ ಏಕೆ ಕನ್ನಡಿಯಲ್ಲಿ ಸ್ವತಃ ನನ್ನ ಮುಖವನ್ನೇ ನೋಡಿರುವೆನು? (ಪ್ರ) ಇದೊ, ಯುದ್ಧಕ್ಕೆ ನಾನು ಒಂದೇ ಕಾಲಮೇಲೆ ಸಿದ್ಧನಿದ್ದೇನೆ. (ಕಾಲು ಮೇಲೆ ಮಾಡುವನು) ನಾನೇನು ಹೆಣದತ್ತನಲ್ಲ-ರಣದತ್ತನು.

ಸೌದಾ:—ಸಾಕು ಮಾಡು ಪೌರುಷವನ್ನು. ತಿಳಿಯಿತು ಪರಾಕ್ರಮವು.

ಮೋಘ:—ನನ್ನ ಪರಾಕ್ರಮವು ನಿನಗೆ ಗೊತ್ತಾಯಿತಲ್ಲವೆ ! ಹಾಗಾದರೆ ಆ ಕತ್ತಿಯನ್ನು ಒರೆಯಲ್ಲಿ ನೂಕು. ಯುದ್ಧವನ್ನು ಸಾಕುಮಾಡು.

ಸೌದಾ:—ಭಲೆ, ಭಲೆ, ಉತ್ತರ ಕುಮಾರಾ, ಇದೇ ಏನು ನಿನ್ನ ಶೌರ್ಯ. (ನಗುವನು)

ಮೋಘ:—ನನ್ನನ್ನು ನೋಡಿ ಪರಿಹಾಸ್ಯ ಮಾಡುವಿಯಾ ? ಅಪಮಾನವು ಬಲಾಢ್ಯ ವೀರನಾದ ನನ್ನ ಅಪಮಾನವು ! ಸಾಕು ಇನ್ನು ಮೇಲೆ ಯುದ್ಧವನ್ನು ಮಾಡುವದಿಲ್ಲ.

ಸೌದಾ:—ಅಪಮಾನವಾಯಿತೆಂದು ಯುದ್ಧ ಮಾಡುವದಿಲ್ಲವೆ? ಅಪಮಾನದ ಬಗ್ಗೆ ಶೇಡು ತಕ್ಕೊ.

ಮೋಘ:—ಏನು ಸೇಡು ? ಯಃಕಶ್ಚಿತ ಶಿಪಾಯಿಯ ಮೇಲೆ, ಈ ವೀರ ನಿಗೆ ಅದು ಭೂಷಣವಲ್ಲ.

ಸೌದಾ:—ನೀನು ಯುದ್ಧಮಾಡಬೇಡ. ನಾನು ನಿನ್ನ ಜತೆಗೆ ಯುದ್ಧ ಮಾಡತಕ್ಕವನೇ

ಮೇಘ:—ಇದೊಳ್ಳೆ ಬಲಾತ್ಕಾರ. ನನ್ನ ಇಷ್ಟವಿಲ್ಲದೆ ನನ್ನ ಕೂಡ ಯುದ್ಧ ಮಾಡುವಿಯೇನು ?

ಸೌದಾ:—ನಿನ್ನ ಇಷ್ಟವನ್ನು ಕೇಳತಕ್ಕವರಾರು. ಹೂ ಯುದ್ಧಕ್ಕೆ ಸಿದ್ಧನಾಗು.

ಮೇಘ:—ನಿನ್ನ ಹಟವೆ ಇದ್ದರೆ, ಇದೊ ! ನಾನು ಯುದ್ಧಕ್ಕೆ ಸಿದ್ಧನಾಗುವೆನು. ನನ್ನದೊಂದು ಕಾರ್ಯವಿರುವದು ಅದನ್ನು ಮಾತ್ರ ನೀನು ಮಾಡಬೇಕು.

ಸೌದಾ;—ಅದೇನು ಹೇಳು !

ಮೇಘ:—ಈ ಯುದ್ಧದಲ್ಲಿ ಒಂದು ವೇಳೆ ನಾನು ಮಡಿದರೆ ನನ್ನ ಪ್ರೇತವನ್ನು ಮಾತ್ರ ಹುಗಿಯಬೇಡ.

ಸೌದಾ:—ಯಾಕೆ ?

ಮೇಘ:—ಯಾಕಂದರೆ ಇಷ್ಟೇ, ನಾನು ಮಡಿದ ಮೇಲೆ, ನನ್ನ ಹೆಂಡತಿಯು ಸತಿ ಹೋಗುವದಕ್ಕೆ ಶೋಕಿಸುತ್ತ ಇಲ್ಲಿಗೆ ಬರುವಳು. ಆಗ್ಗ ಆವಳಿಗೆ ನಾನು ಕೊನೆಯ ಪ್ರೇಮಾಲಿಂಗನವನ್ನು ಹೀಗೆ-ಕೊಡುವೆನು. (ಅಪ್ಪುವನು)

ಸೌದಾ:—ಏನು ಸತ್ತಮೇಲೆ ಪ್ರೇಮಾಲಿಂಗನವೇ? ಒಳ್ಳೇ ಆಶ್ಚರ್ಯ !

ಮೇಘ:—ಇದರಲ್ಲೇನು ಆಶ್ಚರ್ಯ, ನಾನು ಸಾಯಬಹುದು. ಆದರೆ ನನ್ನ ಶರೀರವು ಹಾಗೇ ಇರುವದಲ್ಲವೆ?

ಸೌದಾ:—ಆದರೆ ನಿಮ್ಮ ಹೆಂಡತಿಯು ಸತಿ ಹೋಗದಿದ್ದರೆ–

ಮೇಘ—ಹೆಂಡತಿಯು ಸತಿ ಹೋಗದಿದ್ದರೆ, ನಾನು ಯುದ್ಧ ಮಾಡುವದಿಲ್ಲ, ಸಾಯುವದಿಲ್ಲ. ಅವಳು ಸತಿ ಹೋಗುವದಿಲ್ಲವೆ ಅಯ್ಯೋ–ಏನು ಮಾಡಲಿ? ಈ ಕಾಲಕ್ಕೆ ಈ ಸ್ಥಳದಲ್ಲಿ ಅವಳು ನನ್ನ ಎದುರಿಗೆ ಇದ್ದಿದ್ದರೆ, ಹೀಗೆ–ಅವಳ ಸಮಾಚಾರ ತಕ್ಕೊಳ್ಳುತ್ತಿದ್ದೆ. ಏನು ಹೇಳಲಿ, ವೈರಣಿಯೇ, ಚಂಡಾಲಿನಿಯೇ, ಪಾತಕಿಯೇ,-ಘಾತಕಿಯೇ–

ಸೌದಾ:—ಸುಮ್ಮನೆ ಅವಳ ಮೇಲೇತಕ್ಕೆ ಕೋಪಿಸುವಿರಿ?

ಮೇಘ:—ಹೌದು ? ಅವಳ ಮೇಲೆ ಕೋಪಿಸುವದರಿಂದ ಏನು ಪ್ರಯೋಜನವಿದೆ ?

ಸೌದಾ:—ನಿಮ್ಮ ಹೆಂಡತಿಯು ಪಾಪ, ಒಳ್ಳೇ ಒಡಪ್ರಾಣಿಯು !

ಮೇಘ:—ಏನು-ಬಡಪ್ರಾಣಿಯೇ-ಅಲ್ಲ-ಕಾಲಸರ್ಪಿಣಿಯು. ನನ್ನ ಮಾತು ಕೇಳಿರಿ. ನಾನು ವೀರನು. ನಿಮ್ಮ ಜೊತೆಗೆ ಯುದ್ಧ ಮಾಡುವೆನು. ಆದರೆ, ಮೊದಲು ಮನೆಗೆ ಹೋಗಿ ಹೆಂಡತಿಯನ್ನು ವಿಚಾರಿಸಿ, ಸತಿ ಹೋಗುವ ವಿಷಯವಾಗಿ ಅವಳಿಂದ ವಚನ ತಕ್ಕೊಳ್ಳುತ್ತೇನೆ. ಆ ಮೇಲೆ ಮರಣಕ್ಕೆ ಸಿದ್ಧನಾಗುತ್ತೇನೆ. (ಹೋಗಹತ್ತುವನು)

ಸೌದಾ:—ಎಲ್ಲಿ ಹೋಗುವಿರಿ. ಸ್ವಲ್ಪ ತಡೆಯಿರಿ ?

ಮೇಘ:—ಅಮ್ಮಾ, ದೇವಿ ಜಗದಂಬೆ-ರಕ್ಷಿಸು ! ರಕ್ಷಿಸು ! ನಿನ್ನ ಕಾಲು ಬೀಳುತ್ತೇನೆ-ನನ್ನ ಹೆಂಡತಿಯು—

ಸೌದಾ:—(ವೇಷ ತೆಗದು) ಇದೋ ನೋಡಿ, ಇಲ್ಲಿಯೇ ನಿಂತಿರುವಳು ನಿಮ್ಮ ಹೆಂಡತಿಯು. ಯಾಕೆ ವೀರಶಿರೋಮಣಿಗಳೆ—

ಮೇಘ:—ಅಯ್ಯೋ ಕಷ್ಟವೆ ಸಂಪೂರ್ಣ ದುರ್ದಸೆಯು (ಓಡಿ ಹೋಗುವನು)

ಸೌದಾ:—ಬೆಂಕಿ ಹಚ್ಚಲಿ ಹೆಂಣಿಗರಾದ ಇಂತಹ ಪುರುಷರ ಹೇಡಿತನಕ್ಕೆ.

೪ನೇ ಪ್ರವೇಶ

(ಸ್ಥಳ:— ಸಮರಭೂಮಿ. ದುರ್ಯೋಧನ, ದುಃಶಾಸನ ಮೊದಲಾದವರ ಪ್ರವೇಶ)

ಜಯ:—ಆನಂದವು. ಆನಂದವು, ಈ ದಿವಸ ರಣಯಜ್ಞಕ್ಕೆ ಅಭಿಮನ್ಯುವು ಆಹುತಿಯಾದನು. ಅತ್ಯಾನಂದವು ಮಹಾನಂದವು.

ದುಶ್ಯಾ:—ಅಭಿಮನ್ಯುವು ಆಹುತಿಯಾಗಲಿಲ್ಲ. ಪಾಂಡವರ ಪರಾಕ್ರಮವೆ ಸಮರಯಜ್ಞದಲ್ಲಿ ಪ್ರಾಣಾಹುತಿಯಾಯಿತು. ಕೌರವರ ಪರಾಕ್ರಮವು ಮೇರೆ ತಪ್ಪಿ ಶಿಖರಕ್ಕೆ ಮುಟ್ಟಿತು.

ದುರ್ಯೋ:—ಹೇಳಿರಿ-ಹಾಗಾದರೆ- ಈ ಹಸ್ತಿನಾಪುರದ ಸಿಂಹಾಸನದ ಜಯಜಯಕಾರವನ್ನು ಹೇಳಿರಿ!

ಜಯ:—ಇಂದ್ರಪ್ರಸ್ಥವು ಮತ್ತು ಹಸ್ತಿನಾಪುರವು ಈ ಸಂಯುಕ್ತ ಸಾಮ್ರಾಜ್ಯದ ಸೂತ್ರಗಳನ್ನು ಲೀಲೆಯಿಂದ ಸಹಜವಾಗಿ ಹಿಡಿದು

ಆಡಿಸುವಂಥ ಸಾಮ್ರಾಟ ದುರ್ಯೋಧನ ಮಹಾರಾಜರ ಜಯಜಯ ಕಾರವನ್ನು ಹೇಳಿರಿ. ಸಾಮ್ರಾಟ ದುರ್ಯೋಧನ ಮಹಾರಾಜರ ಜಯಜಯಕಾರವು!

ದ್ರೋಣ:—ಧಿಃಕಾರವು–ಧಿಃಕಾರವು! ಜಯ ಜಯಕಾರವೆ? ಯಾರ ಜಯಜಯಕಾರವು? ಮತ್ತು ಯಾತಕ್ಕೋಸ್ಕರ ಜಯಜಯಕಾರವು?

ಜಯ:—ಈ ದಿವಸದ ಅಪೂರ್ವ ವಿಜಯಕ್ಕೋಸ್ಕರ ಜಯಜಯಕಾರವು.

ದ್ರೋಣ:—ಪಾಪೀ, ವಿಜಯದ ಉನ್ಮಾದದಿಂದ ತಾಳಗೆಟ್ಟ ನಿಮ್ಮ ರಾಕ್ಷಸೀ ಬುದ್ಧಿಯು ಈ ಜಯಜಯಕಾರದ ಗರ್ಜನೆಯನ್ನು ಮಾಡುತ್ತಿರುವದು. ಆದರೆ ನಿಮ್ಮ ಪಾದದಡಿಯಲ್ಲಿ ಸಿಕ್ಕು ಒದ್ದಾಡುವಂತಹ ಧರ್ಮ ಮತ್ತು ನ್ಯಾಯನೀತಿಯು ಆಕ್ರೋಶದಿಂದ ಕೌರವರ ವಂಶವು ನಿರ್ಮೂಲವಾಗಲೆಂದು ಶಾಪಕೊಡುವದು. ನಿಮ್ಮ ಅಂತಃಕರಣಕ್ಕೆ ಕೇಳಿಸುವದಿಲ್ಲವೆ? ಅಭಿಮನ್ಯುವನ್ನು ನೀವು ವಿಶ್ವಾಸಘಾತ ಮಾಡಿ ಸಂಹರಿಸಿದಿರಿ. ಆಗಲೆ ನಿಮ್ಮ ಭಯಂಕರ ಅಧಃಪಾತವು. ನಿಮ್ಮ ಅಸುರಿ ಕೃತ್ಯಕ್ಕೆ ಆಮಂತ್ರಣ ಕೊಟ್ಟಿತೆಂಬುದು ನಿಮ್ಮ ಬುದ್ಧಿಗೆ ಹೇಗೆ ಗೊತ್ತಾದೀತು?

ದುರ್ಯೋ:—ಆಚಾರ್ಯರೇ, ಕೌರವರ ವಿಜಯೋತ್ಸವವು ನಿಮಗೆ ಸಂತೋಷವೆನಿಸುವದಿಲ್ಲ. ಅನ್ನದಾತೃಗಳಾದ ಕೌರವರ ಕೂಡ ಹೀಗೆ ಅಪ್ರಾಮಾಣಿಕತನವೇ?

ಜಯ:—ಕೌರವರ ಹೋಳಿಗೆ ತಿನ್ನೋಣ– ಪಾಂಡವರ ಮುಂದೆ ಕಾಳಿ ಊದೋಣ–

ದುಃಶಾ:—ಶೂರ ಅಂತಃಕರಣದ ವಿಜಯೋತ್ಸವವು ಆಚಾರ್ಯರ ಮನಸ್ಸಿಗೆ ಏಕೆ ಬೇಸರವೆನಿಸುವದೋ ತಿಳಿಯದು.

ದ್ರೋಣ:—ಏನು! ನಿಮ್ಮದು ಶೂರ ಅಂತಃಕರಣವೇ! ಯಾರು ಹೇಳುವರು! ಮತ್ಸರ ಪೂರ್ಣವಾದ ದುಷ್ಟ ಅಂತಃಕರಣದಲ್ಲಿ ಶೌರ್ಯದ ಗಂಧವೇ ಇರುವದಿಲ್ಲ. ಆದ್ದರಿಂದಲೆ ಲೋಭದಿಂದ ಪಾಪಮಯವಾದ ದುರಾಶೆಗೆ ಬಲಿಬಿದ್ದು, ಅತ್ಯಾಚಾರದ ಅಹಂಕಾರದ ಭರದಲ್ಲಿ ಕಪಟಬುದ್ಧಿಗೆ ಅಧೀನರಾಗಿ ಹೇಡಿಗಳಾಗುವರು. ನಿಮ್ಮ

ಅಂಗಗಳಲ್ಲಿ ಶೌರ್ಯವೂ ಧರ್ಮದ ಸರಳ ಬುದ್ಧಿಯೂ ಇರುತ್ತಿದ್ದರೆ, ನಿಮ್ಮ ಭ್ರಷ್ಟ ಬುದ್ಧಿಯು ಕಾಪಟ್ಯದ ಗುಲಾಮಗಿರಿಯನ್ನು ಎಂದೂ ವಹಿಸುತ್ತಿದ್ದಿಲ್ಲ.

ದುರ್ಯೋ:—ಇದು ರಾಜಕಾರಣದ ಪ್ರಶ್ನವಿದೆ. ಸಾಮ್ರಾಟ ರಾಜನು ಕೆಲವು ವೇಳೆ ಶಸ್ತ್ರದ ಶಕ್ತಿಯನ್ನು, ಕೆಲವು ಸಮಯದಲ್ಲಿ ಕುಟಿಲ ಬುದ್ಧಿಯ ಕಾರಸ್ಥಾನವನ್ನು ಉಪಯೋಗಿಸಿ ತನ್ನ ರಾಜಸತ್ತೆಯನ್ನು ಕಾಯ್ದುಕೊಳ್ಳಬೇಕಾಗುವದು.

ದ್ರೋಣ:—ಅನ್ಯಾಯದ ಕುಟಿಲ ಬುದ್ಧಿಯಿಂದ ಸಂಪಾದಿಸಿದ ಸಾಮ್ರಾಟ ಸಿಂಹಾಸನವು ಸತ್ಯನಿಷ್ಠೆಯ ಸರಳ ಬುದ್ಧಿಯಿಂದ ಸಮೂಲ ನಷ್ಟವಾಗಿ ಹೋಗುವದು. ದುರ್ಯೋಧನ, ಧೃತರಾಷ್ಟ್ರನು ದೃಷ್ಟಿಯಿಂದ ಅಂಧನಾದನು. ನೀನು ವಿವೇಕದಿಂದ ಅಂಧನಾಗಬೇಡ. ದೇಶವನ್ನೆ ಧೂಳಿಗೊಳಿಸುವಂತಹ ವಾಯುದಿತನದ ಪ್ರಖರವಾದ ಅಗ್ನಿಯಿಂದ ವಿಚಾರಶೂನ್ಯನಾಗಿ ನಿನ್ನ ಮನಸ್ಸನ್ನು ಹೀಗೆ ವಿಪರೀತವಾದ ಅಹಂಕಾರದ ಮೋಹಕ್ಕೆ ಬೀಳಗೊಡಬೇಡ.

ದುರ್ಯೋ:—ಆಚಾರ್ಯರೇ! ನನ್ನ ಅನ್ನದಿಂದ ಪೋಷಿತವಾದ ಜೀವವು ತನ್ನ ನಿಯತ್ತನ್ನು ಬಿಟ್ಟು ಬಡಬಡಿಸುವದಕ್ಕೆ ಪ್ರಾರಂಭಿಸಿದರೆ ಅದನ್ನು ಲಕ್ಷಿಸುವರಾರು? ಸತ್ಯದ, ಧರ್ಮದ, ಭಾಷ್ಕಳಮಾತುಗಳನ್ನು ಸಾಕುಮಾಡಿರಿ. ಕೌರವೇಶ್ವರನ ವಿಜಯವಾಯಿತು. ಸತ್ಯವು, ನ್ಯಾಯವು, ಧರ್ಮ, ನೀತಿಯು ಸರ್ವಸ್ವವು ರಾಜನ ಪಕ್ಷವನ್ನೇ ಅವಲಂಬಿಸಿತು. ಆಚಾರ್ಯರೆ, ಈ ಆನಂದಕ್ಕೆ ನೀವು ಕೂಡಾ ಪಾಲುಗಾರರಾಗಿರುವಿರಿ. ನಿಮ್ಮ ಸ್ವಾಧೀನವಿರುವ ಜಿವ್ಹೆಯು ತಿಂದ ಅನ್ನವನ್ನು ಸ್ಮರಿಸಿ ನನ್ನ ಜಯಜಯಕಾರವನ್ನು ಮಾಡಲೇಬೇಕು.

ದ್ರೋಣ:—ಶಕ್ಯವಿಲ್ಲ. ಕಾಲತ್ರಯಕ್ಕೂ ಶಕ್ಯವಿಲ್ಲ. ನನ್ನ ಜಿವ್ಹೆಯು ಕಳಚಿಬಿದ್ದರೂ ಚಿಂತೆಯಿಲ್ಲ. ನಿನ್ನ ಜಯಜಯಕಾರವನ್ನು ಮಾಡಲಾರದು. ಶರೀರದಿಂದ ನಾನು ಕೌರವರ ಗುಲಾಮನಿದ್ದರೂ ಮನಸ್ಸಿನಿಂದ ಖಂಡಿತವಾಗಿಯೂ ಇಲ್ಲ. ಪಾಂಡವರ ಪರಾಕ್ರಮವು—

ಜಯ:—ಗೊತ್ತಿದೆ ಪಾಂಡವರ ಪರಾಕ್ರಮವು. ಈ ಕೌರವನ ಕುಟಿಲಬುದ್ಧಿ

ಯಿಂದಲೆ ಪಾಂಡವರ ಪರಾಕ್ರಮವು! ಲಾಕ್ಷಾಗೃಹದಲ್ಲಿ ಸುಟ್ಟು ಹೋಗಿತ್ತು ಮತ್ತು ಬಾಲ್ಯದಲ್ಲಿಯೇ ಅವರನ್ನು ಯಮುನಾನದಿಯ ಮಡುವಿನಲ್ಲಿ ಮುಳುಗಿಸಿ ವಿಜಯಶಾಲಿಯಾಗಿತ್ತು.

ದ್ರೋಣ:—ಕಪಟ ಬುದ್ಧಿಯಿಂದಲೂ ನಿಸ್ಸಾರವಾದ ಶೌರ್ಯದಅಹಂಕಾರ ದಿಂದಲೂ ಮನುಷ್ಯನು ಅವಿವೇಕಿಯಾಗುವನು. ಅದು ಹೀಗೆ.

ಶಕುನಿ:—ದುರ್ಯೋಧನ, ದುಃಶಾಸನ, ಜಯದ್ರಥಾ, ಸುಮ್ಮನೆ ಇಲ್ಲಿ ಏಕೆ ನಿಂತಿರುವಿರಿ? ಗೂಢಚಾರನು ಭಯಂಕರವಾದ ವರ್ತಮಾನ ತಂದಿರುವನು. ನಾಳೆ ಸೂರ್ಯಾಸ್ತದೊಳಗೆ ಜಯದ್ರಥನ ಸಂಹಾರ ಮಾಡುತ್ತೇನೆಂದು ಅರ್ಜುನನು ಘೋರ ಪ್ರತಿಜ್ಞೆಯನ್ನು ಮಾಡಿರುವನಂತೆ!

ಜಯ:—ಏನು ನನ್ನ ಸಂಹಾರಕ್ಕೋಸ್ಕರ ಪ್ರತಿಜ್ಞೆಮಾಡಿರುವನೆ?ಇದೇನು ಇದು ಶಕುನಿಮಾವನ ಕುಟಿಲ ಬುದ್ಧಿಯ ವಿಜಯವು. ನಿಮ್ಮ ಯಶದ ಜಯಜಯಕಾರವು.ಯಾಕೆ ನಿಮ್ಮ ಜಿಹ್ವೆಯ ಚಪಲತ್ವವು ಮುಗ್ಗರಿಸಿತು. ಆನಂದದ ಕುಣಿದಾಟವು-ಏಕೆ ತಣ್ಣಗಾಯಿತು. ಜಯದ್ರಥಾ, ಶಕುನಿಯ ಕಪಟಕಾರಸ್ಥಾನವು ಕೊನೆಗೆ ನಿನ್ನನ್ನೇ ಪ್ರಾಣಸಂಕಟಕ್ಕೆ ಗುರಿಮಾಡಿತೆ? ಮಾವಾ,ಒಳ್ಳೇ ಅಭಿಪ್ರಾಯವನ್ನು ಕೊಟ್ಟು ಇಂತಹ ರಾಜಪುತ್ರರನ್ನು ಅಟ್ಟಕ್ಕೇರಿಸಿ ಅವರನ್ನು ಮೃತ್ಯುದೇವತೆಗೆ ಬಲಿ ಕೊಟ್ಟು ನೀವು ಮಾತ್ರ ಊರು ಸುಟ್ಟರೂ ಹಣಮಪ್ಪ ಹೊರಗೆ.—

ಶಕುನಿ:—ಆಚಾರ್ಯರೇ, ಸುಮ್ಮನೆ ಮಾತು ಬೆಳೆಸಬೇಡಿರಿ. ಅರ್ಜುನನು ಪ್ರತಿಜ್ಞೆ ಮಾಡಿದನೆಂದು ಕೌರವರ ಶೌರ್ಯಕ್ಕೆ ಬಡತನ ಬಂದಿಲ್ಲ. ಇಂದಿನವರೆಗೆ ಈ ಶಕುನಿಯ ಚಾಣಾಕ್ಷಬುದ್ಧಿಯೇ ಕೌರವರಿಗೆ ಸಹಾಯ ಮಾಡಿರುವದು. ನಿಮ್ಮ ಸೇನಾಪತಿಶೌರ್ಯವು ಏನು ಕೃತಕೃತ್ಯ ಮಾಡಿರುವದು?

ದುರ್ಯೋ:—ಜಯದ್ರಥಾ, ನೀನು ಭಯಪಡಬೇಡ. ಸೂರ್ಯಾಸ್ತದೊಳಗಾಗಿಯೇ ಅರ್ಜುನನು ತನ್ನ ಪ್ರತಿಜ್ಞೆಯನ್ನು ಹೇಗೆ ಪೂರ್ಣಗೊಳಿಸುವನೊ- ಅದನ್ನು ನಾನು ನೋಡುತ್ತೇನೆ. ನಾನು ಸಾಮ್ರಾಟನು. ನನ್ನ ರಾಜ್ಯದಲ್ಲಿ ಅಸ್ತಂಗತನಾಗುವದು ಸೂರ್ಯನದೇನು

ಪ್ರಾಜ್ಞೆಯು? ನಾನು ಬಯಸಿದ್ದೇ ಹಗಲು ನಾನು ಬಯಸಿದ್ದೆ ರಾತ್ರಿಯು.

ದ್ರೋಣ:—ಆದರೆ ನಾಳೆ ಸಾಯಂಕಾಲಕ್ಕೆ ಸೂರ್ಯನು ಮುಳುಗಿ ಅರ್ಜುನನು ತನ್ನ ಪ್ರತಿಜ್ಞೆಯನ್ನು ನಿಜವಾಗಿಯೂ ಪೂರ್ಣಗೊಳಿಸಿದರೆ—ಆಮೇಲೆ ನೀನು ರಾತ್ರಿಯನ್ನು ಹಗಲು ಮಾಡಿದರೂ ಕೂಡ ಆ ಎಲ್ಲ ಪ್ರಯತ್ನವು ನಿಷ್ಫಲವೆ.

ದುರ್ಯೋ:—ಸಾಯಂಕಾಲಕ್ಕೆ ಸೂರ್ಯನು ಮುಳುಗಬಹುದು; ಆದರೆ ಸೃಷ್ಟಿಯು ಸಾಮ್ರಾಜ್ಯದಲ್ಲಿ ಮುಳುಗಬಹುದು—

ಶಕುನಿ:—ಆದರೆ ಈ ದುರ್ಯೋಧನನ ಸಾಮ್ರಾಜದಲ್ಲಿ ಸೂರ್ಯನು ಮಧ್ಯರಾತ್ರಿಗೆ ಉದಯನಾಗಬೇಕು ಮತ್ತು ತನ್ನ ಎಂಟು ಪ್ರಹರದ ಪ್ರವಾಸವನ್ನು ಮುಗಿಸಿ—ಪುನಃ ಮಧ್ಯರಾತ್ರಿಗೆ ಅಸ್ತಂಗತನಾಗಬೇಕು. ಪಂಚಮಹಾಭೂತಗಳ ಮೇಲೆ ಕೂಡಾ ಸಾಮ್ರಾಟನು ಪ್ರಭುತ್ವವನ್ನು ನಡಿಸಲೇಬೇಕು.

ದುಃಶಾ:—ಭರತಖಂಡದ ಈ ಸಾಮ್ರಾಟನು ಸೂರ್ಯನ ಉದಯಾಸ್ತಗಳ ಮೇಲೆ ತನ್ನ ಹಗಲು ರಾತ್ರಿಗಳನ್ನು ನಿರ್ಣಯಿಸತಕ್ಕವನಲ್ಲ.

ದುರ್ಯೋ:—ಜಯದ್ರಥಾ,ನಡೆ, ಎಲ್ಲವೂ ನನ್ನ ಸಾಮ್ರಾಜ್ಯವಿದೆ.ರಾಜ್ಯದ ವಿಶಾಲವಾದಉದರದಲ್ಲಿ ಎಲ್ಲಿಯಾದರೂ ಅಡಿಗಿಸಿಟ್ಟು ನಿನ್ನನ್ನು ರಕ್ಷಿಸುತ್ತೇನೆ.

(ಆಚಾರ್ಯರನ್ನುಳಿದು ಎಲ್ಲರೂ ಹೋಗುವರು)

ಅಹಹಾ! ಏನಿದು ಸಾಮ್ರಾಟ ಸತ್ತ್ರಿಯ ಮದಾಂಧತನವು! . .

ರಾಗ ಶಂಕರಾ, ತಾಳ ತ್ರಿವಟ.

ಅವಿವೇಕೀ ಸಮ್ರಾಟ ರಾಜಾ। ಭುವನಭಾರಿ ಬಹು ಪಾಪಿ
ಮದಾಂಧಾ॥ ಪಲ್ಲ॥ ನೀತಿಧರ್ಮವಾ ಘಾತಿಸಿ ಘೋರಾ।
ಪಾತಕಿಯಾಗುವೆ। ನೀಚ ದುರಾತ್ಮಾ॥೧॥

(ನೋಡಿ) ಹೌದು ಆದರೆ ಇವಳು ಕಾರುಣ್ಯದ ದೇವತೆಯು. ಪವಿತ್ರತೆಯ ಪುಥ್ಥಳಿಯು, ಎದೆ, ಎದೆ ಹೊಡಿದುಕೊಳ್ಳುತ್ತ—ಸಮರ ಭೂಮಿಯಲ್ಲಿ ಸುತ್ತುತ್ತಿರುವಳು.

ಇವಳು ಉತ್ತರೆಯು, ಉತ್ತರೆಯು. ಎಲೈ ದುರ್ದೈವಿ ದ್ರೋಣನೇ -- ಇವಳು ಅಭಿಮನ್ಯುವಿನ ಸತಿಯಾದ ಉತ್ತರೆಯಲ್ಲ! ನಿನ್ನನ್ನು ಶಾಪ ಕೊಟ್ಟು ದಹಿಸಿ ಬಿಡುವಂತಹ ಜೀವಂತಶಕ್ತಿಯೇ ನಿನಗೆ ಎದುರಾಗಿ ಬರುತ್ತಿರುವದು। ಜಾಣತನದ ಶಬ್ದಗಳಿಂದ ಇವಳ ಮನಸ್ಸನ್ನು ಸಮಾಧಾನಗೊಳಿಸುವದಕ್ಕೆ, ಈ ದ್ರೋಣನ ವಾಣಿಯಲ್ಲಿ ತೇಜ ವಾದರೂ ಎಲ್ಲಿ ಉಳಿದಿರುವದು! ಗುಲಾಮಗಿರಿಯ ಕಶ್ಮಲದಿಂದ ಈ ಶರೀರವು ದೂಷಿತವಾದ ಮೇಲೆ, ಆತ್ಮಸಾಮರ್ಥ್ಯವು ಹೇಗೆ ಜೀವಂತವಿದ್ದೀತು! (ಹೋಗುವನು ಪರದೆಯು ಏಳುವದು. ಉತ್ತರೆಯು ಅಭಿಮನ್ಯುವಿನ ಹೆಣದ ಮೇಲೆ ಹೊರಳಾಡುತ್ತಿರುವಳು.)

ಉತ್ತರಾ:— ನಾಥಾ! ಪ್ರಾಣೇಶ್ವರಾ! ಈ ದುರ್ಭಾಗ್ಯಳನ್ನು ವೈಧವ್ಯದ ವಡಬಾಗ್ನಿಯಲ್ಲಿ ನೂಕಿ, ನೀವು ಹೇಗೆ ಪರಲೋಕಕ್ಕೆ ಹೋದಿರಿ! ಹೇಳಿರಿ! ಮಾತಾಡಿರಿ!

ದ್ರೋಣ:— (ಬರುವನು) ದುರ್ದೈವೀ ಬಾಲೆಯೇ !

ಉತ್ತರಾ:— ಯಾರು – ಯಾರು ನೀನು – ಯಮದೂತನೋ – ದೇವ ದೂತನೊ ?

ದ್ರೋಣ:— (ಸ್ವ) ಇವಳ ಪವಿತ್ರವಾದ ತೇಜವನ್ನು ನೋಡುವದಕ್ಕೆ ಈ ದ್ರೋಣನ ಬಲಹೀನವಾದ ಪಾಪವು ಭಯಪಡುತ್ತಿರುವದು.

ಉತ್ತರಾ:— ಯಾಕೆ ಮಾತಾಡುವದಿಲ್ಲ ? ನಾಲಿಗೆಯು ಯಾತರಿಂದ ಕುಗ್ಗಿತು ?

ದ್ರೋಣ:— (ಸ್ವ) ಕೌರವನ ಪಾಪೀ ಅನ್ನದಿಂದ!

ಉತ್ತರಾ:— ಯಾಕೆ! ಈ ಚಿಕ್ಕಬಾಲೆಯ ಮಾತುಗಳು ಕೇಳಿಸಲಿಲ್ಲವೆ? ಅಂತಃಕರಣವು ಸತ್ತು ಹೋಯಿತೇ ?

ದ್ರೋಣ:— ನಿಶ್ಚಯ! ಅನ್ನದಾತೃವಿನ ಅನ್ನದ ಭಾರದಿಂದ ಅದು ನಿರ್ಜೀವವಾಗಿದೆ!

ಉತ್ತರಾ:— ಮಾತಾಡು-ಮಾತಾಡು ಯಾರು ನೀನು? ನನ್ನ ಪಂಚ ಪ್ರಾಣಗಳು ನನ್ನ ಪ್ರಾಣೇಶ್ವರನ ಪ್ರಾಣವನ್ನು ರಕ್ಷಣೆ ಮಾಡುತ್ತಿ-ರಲು, ಇಂತಹ ಅಕಾಲದಲ್ಲಿಯೇ ಬರುವಂತಹ ದುಷ್ಟಧೈರ್ಯವನ್ನು ಮಾಡಿದಂಥ ದುರಾತ್ಮನು, ಯಾರು ನೀನು!

ದ್ರೋಣ:— ನಿನ್ನ ಪಂಚಪ್ರಾಣಗಳಿಗೆ ಕೊಳ್ಳಿಹಚ್ಚಿ ನಿನ್ನ ಪ್ರಾಣೇಶ್ವರನ ಪ್ರಾಣದ ಮೇಲೆ ವಿಶ್ವಾಸಘಾತದ ಪಾಶವನ್ನು ಪಸರಿಸಿದಂತಹ ದುರಾತ್ಮನು, ಪಾಪಿಯು, ನಾನೇ, ಅವನು! (ಸ್ವ) ಈ ದ್ರೋಣನ ನಿರ್ಜೀವ ಕಠೋರವಾದ ಮನಸ್ಸೃಷ್ಟಿಯಲ್ಲಿ ಕುಸುಮಗಳು ಕಲ್ಲಾಗಿ ಹೋದವು! ತೇಜಸ್ವೀ ರತ್ನಗಳು ಸುಟ್ಟು ಇದ್ದಲಿಯಾದವು!

ಉತ್ತರಾ:— ಪಾತಕಿಯೇ, ನನ್ನ ಪತಿದೇವನ ಪ್ರಾಣದ ಮೇಲೆ ಕಪಟತನ ದಿಂದ ಮೋಸ ಮಾಡಿದ ವಿಶ್ವಾಸಘಾತಕಿಯೇ-ನೀನು-ನೀನು !

ದ್ರೋಣ:— (ಸ್ವ) ನಿಶ್ಚಯ. ಈ ದ್ರೋಣನು ದುರಾತ್ಮನು-ವಿಶ್ವಾಸ ಘಾತಕಿಯು. ಕೊಲೆಪಾತಕಿಯು !

ಉತ್ತರಾ:— ಮಾತಾಡು! ಮಾತಾಡು! ಈ ಉತ್ತರೆಯು ಯಾವ ಜನ್ಮ ದಲ್ಲಿ ನಿನಗೆ, ಘೋರ ಅಪರಾಧ ಮಾಡಿದ್ದಳೆಂದು, ನಿನ್ನ ದುಷ್ಟ ವೈರತ್ವವನ್ನು ಸಾಧಿಸಿಕೊಂಡೆ! (ತಲೆಬಡಿದುಕೊಂಡು) ನನ್ನ ಸೌಭಾಗ್ಯ ವನ್ನು, ಸಂಸಾರಸೌಖ್ಯವನ್ನು, ಕಾಲಿನಿಂದ ತುಳಿದು, ಹೊಟ್ಟೆಯಲ್ಲಿ ಉರಿಯನ್ನು ಹಾಕಿದೆ! ಮಾತಾಡು ಕಾಳಕೇತುವೇ ಮಾತಾಡು! ನನ್ನ ಸಂಸಾರಸೌಖ್ಯದ ಸೂರ್ಯನು ಇನ್ನೂ ಉದಯವಾಗುವ ಪೂರ್ವದಲ್ಲಿಯೇ, ಹೊಂಚು ಹಾಕಿ, ಅಕಾಲದಲ್ಲಿಯೇ ಹೇಗೆ ಅವ ನನ್ನು ಗ್ರಾಸಿಸಿದೆ! ಪ್ರೀತಿಯ ದಂಪತಿಗಳ ಜೀವಿತ ಸರ್ವಸ್ವವನ್ನು ಹಾಳು ಮಾಡಿ, ನೀನು ಜೀವಂತವಾಗಿರುವೆಯಾ! ಕೇಳು ದುರಾತ್ಮಾ ಶೋಕದಿಂದ ವಿದಾರಣವಾದ ಅಂತಃಕರಣದಿಂದ ನಾನು ನಿನಗೆ ಕೊಡುವ ಶಾಪವನ್ನು ಚನ್ನಾಗಿ ಕೇಳು!

ದ್ರೋಣ:— (ಸದ್ಗದಿತ ಕಂಠದಿಂದ) ಶಾಂತಳಾಗು ಹೇ ಪುಣ್ಯದೇವತೆಯೇ ಶಾಂತಳಾಗು. ನನ್ನ ಸರ್ವತಪಶ್ಚರ್ಯದ ಮತ್ತು ಅನಂತ ಜನ್ಮಗಳ ಪುಣ್ಯವನ್ನೂ ನಾನು ನಿನ್ನ ಚರಣಕ್ಕೆ ಅರ್ಪಿಸುವೆನು. ಆದರೆ ದೇವತೆಯೇ ಶಾಪವನ್ನು ಕೊಡಬೇಡ! ನನ್ನ ಪರಾಕ್ರಮದ ಅಹಂಕಾರವು ಬ್ರಹ್ಮಚರ್ಯದ ಪ್ರತಿಷ್ಠೆಯು ನಿನ್ನ ಪವಿತ್ರ ಶೀಲತೇಜದ ಮುಂದೆ ತಲೆಬಾಗಿಸಿತು. ಕೊಡಬೇಡಾ! ಶಾಪವನ್ನು ಕೊಡಬೇಡಾ! ಶಾಂತಳಾಗು! ಅಖಿಲ ಬ್ರಹ್ಮಾಂಡವನ್ನೇ ತಲ್ಲಣಿಸುವಂಥ ಪರಾಕ್ರಮವು ಈ ಕೈಯಲ್ಲಿದೆ! ತಪಸ್ಸಿನ ದಿವ್ಯ ಶಕ್ತಿಯಿಂದ ಅನಂತ ವಿಶ್ವಗಳನ್ನು ಒಂದೇ ಕಟಾಕ್ಷದಿಂದ ದಹಿಸಿಬಿಡುವಂತಹ ಸಾಮರ್ಥ್ಯವು ಈ ಕಣ್ಣುಗಳಲ್ಲಿವೆ! ಬೇಕಾದಂತಹ ದೈವಶಕ್ತಿಯನ್ನು ಕೂಡಾ ನಾನು ಲಕ್ಷಿಸಲಿಲ್ಲ. ಆದರೆ ದೇವತೆಯೇ, ನಿನ್ನ ಶಾಪಕ್ಕೆ, ದಿವ್ಯಶಕ್ತಿಯುಳ್ಳ ಒಬ್ಬ ಸತಿಯ ಶಾಪಕ್ಕೆ ಭಯಪಟ್ಟಿರುವೆನು! ಶಾಂತಳಾಗು! ಶಾಂತಳಾಗು!

ಉತ್ತರಾ:— ಶಾಂತವಾಗಲೆ, ಹೇಗೆ ಶಾಂತವಾಗಲಿ! ನನ್ನ ಸೌಭಾಗ್ಯ ಮಂದಿರಕ್ಕೆ ಕೊಳ್ಳಿಹಚ್ಚುವದಕ್ಕೆ ನೀನೇ ಕಾರಣೀಭೂತನಾಗಿರುವೆ. ರಾಕ್ಷಸಾ, ನನ್ನ ಸೌಭಾಗ್ಯಸೂರ್ಯನನ್ನು ನುಂಗಿ ನನ್ನನ್ನು ವೈಧವ್ಯದ ಕತ್ತಲೆಯಲ್ಲಿ ನೂಕಿದೆ! ಕೇಳು ನನ್ನ ಶಾಪವನ್ನು....

ದ್ರೋಣ:— ತಾಳು, ಉತ್ತರೆಯೆ ತಾಳು. ಈ ದುರಾತ್ಮನು ನಿಜವಾಗಿಯೂ ಶಾಪಕ್ಕೆ ಧಣಿಯಾಗಿರುವನು. ಆದರೆ ಪಾಪಕ್ಕೆ ಮಾತ್ರ ಖಂಡಿತವಾಗಿಯೂ ಅಲ್ಲ! ಕೌರವರ ಕಪಟಬುದ್ಧಿಗೆ ನನ್ನ ಸರ್ವಸ್ವವನ್ನು ಅರ್ಪಿಸಿದ್ದರಿಂದಲೆ—

ಉತ್ತರಾ:— ಕೌರವರ ಕಪಟ ಬುದ್ಧಿಗೆ ನೀನು ಆಳಾದೆಯಲ್ಲವೆ? ಕೌರವರ ಅನ್ನವನ್ನು ಸೇವಿಸಿದ್ದರಿಂದ, ಧರ್ಮವನ್ನು ಮರೆತು ಇಂಥ ಅಧರ್ಮವನ್ನು ಮಾಡಿದೆಯಲ್ಲವೇ? ಹಾಗಾದರೆ ನೀನು ಮತ್ತು ಕೌರವನು ಪಾಪದ ಧಣಿಯರು! ಶಾಪಕ್ಕೆ ಪಾತ್ರರು! ಕೇಳು ನನ್ನ ಶಾಪವನ್ನು

ಕೌರವನ ಕುಲವು ಸಮೂಲ ನಾಶವಾಗುವದು, ಮತ್ತೆ ಇಂತಹ ಕಪಟಬುದ್ಧಿಯ ಪಿಶಾಚಿಗಳ ಸೇವಕನಾಗಿರುವ ನಿನಗೆ ಕೂಡ ಕೊನೆಗೆ ಕಪಟತನಕ್ಕೆ ಬಿದ್ದು ಘೋರ ಮರಣವು ಬರುವದು. ಪತಿವ್ರತೆಯ ಪ್ರೀತಿಯ ಸಂಸಾರವನ್ನು ಹಾಳು ಮಾಡಿದಂಥಾ ಪಾಪೀ ರಾಜರ ಸಿಂಹಾಸನವು ಧೂಳಿಗೀಡಾಗುವದೇ ಖಂಡಿತವು. ಕೇಳಿದೆಯಾ ನನ್ನ ಶಾಪವನ್ನು! ನಡೆ ಹೊರಟು ಹೋಗು! (ಹೋಗಹತ್ತುವಳು)

ದ್ರೋಣ:— ಉತ್ತರೆಯೇ! ದೇವತೆಯೇ ಈ ದ್ರೋಣನಿಗೆ ಎಂತಹ ಭಯಂಕರ ಶಾಪಕೊಟ್ಟೆ! (ಹಣೆ ಬಡಿದುಕೊಳ್ಳುವನು)

ಉತ್ತರಾ:— ಯಾರು ? ಯಾರು ತಾವು ? ದ್ರೋಣಾಚಾರ್ಯರೇ ! (ಎಚ್ಚರಿಕೆಯಾಗುವಳು)

ದ್ರೋಣ:— ಹೌದು ನಿನ್ನ ಶಾಪಕ್ಕೆ ಪಾತ್ರನಾದವನು ನಾನೆ! ಮಹಾ ಪಾತಕಿಯಾದ ದ್ರೋಣನು.

ಉತ್ತರಾ:— (ಕಾಲು ಹಿಡಿದು) ಕ್ಷಮಿಸಿರಿ! ಆಚಾರ್ಯರೆ ಕ್ಷಮಿಸಿರಿ. ಭ್ರಮಿಷ್ಟೆಯಾದ ಹುಡುಗೆಯ ಅಪರಾಧವನ್ನು ಕ್ಷಮಿಸಿರಿ. ಶೋಕದಿಂದ ಎಚ್ಚರವಿಲ್ಲದಾಯಿತು. ಹೊಟ್ಟೆಯುರಿಯಿತು. ಸೌಭಾಗ್ಯಕ್ಕೆ ಸಿಡಿಲು ಬಡಿಯಿತು. ಆಚಾರ್ಯರೇ! ಶೋಕಸಾಗರದಲ್ಲಿ ಮುಳುಗಿದಂಥ ಈ ಉತ್ತರೆಯ ಅಪರಾಧವನ್ನು ಕೃಪಾದೃಷ್ಟಿಯಿಂದ ನೋಡಿರಿ! (ಅಳುವಳು)

ದ್ರೋಣ:— ಉತ್ತರೆ ಏಳು. ನಾನೆ ನಿನ್ನ ಪಾದಕ್ಕೆ ಎರಗಿ ಕ್ಷಮೆಯನ್ನು ಬೇಡಬೇಕು, ಅಷ್ಟು ನಿನ್ನ ಯೋಗ್ಯತೆಯು ದೊಡ್ಡದಿದೆ. ಶಾಪವನ್ನು ನೀನು ಕೊಡಲಿಲ್ಲ, ಆದರೆ ನಿನ್ನ ಹೃದಯದಲ್ಲಿಯ ನ್ಯಾಯಪಕ್ಷಪಾತಿಯಾದ ಪರಮಾತ್ಮನ ಶಕ್ತಿಯೇ ಶಾಪವನ್ನು ಕೊಟ್ಟಿತು! ಉತ್ತರೆ, ನಿನ್ನದೇನು ದೋಷವಿಲ್ಲ! ನನ್ನದೇ ದೋಷವು.

(ಒಳಗೆ:- ಬಾಲೆ ಉತ್ತರೆ ಎಲ್ಲಿರುವೆ)

ಉತ್ತರಾ:— ಯಾರದು! ಅತ್ತೆಯವರೇ ಬಂದರು.

ದ್ರೋಣ:— ಯಾರು ಸುಭದ್ರಾದೇವಿಯೆ. ವಾತ್ಸಲ್ಯದ ಗಂಗೆಯೇ ಬಂದಳು. ಹೂ ದ್ರೋಣನೆ ನಿನ್ನ ಕಾಲಿಗೆ ಬುದ್ಧೀ ಹೇಳು. ಯಾವ ಸ್ಥಳದಲ್ಲಿ ಉತ್ತರೆ ಸುಭದ್ರೆಯಂತಹ ಪುಣ್ಯದೇವತೆಯರು ಸಂಚರಿಸುತ್ತಿರುವರೊ ಅಲ್ಲಿ ನಿನ್ನ ಪಾಪೀ ಕಠೋರ ಅಂತಃಕರಣದ ನೆರಳು ಸಹ ಬೀಳಗೊಡಬೇಡ. ನಡೆ ಹೊರಡು ! (ಹೋಗುವನು)

ಸುಭದ್ರಾ;— ಉತ್ತರೆ ದೀನಬಾಲೆ ಇಲ್ಲಿ ಒಬ್ಬಳೇ ಏನು ಮಾಡುವಿಯಮ್ಮಾ?

ಉತ್ತರಾ:— ನನ್ನ ಪ್ರಾಣಕಾಂತನ ಪ್ರಾಣಕ್ಕೆ ನನ್ನ ಜೀವದ ಜೋಪು ಮಾಡುತ್ತೇನೆ!

ಸುಭದ್ರಾ:— ಯಾರು, ಯಾರದು ನನ್ನ ಮುದ್ದು ಕುಮಾರನೇ, ನನ್ನ ಪ್ರಾಣವೇ, ಏಳು ಏಳು, ಮಗುವೆ ಈ ನಿನ್ನ ಪ್ರೀತಿಯ ತಾಯಿಯ ಆ ಕ್ರೋಶವು ನಿನಗೆ ಕೇಳಿಸುವದಿಲ್ಲವೆ. ಈ ಆಕ್ರೋಶದಿಂದ ಯಾವತ್ತು ಬ್ರಹ್ಮಾಂಡವೆ ಜಾಗ್ರತವಾದೀತು! ಮಗು ನಿನ್ನ ದೀರ್ಘ ನಿದ್ರೆಯು ಇನ್ನೂ ಪೂರೈಸಲಿಲ್ಲವೆ. ಒಮ್ಮೆ ನಿನ್ನ ನೇತ್ರಕಮಲಗಳನ್ನು ತೆರೆದು ನಿನ್ನ ತಾಯಿಯನ್ನು ನೋಡುವದಿಲ್ಲವೆ. ಅಭಿಮನ್ಯು—

(ಕೃಷ್ಣನ ಪ್ರವೇಶ)

ಕೃಷ್ಣ:— ಹುಚ್ಚೀ ಸುಭದ್ರೆ ನೀನಿದನ್ನೇನು ಮಾಡುವೆ? ಉತ್ತರೆಗೆ ಧೈರ್ಯ ಹೇಳುವದನ್ನು ಬಿಟ್ಟು (ಅರ್ಜುನ ಮೊದಲಾದವರು ಬರುವರು)

ಸುಭದ್ರಾ:— ಕೃಷ್ಣಾ, ಕೃಷ್ಣಾ, ಇದೋ ನೋಡು, ನನ್ನ ಆಶೆಯ ಆನಂದದ ಚಂದ್ರನು ದಿಕ್ಕಿಲ್ಲದೆ ಹೇಗೆ ಬಿದ್ದಿರುವನು. ನನ್ನ ಮುದ್ದಿನ ಅರಗಿಣಿಯನ್ನು ಕಾಲನು ಸೆಳೆದುಕೊಂಡು ಹೋದನು. ನನ್ನ ಮುದ್ದು ಕುಮಾರನು ಅರಮನೆಯಿಂದ ಹೊರಗೆ ಕಾಲಿಟ್ಟವನಲ್ಲ, ಅದೆ ಈ ದಿವಸ ಈ ರಣಾಂಗಣದಲ್ಲಿ ಹೇಗೆ ದೀನನಾಗಿ ಬಿದ್ದಿರುವನು. ಸಮರದ ಪ್ರಥಮೋತ್ಸಾಹವನ್ನು ಪೂರೈಸುವದಕ್ಕೋಸ್ಕರ ನನ್ನ

ಪ್ರೀಯ ಕುಮಾರನು ತನ್ನ ಆಯುಷ್ಯದ ಪೂರ್ಣಾಹುತಿಯನ್ನು ಸಮರ್ಪಿಸಿದನು. ಅಯ್ಯೋ ದೇವರೆ–ದೇವರೆ (ಮೂರ್ಛೆಯಾಗುವಳು)

ಉತ್ತರಾ:— ಅತ್ತಿಯವರೆ, ಅತ್ತಿಯವರೆ, (ಅವಳೂ ಬೀಳುವಳು)

೫ನೆಯ ಪ್ರಸಂಗ

ಮೇಘನಾದನು ರೋಷದಿಂದ ಪ್ರವೇಶಿಸುತ್ತಾನೆ)

ಮೇಘ:— ಅಪಮಾನವು ! ಈ ಮೇಘನಾದ ಅಪಮಾನವು ! ಅದೂ ಹೆಂಡತಿಯಿಂದ ಅಪಮಾನವು ! ಅದರಲ್ಲಿಯೂ ಲಗ್ನದ ಹೆಂಡತಿಯಿಂದ !! ಇದೇನು ಸಾಮಾನ್ಯ ಅಪಮಾನವೇ ! ಪುರುಷರು ಈ ಹೆಂಗಸರ ಒದೆಗಳನ್ನು ತಿನ್ನುವದಕ್ಕೆ ಭೂಮಿಯಲ್ಲಿ ಜನ್ಮಿಸಿರುವನೇ ಹೇಗೆ ? ಅಲ್ಲ, ಖಂಡಿತವಾಗಿಯೂ ಅಲ್ಲ ! ವೀರರಾದ ನಾವು ಒದೆಗಳನ್ನು ತಿನ್ನೋಣ, ಆದರೆ ಹೊರಗಿನ ಹೆಂಗಸರಿಂದ ತಿನ್ನೋಣ ! ಲಗ್ನದ ಹೆಂಡತಿಯಿಂದ ಒದೆಗಳನ್ನು ತಿನ್ನುವದೆಂದರೆ ಸಾಮಾನ್ಯ ವಿಷಯವಾಯಿತೆ ? ಪುರುಷವೇಷದಿಂದ ಅವಳು ನನ್ನ ದುರ್ದಶೆಯನ್ನು ಪೂರಾ ಮಾಡಿದಳು. ಹೀಗೆಯೇ ಹೋಗಿ ಅವಳ ಕುತ್ತಿಗೆಯನ್ನು ಒತ್ತಿ ಪ್ರಾಣ ತಕ್ಕೊಳ್ಳಲೆ, ಅಥವಾ ನನ್ನ ಕುತ್ತಿಗೆಯನ್ನು ಒತ್ತಿಕೊಂಡು ಪ್ರಾಣಬಿಡಲೆ. ಬೇಡ ! ನಾನು ಪುರುಷನಿರುವೆನು ಹೆಂಡತಿಯ ಕುತ್ತಿಗೆಯನ್ನು ಒತ್ತಿ ಪ್ರಾಣತಕ್ಕೊಳ್ಳುವದೆ ನನಗೆ ಭೂಷಣವು. ಈ ದಿವಸ ಉತ್ತರಾರಾಣಿಯವರು ಸತಿಹೋಗತಕ್ಕವರಿರುವರು. ನಮ್ಮವಳಿಗಾದರೂ ಸತಿ ಹೋಗುವದಕ್ಕೆ ಹೇಳುವೆನು. ಗಂಡನು ಜೀವಂತನಿದ್ದಾಗಲೇ ಸತಿಹೋಗುವದೆ ಹೆಂಗಸರಿಗೆ ಪುರುಷಾರ್ಥವು ! ನನ್ನ ಕಣ್ಣೆದುರಿಗೇ ಹೆಂಡತಿಯು ಸತಿ ಹೋಗುವದಿಲ್ಲವೆಂದರೆ ಸಾಮಾನ್ಯ ಮಾತೆ ! ಅವಳದೇನು ಪ್ರಾಜ್ಞೆಯು ? ನಾನು ಅವಳ ಗಂಡನಲ್ಲವೆ ? ಅಪಮಾನವು ಅತ್ಯಂತ ಅಪಮಾನವು.

(ಪರದೆಯು ಏಳುವದು. ಉತ್ತರೆಯು ಸತಿಹೋಗುವ ನೋಟ)

ಉತ್ತರಾ:— ಅತ್ತೆಯುವರೆ ನನ್ನ ಪವಿತ್ರ ಇಚ್ಛೆಗೆ ನೀವು ಅಡ್ಡ ಬರಬೇಡಿ. ಪತಿಯು ಹೋದ ಮೇಲೆ ಸತಿಯು ಒಂದು ಕ್ಷಣವಾದರೂ ಜೀವಿಸಿರುವದು ಶಕ್ಯವೆ ? ನಾನು ಅವರ ಸಹಚಾರಿಣಿಯುಂದಮೇಲೆ ನಾನೂ ಅವರ ಜೊತೆಯುಲ್ಲಿಯೇ ಈ ಅಗ್ನಿಯ ಶಯ್ಯೆಯ ಮೇಲೆ ಕೊನೆಯ ನಿದ್ರೆ ಹೋಗುವದು ಧರ್ಮವಲ್ಲವೆ ? ನಾನು ತಮಗೆ ಶರೆಗೊಡ್ಡಿ ಬೇಡುವೆನು. ನನ್ನನ್ನು ತಡೆಯಬೇಡಿ.

ಸುಭದ್ರಾ:— ಬಾಲೆ ನನ್ನ ಸುಕುಮಾರನು ನನ್ನನ್ನು ಬಿಟ್ಟು ಹೋದನು. ನೀನೂ ಬಿಟ್ಟು ಹೋಗುವಿಯಾ ಇನ್ನು ಮೇಲೆ ಈ ಸುಭದ್ರೆಯು ಯಾರ ಮುಖವನ್ನು ನೋಡಿ ಸಮಾಧಾನ ಮಾಡಿಕೊಳ್ಳಬೇಕು ?

ಉತ್ತರಾ:— ಸತಿ ಹೋಗುವ ನನ್ನ ನಿಶ್ಚಯುವು ಕದಲಲಾರದು. ಈ ಸೂರ್ಯ ಚಂದ್ರರು ಕದಲಬಹುದು? ಆದರೆ ನನ್ನ ನಿಶ್ಚಯುವು ಕದಲಲಾರದು. ಸುವಾಸಿನಿಯರೆ, ಸಹಗಮನದ ಸೌಭಾಗ್ಯ ಮಂಗಲವಧಾನವನ್ನು ಬೇಗನೆ ಪೂರೈಸಿರಿ (ಯಾವತ್ತರಿಗೂ ನಮಸ್ಕರಿಸಿ ಚಿತೆಗೆ ಪ್ರದಕ್ಷಿಣೆ ಹಾಕುವಳು) ಅತ್ತೆಯುವರೆ, ಬರುವೆನು. ಭಾವನವರೇ ಬರುವೆನು. ಇಂದಿನವರೆಗೆ ಈ ಚಿಕ್ಕ ಬಾಲೆಯಿಂದ ತಿಳಿಯದೆ ಏನೇ ಅಪರಾಧವಾಗಿದ್ದರೆ ಕ್ಷಮಿಸಿ. ನಾನು ಬರುವೆನು.

ಕೃಷ್ಣ:— ತಾಳು. ತಾಳು. ಉತ್ತರೆಯೇ ತಾಳು ತಾಳು. ನಿನಗೆ ಸತಿ ಹೋಗುವದಕ್ಕೆ ಅಧಿಕಾರವಿಲ್ಲ. ತಿರುಗು ಹಿಂದಕ್ಕೆ।

ಉತ್ತರಾ:— ಏನು ಈ ದುರ್ದೈವಿ ಉತ್ತರೆಗೆ ಸತಿ ಹೋಗುವದಕ್ಕೆ ಕೂಡ ಅಧಿಕಾರವಿಲ್ಲವೆ ? ಪತಿಯು ಹೋದ ಮೇಲೆ ಉಳಿದ ಆಯುಷ್ಯವನ್ನು ವೈಧವ್ಯದ ಕಠೋರ ಶಿಕ್ಷೆಯಲ್ಲಿಯೇ ಕಳೆಯಬೇಕೆ ? ಬ್ರಹ್ಮನು ಹಾಗೆಯೆ ಬರೆದಿರುವನೇ ? ಆಗಲಿ ತಮ್ಮ ಆಜ್ಞೆಯು.

ಕೃಷ್ಣ:— ಇದು ನನ್ನ ಆಜ್ಞೆಯಲ್ಲ. ಧರ್ಮಾಜ್ಞೆಯೇ ಹಾಗಿರುವದು, ನೀನು ಗರ್ಭವತಿ. ಗರ್ಭವತಿಗೆ ಸಹಗಮನಮಾಡುವದಕ್ಕೆ ಧರ್ಮದಿಂದ ಅಧಿಕಾರವಿಲ್ಲ.

ಉತ್ತರಾ:— ಈ ಉತ್ತರೆಯು ಧರ್ಮದ ಆಜ್ಞೆಯನ್ನು ಮನ್ನಿಸುವದಿಲ್ಲ. ಸತಿಗೆ ಪತಿಯೇ ದೇವರು, ಧರ್ಮವು ?

ಕೃಷ್ಣ:— ಹಾಗಾದರೆ ಪತಿಪರಮೇಶ್ವರನ ಆಜ್ಞೆಯನ್ನಾದರೂ ಮನ್ನಿಸುವೆಯಲ್ಲವೇ ?

ಉತ್ತರಾ:— ಪತಿಯಾಜ್ಞೆಯನ್ನು ಪಾಲಿಸದವಳು ಸತಿಯೇ ? ಈ ಉತ್ತರೆಯು ಅಖಂಡವಾದ ಪತಿಸೇವೆಗೋಸ್ಕರವೆ ಸ್ವರ್ಗಕ್ಕೆ ನಡೆದಿರುವಳು.

ಕೃಷ್ಣ:— ಹಾಗಾದರೆ ಮೊದಲು ಈ ಅಶರೀರವಾಣಿಯನ್ನು ಕೇಳು.

(ಆಕಾಶವಾಣಿ:— ಉತ್ತರೆ ನೀನು ಸತಿಹೋಗಬೇಡ ನಿನ್ನ ಹೊಟ್ಟೆಯಲ್ಲಿ ಪರೀಕ್ಷಿತನು ಜನ್ಮಿಸುವನು. ಅವನು ಭರತಖಂಡದ ಸಾಮ್ರಾಟನಾಗುವನು.)

ಉತ್ತರಾ:— ಯಾವದು! ಯಾರದೀ ಅಶರೀರವಾಣಿಯು!!

ಕೃಷ್ಣ:— ಅನ್ಯದಾರದು, ಇದೊ ನೋಡು. ಸಚ್ಚಿದಾನಂದ ಪರಮಾತ್ಮನ ಮೂರ್ತಿಯು ಸ್ವರೂಪವು (ಟ್ರಾನ್ಸಫರ_ ಚತುರ್ಭುಜ ಪರಮಾತ್ಮನ ದರ್ಶನ.)

ಕೃಷ್ಣ:— ಉತ್ತರೆ ಅದೋ ನೋಡು. ಅಭಿಮನ್ಯುವು ಹೇಗೆ ವೈಕುಂಠಕ್ಕೆ ತೆರಳಿರುವನು. (ಟ್ರಾನ್ಸಫರ)

ತೃತೀಯಾಂಕಂ ಸಂಪೂರ್ಣಂ

ನಾಲ್ಕನೆಯ ಅಂಕ.

ಒಂಭನೆಯ ಪ್ರಸಂಗ

(ಸ್ಥಳ:— ಜಂಗಲರಸ್ತೆ. ಜಯದ್ರಥನು ಬರುವನು.)

ಜಯ:— ಹೇ ಸೂರ್ಯನಾರಾಯಣಾ, ಈ ದಿವಸ ಜಯದ್ರಥನಿಗೆ ಆವನ ಆಯುಷ್ಯದ ಕೊನೆಯ ದಿವಸವನ್ನು ತೋರಿಸುವಿಯಾ! ಸೂರ್ಯಾಸ್ತವಾಗುವ ಪೂರ್ವದಲ್ಲಿ ಜಯದ್ರಥನ ವಧ, ಆದಾಗದಿದ್ದರೆ ಅಗ್ನಿ ಪ್ರವೇಶ; ಈ ಅರ್ಜುನನ ಘೋರ ಪ್ರತಿಜ್ಞೆಯನ್ನು ಕೇಳಿದಾಗಿನಿಂದ ಆ ಶಬ್ದಗಳು ನನ್ನ ಕಿವಿಗಳಲ್ಲಿ ಒಂದೇ ಸಮನೆ ಘುಮಿಘುಮಿಸುತ್ತಿರುವವು. ಹೇ ಭೂಮಾತೆ ನೀನಾದರೂ ಸೂರ್ಯಾಸ್ತವಾಗುವತನಕ ಈ ಜಯದ್ರಥನನ್ನು ನಿನ್ನ ವಿಶಾಲವಾದ ಉದರದಲ್ಲಿ ಬಚ್ಚಿಟ್ಟುಕೊ. ಧನುರ್ಧಾರೀ ಪಾರ್ಥನು ತನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸದೆ ಎಂದೂ ಬಿಡಲಾರನು. ನಾನು ಮಾಡಲಿ! ಎಲ್ಲಿ ಅಡಗಲಿ! ಏನೂ ತೋಚದಾಗಿದೆ. ಆಕಾಶಮಾರ್ಗದಲ್ಲಿ ಸೂರ್ಯನು ಒಂದೊಂದೆ ಹೆಜ್ಜೆಯನ್ನಿಡುತ್ತ ತನ್ನ ಹಾದಿಯನ್ನು ಹೇಗೆ ಸಾಗಿಸುತ್ತಿರುವನೋ ಹಾಗೆ, ಹಾಗೆ, ಭಯಗ್ರಸ್ತವಾದ ನನ್ನ ಜೀವವು ಹಿಂದೆ ಹಿಂದೆ ಸರಿಯುತ್ತಿರುವದು. ಎಲೈ ಸೂರ್ಯನೇ ಇದೇ ಕ್ಷಣಕ್ಕೆ ನೀನು ಅಸ್ತಂಗತನಾಗಿ- ಆದರೆ ನನ್ನಗೋಸ್ಕರವಾಗಿ ಇಷ್ಟು ಅವಸರದಿಂದ ಪ್ರವಾಸವನ್ನು ಮುಗಿಸುವದು ನಿನಗಾದರೂ ಅಗತ್ಯವೇನಿದೆ! ದುರ್ದೈವಿ ಜಯದ್ರಥನೆ! ಇಂದಿಗೆ ನಿನ್ನ ನೂರು ವರುಷಗಳು ಮುಗಿದವು. ಸೂರ್ಯಾಸ್ತದೊಳಗಾಗಿ ನಿನಗೆ ಈ ಜಗತ್ತು ಶೂನ್ಯವಾಗುವದು!

(ದುರ್ಯೋಧನ_ ಶಕುನಿ, ಮೊದಲಾದವರು ಬರುವರು)

ದುರ್ಯೋ:— ಏನು? ಶೂನ್ಯವಾಗುವದೆ? ಜಯದ್ರಥಾ ಅರ್ಜುನನ ಪ್ರತಿಜ್ಞೆಯ ವಿಷಯವಾಗಿ ನೀನೇಕೆ ಇಷ್ಟು ಭಯಗ್ರಸ್ತನಾಗಿರುವೆ? ನಿನ್ನ ಸಂರಕ್ಷಣೆಗೋಸುಗ ಈ ದುರ್ಯೋಧನನು ನಿನ್ನ ಬೆಂಗಾವಲಿಗೆ ನಡಕಟ್ಟಿ ಸಿದ್ಧನಾಗಿರುವನು.

ದುಶ್ಯಾ:— ಅಲ್ಲದೆ ನಾವು ಕೂಡಾ ಸಿದ್ಧರಿರುವೆವು. ಇಂತಹ ಸಹಸ್ರ ಅರ್ಜುನರು ಬಂದರೂ ನಾವೇನು ಭಯಪಡಬೇಕಾಗಿಲ್ಲ.

ಜಯ:— ನನ್ನ ಅಂತ್ಯಕಾಲಕ್ಕೆ ಯಾರಿಂದಲೂ ನನಗೆ ಸಹಾಯ ದೊರೆಯುವದು ಅಶಕ್ಯವೆಂದು, ನನ್ನ ಮನಸು ಹೇಳುತ್ತಿರುವದು.

ಶಕುನಿ:— ಹುಚ್ಚಾ, ಸುಮ್ಮ ಸುಮ್ಮನೆ ನೀನು ಇಷ್ಟೇಕೆ ಭಯಪಟ್ಟಿರುವೆ? ಕೌರವರು ಶಸ್ತ್ರವನ್ನು ಬಿಸಾಕಿ, ಕೈಯಲ್ಲಿ ಬಳೆ ಇಟ್ಟಿರುವರೆಂದು ತಿಳಿದಿರುವಿಯಾ ?

ದುಯೋ೯:—ನಿನ್ನ ಪ್ರಾಣರಕ್ಷಣೆಗೋಸ್ಕರ ನಾವು ನಮ್ಮ ಪ್ರಾಣಗಳನ್ನು ಸಹ ವೆಚ್ಚ ಮಾಡುವೆವು. ಏತಕ್ಕೆ ಭಯಪಡುವೆ? ಏನಾದರೊಂದು ಯುಕ್ತಿಯಿಂದ ನಿನ್ನನ್ನು ಬದುಕಿಸಲು ಶಕುನಿಯು ಸಿದ್ಧನಿದ್ದಾನೆ. ಮಾವನೇ ! ಏನಾದರೂ ಯುಕ್ತಿಯನ್ನು ತೆಗೆ !

ಶಕುನಿ:– ಓ. ಹೋ ಯುಕ್ತಿಗೇನು ಕಡಿಮೆ, ಈ ಶಕುನಿಯ ಮೇಧಾ ಶಕ್ತಿಯು ಪ್ರಪಂಚವನ್ನು ಮುಣುಗಿಸುವದು ! ತೇಲಿಸುವದು !! ಒಳ್ಳೇ ಸೊಗಸಾದ ಯುಕ್ತಿಯನ್ನೆ ಹೇಳುವೆನು ಆದರೆ ನಾನು ಹೇಳಿದಂತೆ ನೀನು ನಡೆಯಬೇಕು ಅಷ್ಟೆ.

ಜಯ:— ಇದು ಪ್ರತ್ಯಕ್ಷ ಪ್ರಾಣರಕ್ಷಣೆಯ ಪ್ರಸಂಗವಿರುವದರಿಂದ ನೀವು ಹೇಳಿದಂತೆ ವರ್ತಿಸುವೆನು.

ಶಕುನಿ:— ಕೇಳು ಸೂರ್ಯಾಸ್ತದ ವರೆಗಷ್ಟೆ ಅಲ್ಲದೆ ಅರ್ಜುನನ ಪ್ರತಿಜ್ಞೆಯು ? ಸರಿ ಹಾಗಾದರೆ ಸೂರ್ಯನು ಮುಳುಗುವವರೆಗೆ ಎಲ್ಲಿಯಾದರೂ ಬಂದು ಗುಪ್ತವಾದ ಸ್ಥಳದಲ್ಲಿ ಯಾರಿಗೂ ತಿಳಿಯದಂತೆ ಅಡಗಿಕೊಂಡು ಕೂಡು. ಹೂ– ನಡೆ ಈ ಸಮರಭೂಮಿಯಿಂದ ಬೇಗನೆ ಪಲಾಯನ ಹೇಳು.

ಜಯ:— ಅಡಗಿಕೊಂಡು ಕೂಡಲೆ, ಸಮರಭೂಮಿಯಿಂದ ಓಡಿಹೋಗಲೆ, ಶಕ್ಯವಿಲ್ಲ. ಮರಣಬಂದರೂ ಚಿಂತೆಯಿಲ್ಲ ಇಂತಹ ಹೇಡಿತನಕ್ಕೆ ಈ ಜಯದ್ರಥನ ಮನಸ್ಸು ಎಂದೂ ಒಪ್ಪಲಾರದು.

ಶಕುನಿ:— ನಿಮ್ಮಂಥ ದುರಭಿಮಾನಿಗಳು ಇಲ್ಲಿಯೇ--ಇಲ್ಲಿಯೇ- ತಪ್ಪಿ ವಿರಿ. ನಿಮಗೆ ಬುದ್ಧಿಯಿಲ್ಲ, ಎರಡನೆಯವರ ಬುದ್ಧಿವಾದವನ್ನೂ ಕೇಳುವ ಹಾಗಿಲ್ಲ. ನಿಮ್ಮಂಥಾ ವಿಚಾರಶೂನ್ಯರ ಮುಂದೆ ನಮ್ಮ ಮತಿಯೇ ಕುಂಠಿತವಾಗುವದು. ಅದೋ ಆಚಾರ್ಯರೇ ಬಂದರು. ಅವರೇನು ಹೇಳುವರೋ ಕೇಳು.

ದ್ರೋಣ:— ವಿಚಾರಿಸು! ಏನು ವಿಚಾರಿಸುವದು? ಇನ್ನು ಮೇಲೆ ಈ ದ್ರೋಣಾಚಾರ್ಯರನ್ನು ಜಯದ್ರಥನು ಏನು ವಿಚಾರಿಸುವನು?

ದುರ್ಯೋಧನ:— ಅರ್ಜುನನ ಪ್ರತಿಜ್ಞೆಯು ವಿಷಯ ಆಚಾರ್ಯರಿಗೆ ತಿಳಿದೆ ಇದೆ. ಆ ವಿಷಯವಾಗಿ ....

ದ್ರೋಣ:— ಆ ವಿಷಯವಾಗಿ ಈಗ ನನ್ನನ್ನೇಕೆ ವಿಚಾರಿಸುವದು? ಜಯದ್ರಥನನ್ನು ಮುಂದೆ ಮಾಡಿ ನೀವು ಅಭಿಮನ್ಯುವಿನನ್ನು ಸಂಹರಿಸಿದಿರಿ. ತಿಳಿದು ತಿಳಿದು, ಅನ್ಯಾಯದಿಂದ ಆ ಮಗುವನ್ನು ಸ್ವರ್ಗಕ್ಕೆ ಅಟ್ಟಿದಿರಿ! ಆಗ್ಗ ಈ ದ್ರೋಣಾಚಾರ್ಯರನ್ನು ವಿಚಾರಿಸಿದಿರಾ? ಮಾಡಿದ ಕರ್ಮವನ್ನು ಅನುಭೋಗಿಸಲೇ ಬೇಕು! ಕುಮಾರ ಅಭಿಮನ್ಯುವಿನ ಸಂಹಾರದ ಬಗ್ಗೆ ಸೇಡುತಕ್ಕೊಳ್ಳುವ ಪ್ರತಿಜ್ಞೆಯನ್ನು ಅವನ ಪರಾಕ್ರಮಶಾಲಿಯಾದ ಪಿತನು ಮಾಡಿದ್ದರೆ, ಅದೇನು ಆಶ್ಚರ್ಯದ ಸಂಗತಿಯಲ್ಲ. ಆ ವೀರ ಬಾಲಕನನ್ನು ಮೋಸಮಾಡಿ ಅಮಾನುಷ ರೀತಿಯಿಂದ ನೀವು ಸಂಹರಿಸಿದಾಗಲೆ ಅಣುರೇಣುಗಳಲ್ಲಿರುವ ಯಾವತ್ತು ಪರಮಾತ್ಮಶಕ್ತಿಯು ನಿಮ್ಮ ಸೇಡು ತೀರಿಸಿಕೊಳ್ಳುವದಕ್ಕೆ ಸಜ್ಜಾಗಿ ಕುಳಿತಿತು. ಅಭಿಮನ್ಯುವಿನ ಅನ್ಯಾಯದ ಮರಣದಿಂದ ನಿಮ್ಮ ಪಾಪಕೂಪವು ತುಂಬಿತು! ಈಗ ಆಚಾರ್ಯರನ್ನು ವಿಚಾರಿಸು! ಈ ದ್ರೋಣಾಚಾರ್ಯನು ಜಯದ್ರಥನ ಪ್ರಾಣರಕ್ಷಣೆಯನಲುವಾಗಿ ಯಾವ ಸಾಹಸವನ್ನೂ ಮಾಡಲಾರನು! ಜಯದ್ರಥಾ ನೀನು ನಿಜವಾಗಿ ವೀರನಾಗಿದ್ದರೆ ರಣಾಂಗಣದಲ್ಲಿ ಅರ್ಜುನನ ಕೂಡ ಯುದ್ಧಮಾಡಿ ನಿನ್ನ ಪರಾಕ್ರಮದಿಂದಲೆ ಪ್ರಾಣರಕ್ಷಣೆಮಾಡಿಕೊ! ಇದೇ ನಿನಗೆ ಈ ದ್ರೋಣಾಚಾರ್ಯರ ನಿದಾರ್ಕ್ಷಿಣ್ಯವಾದ ಹೇಳುವಿಕೆ!

ದುರ್ಯೋಧ:— ಆಚಾರ್ಯರೆ! ಈ ನಿಮ್ಮ ನಿರ್ದಾಕ್ಷಿಣ್ಯವಾದ ಹೇಳುವಿಕೆಯಿಂದ ನೀವು ಪಾಂಡವರ ಪರಾಕ್ರಮದ ಕೌತುಕವನ್ನು ಮಾಡುತ್ತಿರುವಿರೆಂದು ಸ್ಪಷ್ಟವಾಗಿ ಸಿದ್ಧವಾಗುವದು. ಪಾಂಡವರು ಅತ್ಯಾಚಾರಿಗಳಾಗಿ ಅವರು ನಮ್ಮ ಕೌರವರ ಕುಲವನ್ನು ನಿರ್ಮೂಲವಾಗಿ ಸಂಹರಿಸಿದರೂ ಕೂಡ, ಆಚಾರ್ಯರ ಕೃತಘ್ನ ಅಂತಃಕರಣಕ್ಕೆ ಅದು ಸಂತೋಷವೇ!

ದ್ರೋಣ:— ಪಾಂಡವರು ಅತ್ಯಾಚಾರಿಗಳಲ್ಲ. ನೀವು ಅತ್ಯಾಚಾರಿಗಳು. ಕಪಟದ್ಯೂತದ ದುಷ್ಟವಿಚಾರವನ್ನು ಸೂಚಿಸಿಕೊಟ್ಟ ಈ ಶಕುನಿಯು ಅತ್ಯಾಚಾರಿಯು! ತುಂಬಿದ ಸಭೆಯಲ್ಲಿ ದ್ರೌಪತಿಯ ವಸ್ತ್ರಕ್ಕೆ ಕೈಹಾಕಿ ಅವಳನ್ನು ನಗ್ನ ಮಾಡುವದಕ್ಕೆ ಯತ್ನಿಸಿದ ಈ ದುಶ್ಯಾಸನನು ಅತ್ಯಾಚಾರಿಯು!! ಕಪಟತನದಿಂದ ಪಾಂಡವರ ರಾಜ್ಯವನ್ನು ಅಪಹರಿಸಿ ಅವರನ್ನು ವನವಾಸಕ್ಕೆ ಅಟ್ಟಿದಂಥ ಈ ದುರ್ಯೋಧನನು ಅತ್ಯಾಚಾರಿಯು! ಅತ್ಯಾಚಾರಿಗಳು ಪಾಂಡವರಲ್ಲ! ಧರ್ಮಾತ್ಮರು ನ್ಯಾಯ ಪಕ್ಷಪಾತಿಗಳು!!

ಶಕುನಿ:— ಸಾಕು, ಸಾಕು, ಆಚಾರ್ಯರೆ ನಿಮ್ಮ ಪಕ್ಷಪಾತ ಬುದ್ಧಿಯು ಅನರ್ಥವನ್ನು ಮಾಡಿತು. ದುರ್ಯೋಧನಾ, ನಡೆ. ಇಲ್ಲಿ ಹೆಚ್ಚು ಕಾಲ ನಿಂತು ನಮ್ಮ ಕೈಯಿಂದಲೇ ನಮ್ಮ ಶೋಭೆಯನ್ನು ಮಾಡಿಕೊಳ್ಳುವದರಲ್ಲಿ ಏನೂ ಪುರುಷಾರ್ಥವಿಲ್ಲ. (ಹೋಗುವರು)

ದ್ರೋಣ:— ಅಧರ್ಮದ ಅಡ್ಡದಾರಿಯನ್ನು ತುಳಿಯುವ ನಿಮ್ಮಂತಹ ದುಷ್ಟಬುದ್ಧಿಗಳಾದ ವೀರರಿಗೆ ಜಯವಾದರೂ ಹೇಗೆ ದೊರೆಯುವದು? (ನೋಡಿ) ಅಹಹಾ, ಪಾರ್ಥನ ರಥವು ಸಮರ ಭೂಮಿಯ ಸರಹದ್ದಿನ ಮೇಲೆ ಬಂದು ನಿಂತಿತು. ಸೂರ್ಯನ ರಥಕ್ಕಿಂತಲೂ ಅಧಿಕವಾದ ವೇಗದಿಂದ ಶ್ರೀಕೃಷ್ಣನು ಬಹು ಕೌಶಲ್ಯದಿಂದ ನಡೆಸುತ್ತಿರುವನು. ಅರ್ಜುನ ಮತ್ತು ಕೃಷ್ಣರೆಂದರೆ ನರನಾರಾಯಣನ ಅವತಾರವು. ಧನುರ್ಧಾರೀ ಪಾರ್ಥನೆ ನೀನೆ ಧನ್ಯನು, ಧನ್ಯನು. ಭಗವಾನ ಕೃಷ್ಣಪರಮಾತ್ಮನೇ ನಿನಗೆ ಸಾರಥಿಯಾಗಿರುವನು.

ಅಹಹಾ ಈ ನರನಾರಾಯಣರ ಮಂಗಲ ದರ್ಶನದಿಂದ ಯಾರ ಮನಸು ಶಾಂತವಾಗಿ ಆನಂದವನ್ನು ಹೊಂದಲಾರದು?

ರಾಗ ಭೀಮಪಲಾಸ, ತಾಳ ತ್ರಿವಟ

ಜ್ಞಾನಶರಧಿ ನಿಗಮಾಗಮ ಗೋಚರ ॥ ಪಲ್ಲ ॥ ದೀನ
ಭಕ್ತಪಾಲ । ಕರುಣಾಲವಾಲ ॥ ಅನ-ಪಲ್ಲ ॥ ಜೀವ
ದೊಡೆಯ ನಿವ । ದೇವವರೇಣ್ಯ ॥ ಪಾವನಾಂಗ ಪರ
ಮಾತ್ಮ ಪರಾತ್ಪರ ॥ ೧ ॥

ಅದೋ ಅರ್ಜುನನ ರಥವು ಇತ್ತಕಡೆಗೆ ಬರುತ್ತಿರುವದು.

(ಅರ್ಜುನನ ರಥವು ಬರುವದು ಕೃಷ್ಣನು ರಥವನ್ನು ನಡೆಸುತ್ತಿರುವನು)

ಅರ್ಜುನ:— (ಕೆಳಗಿಳಿದು) ಶ್ರೀಕೃಷ್ಣಾ ರಥವನ್ನು ಇಲ್ಲಿಯೇ ನಿಲ್ಲಿಸು. ಇಲ್ಲಿಂದಲೇ ಕೌರವಸೇನೆಯ ಸಮಾಚಾರ ತಕ್ಕೊಳ್ಳುವ ದಕ್ಕೆ ನನಗೆ ಬಹಳ ಅನುಕೂಲವಾಗುವದು.

ಕೃಷ್ಣ:— (ವಿನೋದದಿಂದ)ಇದೋ ಮಹಾರಾಜರ ಅಪ್ಪಣೆಯಂತೆ ರಥವನ್ನು ನಿಲ್ಲಿಸುವೆನು.

ಅರ್ಜುನ:— ಕೃಷ್ಣಾ ಇದು ವಿನೋದಕ್ಕೆ ಸಮಯವೇ?

ಕೃಷ್ಣ:— ಪಾರ್ಥಾ, ಮಧ್ಯ ಮಧ್ಯ ಸ್ವಲ್ಪ ವಿನೋದವು ಬೇಕು. ಅದು ನಿನಗೆ ಆನಂದಕೊಡುವದು. ಅಲ್ಲದೆ ನಿನ್ನಂಥ ವೀರನಮನಸು ರಣ ಸಂಗ್ರಾಮದಲ್ಲಿ ಕೂಡಾ ಶಾಂತ ಹಾಗೂ ಸಮತೋಲ ವಿರಬೇಕು. ಎಂತಹ ಪ್ರಸಂಗಬಂದರೂ ಎದೆಗುಂದದಿರುವದು ಶೂರ ಅಂತಃಕರ ಣದ ಲಕ್ಷಣವು !

ಅರ್ಜುನ:— ಶ್ರೀಕೃಷ್ಣ ಇನ್ನುಮೇಲೆ ಎಂತಹ ಶಾಂತತೆಯು ! ಎಲ್ಲಿಯ ಸಮತೋಲವೃತ್ತಿಯು ? ಆ ಜಯದ್ರಥನನ್ನು ಸಂಹರಿಸಿ ನನ್ನ ಅಭಿ ಮನ್ಯುವಿನ ಕಪಟವಧೆಯ ಸೇಡುತೀರಿಸಿಕೊಳ್ಳುವದಕ್ಕೆ ನನ್ನ ಮನಸ್ಸು ಹಾತೊರೆಯುತ್ತಿರುವದು ಜಯದ್ರಥನ ಪಾಪಾತ್ಮವು

ರೌರವನರಕದಲ್ಲಿ ಕೊಳೆಯುತ್ತ ಬೀಳಬೇಕು. ಅದೇ ನನ್ನ ಆತ್ಮಕ್ಕೆ ನಿಜವಾದ ಶಾಂತಿಯು.

ರಾಗ ಮಾಲಕಂಸ, ತಾಳ ತ್ರಿವಟ

ಆ ದುರುಳ ಸಿಂಧುನೃಪನ ವಧಿಸುವ ॥ ಪಲ್ಲ । ಅಧಮ
ಘೋರ ಭೀಕರ ದುರಿತರಾಶಿ ॥ ಅನುಪಲ್ಲ ॥ ನೀಚಾತ್ಮಾ
ಸುತವಿರೋಧಿಯಾಗಿಹ ॥ ಕಡಿದಿಡುವೆ ಪಾತಕಿಯಾ
ಕುಲಾರಿ ॥ ೧ ॥

ಕೃಷ್ಣ:— ಪ್ರತಿಯೊಬ್ಬ ಪಾಪಾತ್ಮನಿಗೋಸ್ಕರ ರೌರವನರಕದ ರಾಜ್ಯ ವನ್ನು ಕಾದಿಡಲ್ಪಟ್ಟಿರುವದು. ಯಾವನೊಬ್ಬನು, ತನ್ನ ಒಳಿತು,ಹೀನ, ಕರ್ಮಗಳಿಂದಲೇ ಬಾಳುವನು ಇಲ್ಲವೆ ಸಾಯುವನು. ಅರ್ಜುನಾ! ಕೌರವರ ಪಾಪಕರ್ಮದ ಕತ್ತಲೆಯು ಪಸರಿಸುತ್ತ ನಡೆದದ್ದ ರಿಂದಲೇ ಪಾಂಡವರ ಪುಣ್ಯ ಕರ್ಮದ ಪ್ರಕಾಶವು ವೃದ್ಧಿಯನ್ನು ಹೊಂದುತ್ತ ನಡೆದಿರುವದು. ನಿನ್ನ ಪ್ರತಿಜ್ಞೆಯು ಪೂರ್ಣವಾಗು ವದೇ ಖಂಡಿತವೆಂದು ನಿನಗೆ ಆತ್ಮವಿಶ್ವಾಸವಿರುವದಲ್ಲವೇ ?

ಅರ್ಜುನ:— ಹೌದು, ಹಾಗೆ ನನಗೆ ದೃಢವಾದ ಆತ್ಮವಿಶ್ವಾಸವಿದೆ

ಕೃಷ್ಣ:— ಸರಿ ಹಾಗಾದರೆ, ಅದೇ ಆತ್ಮವಿಶ್ವಾಸವೇ ನಿನ್ನ ಯಶಕ್ಕೆ ಶುಭ ಚಿನ್ಹವು. ಕೈಕೊಂಡ ಕಾರ್ಯದ ಅರ್ಧಕ್ಕಿಂತಲೂ ಅಧಿಕವಾದ ಯಶಸ್ಸು ಆತ್ಮವಿಶ್ವಾಸದ ಮೇಲೆ ಅವಲಂಬಿಸಿರುವದು.

ಅರ್ಜುನ:— (ಧನುಷ್ಯಕ್ಕೆ ಬಾಣ ಸಂಧಾನಮಾಡಿ) ಇದೋ ನೋಡು ಪ್ರತಿಜ್ಞೆ ಯನ್ನು ಪೂರ್ತಿಗೊಳಿಸುವ ಉದ್ಯೋಗಕ್ಕೆ ಈಗಲೆ ತೊಡಗುತ್ತೇನೆ.

ದುರ್ಯೋ: (ಒಳಗಿಂದ) ಅರ್ಜುನಾ ಇನ್ನು ಮೇಲೆ ಪ್ರತಿಜ್ಞೆಯ ಜತೆಗೆ ನಿನ್ನ ಪರಾಕ್ರಮದ ಪೊಳ್ಳು ಅಹಂಕಾರವನ್ನು ಮರೆತುಬಿಡು ?

ಅರ್ಜುನ:— ಯಾರು ಮಾತಾಡಿದರು ಇಂತಹ ಸೊಕ್ಕಿನ ಶಬ್ದಗಳನ್ನು ಯಾರು ! ದುರ್ಯೋಧನನೇ ! ದುರ್ಯೋಧನಾ ಇದೊ ನೋಡು ನಿನ್ನ ದರ್ಪೋಕ್ತಿಗೆ ಪ್ರಾಯಶ್ಚಿತ್ತವನ್ನು ಕೊಡುತ್ತೇನೆ.

ಕೃಷ್ಣ:— ಹಾ–ಹಾ– ಅರ್ಜುನಾ ಯಾರ ಮೇಲೆ ಬಾಣ ಪ್ರಯೋಗ ಮಾಡುವೆ? ಜಯದ್ರಥನ ಸಂಹಾರಕ್ಕೆ ಪ್ರತಿಜ್ಞೆಮಾಡಿದ್ದು ಮರೆ ತಿಯೋ ಹೇಗೆ? ಬೇರೊಬ್ಬನನ್ನು ಬಾಣಕ್ಕೆ ಬಲಿತಕೊಳ್ಳುವಿಯಾ?

ಅರ್ಜುನ:— ಸಡೆ ಹಾಗಾದರೆ ನನ್ನ ಬಾಣದ ಬಲೆಯನ್ನು ನಾನು ಶೋಧಿ ಸಬೇಕು. (ಹೋಗಹತ್ತುನನು)

ದ್ರೋಣ:— (ಒಳಗಣಿಂದ) ಅರ್ಜುನಾ ನಿಲ್ಲು, ಗುರುಪೂಜೆಯ ವಿಸಹ ಈ ದ್ರೋಣಾಚಾರ್ಯರು ನಿನಗೆ ಒಂದು ಹೆಜ್ಜೆಯನ್ನು ಕೂಡ ಮುಂದಿ ಡಗೊಡಲಾರರು.

ಅರ್ಜುನ:— ಆಚಾರ್ಯರೆ ಈ ಶಿಷ್ಯನ ಪೂಜೆಯನ್ನು ಸ್ವೀಕರಿಸಬೇಕು. (ಬಾಣಬಿಡುವನು)

ಕೃಷ್ಣ:— ಭಾಪು. ಭಾಪು. ಅರ್ಜುನಾ ಭಾಪು. ಒಂದೇ ಬಾಣದಿಂದ ಆಚಾ ರ್ಯರ ರಥವನ್ನು ಮುರಿದು ಹಾಕಿದೆ. ಅವರ ಕವಚವನ್ನು ತುಂಡರಿ ಸಿದೆ. ನಡೆಯಿನ್ನು, ನಿನ್ನ ಯಶದ ಮಾರ್ಗವು ನಿರಾತಂಕವಾಯಿತು.

(ರಥದಲ್ಲಿ ಕುಳಿತು ಹೋಗುವರು)

ದ್ರೋಣ:— ಭಾಪು ಅರ್ಜುನಾ ಭಾಪು. ನೀನೇ ನನ್ನ ನಿಜವಾದ ಶಿಷ್ಯನು ಒಂದೇ ಬಾಣದಿಂದ ನಿನ್ನ ಪರಾಕ್ರಮವನ್ನು ತೋರಿಸಿದೆ. ತ್ರಿಲೋಕ ದಲ್ಲಿ ಪ್ರಖ್ಯಾತವಾದ ನಿನ್ನ ಬಿರುದುಗಳು ಸಾರ್ಥಕವೆಂದು ಬೇಕಾದ ವರು ಹೇಳಬಹುದು. ಶಿಷ್ಯನ ಸನ್ಮಾನವೆ ಗುರವಿನದು.

(ಪರದೆಯಲ್ಲಿ ರಣದುಂದುಭಿಗಳು ಮೊಳಗುವವು)

ಎಲಾ ಇದೇನು ಚಮತ್ಕಾರವು! ಅರ್ಜುನನು ಹಾ ಹಾ ಅನ್ನುವ ಷ್ಟರಲ್ಲಿ ಯುದ್ಧವನ್ನು ಪ್ರಾರಂಭಿಸಿ ನೂರಾರು ವೀರರನ್ನು ನೆಲಕ್ಕು ರುಳಿಸಿದನು. ಕೆಲವರನ್ನು ಓಡಿಸಿದನು. ಎಲ್ಲ ಕಡೆಯಲ್ಲಿಯೂ ಯುದ್ಧದ ಬೇಗೆಯು ಹಬ್ಬಿತು. ಆದರೆ ಜಯದ್ರಥನೆಲ್ಲಿ? ಅವನೇ ಕಾಣು ವದಿಲ್ಲವಲ್ಲಾ? (ಹೋಗುವನು)

ಜಯ:— (ಪ್ರವೇಶಿಸಿ) ಆಚಾರ್ಯರೇ! ಆಚಾರ್ಯರೆ! ಈ ಸಮಯದಲ್ಲಿ

ನನ್ನನ್ನು ಯಾರಾದರೂ ರಕ್ಷಿಸಿರಿ, ಅರ್ಜುನನು ಕೆರಳಿದ ಸಿಂಹದಂತೆ ನನ್ನ ಬೆನ್ನಟ್ಟಿರುವನು ಎಲ್ಲಿ ಹೋಗಲಿ! ಎಲ್ಲಿ ಅಡಗಲಿ! ಜಯ ದ್ರಥಾ ಓಡು, ಓಡು, ನಿನ್ನ ಪ್ರಾಣಾಂತಕನು ನಿನ್ನ ಹಿಂದೆಯೇ ಬಂದನು. ಓಡು, ಓಡು, (ಹೋಗುವನು)

ಅರ್ಜುನ:— (ಪ್ರವೇಶಿಸಿ)ಎಲ್ಲಿರುವನು! ಎಲ್ಲಿರುವನು! ಆ ಕುಲಾಧಮನು? ಷಂಢಾ ಎಲ್ಲಿ ಓಡಿ ಹೋಗುವೆ? ಸಪ್ತಸಮುದ್ರದ ಅಡಿಯಲ್ಲಿ ಅಡಗಿ ಕೊಂಡರೂ ಅಲ್ಲಿಯೇ ನಿನಗೆ ಕಂಠಸ್ನಾನ ಹಾಕುವೆನು, ಗಿರಿಕಂದರ ಗಳಲ್ಲಿ ಅಡಗಿಕೊಂಡರೂ, ಅಲ್ಲಿಯೇ ನಿನ್ನ ಪಾಪೀ ದೇಹವನ್ನು ಸೀಳಿ ಕಾಡು ಮೃಗಗಳಿಗೆ ಸಂತರ್ಪಣೆ ಮಾಡಿಸುವೆನು. ಮೂರು ಲೋಕ ವನ್ನೇ ತಲೆಕೆಳಗೆ ಮಾಡಿ, ನಿನ್ನನ್ನು ಶೋಧಿಸಿ, ನನ್ನ ಘೋರ ಪ್ರತಿ ಜ್ಞೆಯನ್ನು ಪೂರ್ಣಗೊಳಿಸುವೆನು.

ಕೃಷ್ಣ:— ಕಾಲಚಕ್ರದ ಕ್ರೂರಗತಿಯು ಎಷ್ಟು ವಿಚಿತ್ರವಾಗಿದೆ. ಎಲ್ಲಿಯ ವರೆಗೆ ದುರ್ಯೋಧನ ಜಯದ್ರಥ ನಂತಹ ದುರಾತ್ಮರು ಧರ್ಮದ, ನ್ಯಾಯದ ಅಖಿಲ ಮಾನವ ಜಾತಿಯ, ಮಹಾ ಶತ್ರುಗಳು ಭೂತಲ ದಮೇಲೆ ಸ್ವೇಚ್ಛಾಚಾರಿಗಳಾಗಿ ಕುಣಿಯುತ್ತಿರುವರೋ ಅಲ್ಲಿಯ ವರೆಗೆ, ಧರ್ಮ, ಮತ್ತು ಶಾಂತತೆಯ ಸಾಮ್ರಾಜ್ಯವು ಸ್ಥಾಪಿತವಾ ಗುವದಾದರೂ ಹೇಗೆ? ದುರ್ಯೋಧನಾ, ಕಪಟಕಾರಸ್ಥಾನದಿಂದ ನಿನ್ನಂತಹ ಬಲಾತ್ಕಾರದ ರಾಜಕರ್ತರು ತಮ್ಮ ಅಘಟಿತ ಸತ್ತೆಯನ್ನು ಪ್ರಸ್ಥಾಪಿಸಿರುವರು. ಆದರೆ ಕಾಲದ ವಕ್ರಗತಿಯಿಂದ ಸಿಂಹಾಸನ ಸಹಿತವಾಗಿ ಆ ಸಾಮ್ರಾಟರು ಯಾವಾಗ್ಗೆ ಧೂಳಿಗೀಡಾಗುವರೋ ಅದರ ಚಿನ್ಹವು ಕೂಡಾ ನಿನ್ನ ಮದಾಂಧ ವೃತ್ತಿಗೆ ತಿಳಿಯಲಾರದು. ಅವಿವೇಕಿ ಅಧಮರ ಅಧಃಪಾತವು ಬಹುಜಾಗ್ರತೆಯಾಗಿ ಆಗುವದು. ದಿವಸದ ಮೂರನೇ ಪ್ರಹರವು ಏರಿಹೋಯಿತಂದರೂ, ಜಯ ದಥ್ರನು ಅರ್ಜುನನ ಬಾಣದ ಬಲೆಗೆ ಶಿಕ್ಕಲಿಲ್ಲವಲ್ಲಾ. ಸೂರ್ಯನು ಮುಳುಗುವವರೆಗೆ ಆ ದುಷ್ಟನು ಹೀಗೆ ಅಡಗಿಕೊಂಡು ಕುಳಿತರೆ ಧನಂಜಯನ ಪ್ರತಿಜ್ಞೆಯು ಪಾರುಗಾಣುವ ಬಗೆ ಹೇಗೆ! ಕಾಲ

ಬಂದಾಗ್ಗೆ ಪಾರ್ಥನ ಮರ್ಯಾದೆಯನ್ನು ನಾನೇ ಕಾಯಬೇಕಲ್ಲವೆ ? ಕಪಟದ ಸಂಹಾರವನ್ನು ಕಪಟದಿಂದಲೇ ಮಾಡಬೇಕು. ಶಠಂ ಪ್ರತಿ ಶಾಠ್ಯಂ ಇದೇ ನ್ಯಾಯವು. ಸುದರ್ಶನಾ, ಈ ದಿವಸ ನಿನ್ನ ಸಹಾಯದಿಂದ ಜಯದ್ರಥನ ವಧೆಯ ಕಾರ್ಯಭಾಗವನ್ನು ಕೊನೆಗಾಣಿಸಬೇಕಾಗುವದು. ಯಾಕಂದರೆ—

ರಾಗ ಭೈರವಿ, ತಾಳ ತ್ರಿವಟ

ಮಮ ಪಾಂಡವಾ । ಪ್ರಿಯಾ ॥ ಪಲ್ಲ ॥ ಸುಖಶ್ರೇಯಾ ।
ಧೇಯಾಮದಿಯಾ ॥ ಅನುಪಲ್ಲ ॥ ಕೃತಮಾಯೆಯಾ ।
ಕೃತಿಯಿಂದ ನಾನು ॥ ಅತಿ ಪ್ರೇಮದೀ ತೋರ್ಪೆ ಪಾರ್ಥ
ವಿಜಯಾ ॥ ೧ ॥

(ಕೃಷ್ಣನು ಹೋಗುವನು. ಮೇಘನಾದ, ಸೌದಾಮಿನಿಯರು ಲಗುಬಗೆಯಿಂದ ಬರುವರು)

ಸೌದಾ:— ಅದೋ ನೋಡಿರಿ, ಶ್ರೀಕೃಷ್ಣಮಹಾರಾಜರೆ ಹೋಗುತ್ತಿರುವರು. ಅವರನ್ನೇ ವಿಚಾರಿಸಿ.

ಮೇಘ:— ಅವರನ್ನೇನು ವಿಚಾರಿಸುವದು ? ಬುದ್ಧಿವಂತನಾದವನು, ಸ್ತ್ರೀಯರ ವಿಷಯವಾಗಿ ಶ್ರೀಕೃಷ್ಣನ ವಿಚಾರವನ್ನು ಕೇಳಬಾರದೆಂದು ನನ್ನ ಸಿದ್ಧಾಂತವಿದೆ.

ಸೌದಾ:— ಅದೇಕೆ ?

ಮೇಘ:— ಏನೇ ಶ್ರೀಕೃಷ್ಣನ ವಿಚಿತ್ರವಾದ ಚರಿತ್ರವು, ಸರ್ವ ಜಗತ್ತಿಗೇ ಗೊತ್ತಾಗಿ ಹೋಗಿದೆ. ಸ್ತ್ರೀಯರ ವಿಷಯವಾಗಿ ಶ್ರೀಕೃಷ್ಣನ ಬುದ್ಧಿಯು ಬಾಲ್ಯದಲ್ಲಿಯೇ ತಾಳಗೆಟ್ಟಿತ್ತೆಂಬುವದನ್ನು ಒಬ್ಬ ಸಣ್ಣ ಹುಡುಗನು ಕೂಡ ಹೇಳಬಹುದು. ಗೋಕುಲದಲ್ಲಿಯ ಯಾವತ್ತು ಗೋಪಿಯರ ಮೇಲೆ ಈ ಬಹದ್ದರನು ತನ್ನ ಮೋಹಜಾಲವನ್ನು ಪಸರಿಸಿದನು.

ಸೌದಾ:— ಏನು ಮಾತಾಡುವಿರಿ, ಆತನ ಚರಿತ್ರದ ರಹಸ್ಯವು ನಿಮ್ಮಂಥ ಭ್ರಷ್ಟ ಮತಿಗಳಿಗೆ ಹೇಗೆ ಗೊತ್ತಾದೀತು.

ಮೋಘ:— ಏನೇ, ಆತನ ಚರಿತ್ರವು ಇಷ್ಟು ರಹಸ್ಯಪೂರ್ಣವಿರುವದರಿಂದಲೇ, ಜಗತ್ತಿನ ಪಂಡಿತರು ಆತನ ವಿಷಯವಾಗಿ ದೊಡ್ಡ ದೊಡ್ಡ ಗ್ರಂಥಗಳನ್ನು ಬರೆದಿರಬಹುದೆಂದು ನನ್ನ ಸಿದ್ಧಾಂತವಿದೆ.

ಸೌದಾ:— ಸರ್ವ ಜಗತ್ತು, ಅಲ್ಲದೆ ಧರ್ಮರಾಜರೂ ಕೂಡಾ, ಶ್ರೀಕೃಷ್ಣನನ್ನು ಪ್ರತ್ಯಕ್ಷ ಪರಮಾತ್ಮನ ಅವತಾರವೆಂದೇ ಮನ್ನಿಸುವರು.

ಮೋಘ:— ಇದೆ-ಇದೆ-ನಾನಾದರೂ ಹೇಳುವದು, ಮನುಷ್ಯನಿಗೆ ದೊಡ್ಡಸ್ತಿಕೆಯು ದೊರೆತು, ಅವನು ಒಮ್ಮೆ ದೊಡ್ಡ ಮನುಷ್ಯರ ಪಂಕ್ತಿಯಲ್ಲಿ ಸೇರಿದನೆಂದರೆ, ಈ ಕುರುಡ ಜಗತ್ತು ಅವನ ಜತೆಗೆ ಕುಣಿಯುವದಕ್ಕೆ ಪ್ರಾರಂಭವೆ! ಪೂರ್ವದ ಕುಲಶೀಲ ಸಂಬಂಧವನ್ನು ಚಿಕಿತ್ಸಕ ಬುದ್ಧಿಯಿಂದ ಚರ್ಚೆ ಮಾಡತಕ್ಕ ನನ್ನಂತಹ ಮಹಾತ್ಮರು ಭೂಮಿಯಲ್ಲಿ ಅವತರಿಸುವದು ಅಪರೂಪವೆಂದು ನನ್ನ ಸಿದ್ಧಾಂತವಿದೆ.

ಸೌದಾ:— ಸಾಕು-ಸಾಕು-ಕಂಡದ್ದೇ ಆದೆ ನಿಮ್ಮ ಬುದ್ಧಿಯು. ಶ್ರೀಕೃಷ್ಣನ ನಿಂದೆಯು ನರಕವನ್ನು ಯಾರ ಮುಂದೆಯಾದರೂ ಹೀಗೆ ವಾಂತಿ ಮಾಡಿಕೊಂಡರೆ, ನಿಮ್ಮ ನಾಲಿಗೆಯು ಕಳಚಿ ಬಿದ್ದೀತು.

ಮೋಘ:— ಆದರೆ ಪ್ರಿಯೇ ಒಂದರ ವಿಷಯದಲ್ಲಿ ಮಾತ್ರ ಶ್ರೀಕೃಷ್ಣನ ಸ್ತುತಿಯನ್ನು ಎಷ್ಟು ಮಾಡಿದರೂ ಕಡಿಮೆಯೇ; ಯಾಕಂದರೆ ಒಬ್ಬ ಲಗ್ನದ ಹೆಂಡತಿಯನ್ನು ಸಂಭಾಳಿಸುವದು ನನ್ನಂತಹ ರುಸ್ತುಮನಿಗೆ ಪ್ರಾಣಸಂಕಟಕ್ಕೆ ಬಂದಿದೆ. ಆದರೆ ಶ್ರೀಕೃಷ್ಣನು ಹದಿನಾರು ಸಾವಿರ ಒಂದು ನೂರಾ ಎಂಟು ಲಗ್ನದ ಹೆಂಡಂದಿರ ಆ ಪ್ರಚಂಡ ತ್ರಾಟಿಕೆಯರ ತಂಡವನ್ನು ಹೇಗೆ ಕುಶಲತೆಯಿಂದ ಕೂಡಿಕೊಂಡು ಹೋಗಿರುವನೋ ಅದು ಅವನಿಗೇ ಗೊತ್ತು. ಈ ವಿಷಯದಲ್ಲಿ ಮಾತ್ರ ಶ್ರೀಕೃಷ್ಣನು ದೊಡ್ಡ ಕರ್ಮವೀರನೆಂದು ನನ್ನ ಸಿದ್ಧಾಂತವು. ಅದು ಹೋಗಲಿ ಬಿಡು. ಕೃಷ್ಣಲೀಲೆಯ ಪುರಾಣವನ್ನು ಮುಗಿಸಿ, ನನ್ನ ಶೌರ್ಯಶಾಸ್ತ್ರವನ್ನು ಸ್ವಲ್ಪ ನಿನಗೆ ತಿಳಿಸಿ ಹೇಳಬೇಕಾಗಿದೆ! ಈ ನಿನ್ನ ವೀರ ಪತಿಯು ರಣಾಂಗಣದಲ್ಲಿ ಮಡಿದರೆ, ನೀನು ಸತಿಹೋಗತಕ್ಕವಳೇ-ಇಲ್ಲವೆ-ಹೇಳು ಮೊದಲು-

ಸೌದಾ:— ಇದೇನು ಹೀಗೆ ವಿಚಾರಿಸುವಿರಿ. ನಿಮಗೆ ಹುಚ್ಚು ಹಿಡಿಯಿತೋ ಹೇಗೆ?

ಮೋಘ:— ಏನು ಇದು ಹುಚ್ಚುತನವೆ, ಛೆ ಅಲ್ಲಾ, ಇದು ಬುದ್ಧಿವಂತಿಕೆಯು ಶಾಸ್ತ್ರವು. "ಗಂಡನು ಮಡಿದ ಕೂಡಲೆ ಹೆಂಡತಿಯು ಸತಿ ಹೋಗಲೇ ಬೇಕು" ಹೀಗೆ ಆರ್ಯ ಸನಾತನ ಧರ್ಮದ ಆಜ್ಞೆಯಿರುವದು; ಇದೇ ನಿಜವಾದ ಪತಿವ್ರತಾ ಧರ್ಮವು! ಈಗ ನೀನು ಹೀಗೆ ತಿಳಿ ವಿಧವಾ—

ಸೌದಾ:— ಏನು, ನಾನು ವಿಧವೆಯೋ ನೀವು ಇನ್ನೂ ಜೀವಂತರಾಗಿರುವಿರಿ; ಅಂದ ಮೇಲೆ ನಾನು ಹೇಗೆ ವಿಧವೆಯು.

ಮೋಘ:— ನನ್ನ ಮಾತಿನ ಅಭಿಪ್ರಾಯವು ಹೇಗೆ, ನೀನು ವಿಧವೆಯಾಗಿ ಜೀವಂತವಿದ್ದರೆ, ಧರ್ಮದ ಕೊಲೆಯಾಗಿ, ಪಾತಿವೃತ್ಯದ ಅಪಮಾನವಾದೀತೆಂದು ನನ್ನ ಸಿದ್ಧಾಂತ!

ಸೌದಾ:— ಅಂದರೆ ವಿಧವೆಯರಿಗೆ ಜಗತ್ತಿನಲ್ಲಿ ಬಾಳಲಿಕ್ಕೂ ಅಧಿಕಾರವಿಲ್ಲವೆ?

ಮೋಘ:— ಲೇಶಮಾತ್ರವು ಇಲ್ಲ. ಜಗತ್ತಿನ ಸರ್ವ ಆಪತ್ತಿಯ ಮೂಲಕಾರಣವೆಂದರೆ,ಈ ವಿಧವೆಯರು! ಅದರಲ್ಲಿಯೂ ತರುಣ ಬಾಲವಿಧವೆಯರು ಮುಖ್ಯರು! ಬಾಲ ವಿಧವೆಯರು ನಷ್ಟರಾಗಿ ವಿಶ್ವದ ಪಾಪಭಾರವು ಎಂದು ಹಗುರಾಗುವದೋ ಅದೇ ಸುದಿನವು! ಇದೇ ನನ್ನ ಸಿದ್ಧಾಂತವು.

ಸೌದಾ:— ಸುಮ್ಮ ಸುಮ್ಮನೆ ಹೀಗೆ ಬೊಗಳಬೇಡಿ. ಬೇಕೆಂತಲೇ ಬಾಲವಿಧವೆಯರ ಮೇಲೆ ಏನಾದರೂ ಕಲ್ಪಿಸಿಕೊಂಡು ಪಾಪದ ಭಾರವನ್ನು ಅವರ ತಲೆಯ ಮೇಲೆ ಹೊರಿಸಬೇಡಿ.

ಮೋಘ:— ನಿನಗೆ ತಲೆಯೇ ಇಲ್ಲ. ತರುಣ ವಿಧವಾ ಎಂದರೆ–

ಸೌದಾ:— ನಿಮ್ಮ ತಲೆಬುರುಡೆ! ಶುದ್ಧ ಶೀಲವುಳ್ಳ ಸ್ತ್ರೀಜಾತಿಯ ನಿಂದೆಯನ್ನು ಮಾಡುವ ನಿಮ್ಮಂತಹ ಪುರುಷರನ್ನು ಜೀವಸಹಿತ

ನುಡಬೇಕು. ನೀವು ಹೀಗೆ ಹೇಳುವಿರಿ ಆದರೆ, ಉತ್ತರಾದೇವಿ ಯವರೂ ಬಾಲವಿಧವೆಯಲ್ಲವೇ, ಅವರನ್ನು ನೋಡಿ ನಿಮ್ಮಂಥವರು ದಿನಾಲು ಅವರ ಚರಣತೀರ್ಥವನ್ನು ತಕ್ಕೊಳ್ಳಬೇಕು. ಅಷ್ಟು ಅವರ ಯೋಗ್ಯತೆಯು ದೊಡ್ಡದಾಗಿದೆ.

ಘೋಷ:— ನಿಯಮಕ್ಕೆ ಅಪವಾದವು ಇದ್ದೇಯಿದೆ. ಮತ್ತು ಅಪವಾದ ದಿಂದಲೇ ನಿಯಮವು ಸಿದ್ಧವಾಗುವದು. ಹೋಗಲಿ ಬಿಡು, ದೊಡ್ಡ ವರ ಮನೆಯಮಾತು, ನಮ್ಮಂತಹ ಬಡವರಿಗೇಕೆಬೇಕು. ಆದರೆ ಮನಸೋಕ್ತವಾಗಿ ಕೆಟ್ಟ ಚಾಳೀ ಮಾಡುವದಕ್ಕೆ ಸಪಿಗಲಿತಿರುವ ಸ್ತ್ರೀಯರು–ಬೇಡಪ್ಪಾ ಈ ಸ್ತ್ರೀಯರನ್ನು ನಂಬುವದೇ ಕಷ್ಟ. ಅದ ರಲ್ಲಿ ನಿನ್ನ ಮೇಲೆಯಂತೂ ಸರ್ವಥಾ ನನ್ನ ವಿಶ್ವಾಸವೇ ಇಲ್ಲ. ಅದ ಕ್ಕೋಸ್ಕರವೇ ಇಷ್ಟೊಂದು ಅಟ್ಟಹಾಸವು. ನಿನ್ನ ಥಳಕು, ಬಡಿ ವಾರ, ಡೌಲು ನನ್ನ ಸೂಕ್ಷ್ಮದೃಷ್ಟಿಗೆ ಕಾಣಿಸುವದಿಲ್ಲವೆಂದು ತಿಳಿ ದಿರುವಿಯಾ? ಅದೇನು ಇಲ್ಲ. ಪ್ರಮಾಣವಾಗಿ ಹೇಳು, ನಾನು ಸತ್ತ ಮೇಲೆ ನೀನು ಸತಿ ಹೋಗುವಿಯಲ್ಲವೆ? ಜಾಗ್ರತಿಯಾಗಿ ಹೇಳು. ಯುದ್ಧಕ್ಕೆ ಹೋಗಲು ನನಗೆ ತಡವಾಗುವದು.

ರಾಗ ಗಾರಾ, ತಾಳ ದಾದರಾ

ವೀರಭಟರ ಬಾಣವೇಗ ಸುಯ್ಯುಸುಯ್ಯನೆ । ಧ್ವನಿಯ
ಕೇಳು ನೀ ॥ ಪಲ್ಲ ॥ ಖಡ ಖಡ ಖಡ ಖಡ್ಗಗಳಾ । ಬಡಿದಾಟಕೆ
ವೈರಿಗಳಾ ॥ ಬಿಡದೆ ಹೃದಯಭೇದವಾಗಿ । ಓಡುತಿಹರು ಸಮರ
ತೊಲಗಿ ॥೧॥

ಸೌದಾ:— ಯಾರಿಗೆ ಭಯ ತೋರಿಸುವಿರಿ. ನಿಮ್ಮ ಪರಾಕ್ರಮದ ಡೌಲು ನಿನ್ನಿನ ಯುದ್ಧದಲ್ಲಿ ಕಂಡದ್ದೇ ಇದೆ.

ಘೋಷ:— (ಸ್ವಗತ) ಬೇಡಪ್ಪಾ ಆ ಪ್ರಸಂಗವು ಸ್ಮರಣಕ್ಕೆ ಬಂದ ಕೂಡಲೇ ಮೈಮೇಲೆ ಮುಳ್ಳುಗಳೇಳುವವು. ಅಪಮಾನದ ಸೇಡು ತಕ್ಕೊಳ್ಳಲೇ ಬೇಕು! (ಪ್ರ) ಹೂ ವಚನಕೊಡು. ಯುದ್ಧಕ್ಕೆ ಹೋಗಲು ಹಾತೊ

ರಿದಂಥ ಈ ವೀರನು ಕೇವಲ ನಿನ್ನ ವಚನದ ಮಾರ್ಗವನ್ನೇ ಕಾದಿರು ವನು. ಈ ದಿವಸ ನಾನು ಯುದ್ಧದಲ್ಲಿ ಸಾಯಬೇಕು. ನೀನು ಸತಿ ಹೋಗಬೇಕು. ಇದೇ ನನ್ನ ಮನಃಪೂರಕವಾದ ಇಚ್ಛೆ. ! ಈ ಸುಯೋಗವು ಕೂಡಿ ಬಂದರೆ, ನನಗೂ ಮತ್ತು ನಿನಗೂ ಇಬ್ಬರಿಗೂ ಸ್ವರ್ಗಪ್ರಾಪ್ತಿಯಾಗುವದೆಂದು ನನ್ನ ಸಿದ್ಧಾಂತವಿದೆ.

ಸೌದಾ:— ಬೆಂಕಿ ಹಚ್ಚಲಿ ನಿಮ್ಮ ಸಿದ್ಧಾಂತಕ್ಕೆ. ಹೂ ತೆಗೆದುಕೊಳ್ಳಿರಿ ವಚನ ವನ್ನು ನೀವು ನಿಜವಾಗಿ ಸತ್ತರೆ, ನಾನು ಸತಿಹೋಗುವೆನು. (ದೊಡ್ಡ ದನಿಯಿಂದ) ಕೇಳಿಸಿತೆ.

ಮೋಘ:— ಭಾಪು ಪ್ರಿಯೆ, ನೀನು ಪತಿವ್ರತೆಯೆಂಬುದು ನನಗೆ ಈಗ ಚನ್ನಾಗಿ ತಿಳಿಯಿತು. ಮನಸ್ಸಿಗೆ ಸಮಾಧಾನವಾಯಿತು. ಗಂಡನು ಮಡಿದ ಕೂಡಲೇ ಪ್ರಾಣ ಬಿಡತಕ್ಕವಳು ನಿಜವಾದ ಆರ್ಯ ಪತಿವ್ರ ತೆಯೆಂದು ನನ್ನ ಸಿದ್ಧಾಂತವು ! ಒಳ್ಳೇದು ನಾನಿನ್ನು ಹೋಗಲೆ.

ಸೌದಾ:— ಸುಖವಾಗಿ ಹೋಗಿರಿ. ಈ ನಿಮ್ಮ ಪ್ರೇತವು ರಣಾಂಗಣಕ್ಕೆ ಹೋಗುವದೇ ನನಗೆ ಬೇಕಾಗಿದೆ.

ಮೋಘ:— (ಮತ್ತೆ ತಿರುಗಿ) ಇದೋ ನಿನಗೆ ಮತ್ತೊಂದು ವಿಷಯ ಹೇಳು ವದನ್ನು ಮರೆತೆ. ಈ ನಿನ್ನ ಕುಂಕುಮವನ್ನು ಹಣೆಯ ತುಂಬ ಒಳ್ಳೇ ದೊಡ್ಡದಾಗಿ ಒಂದು ಮೊಳ ಹಚ್ಚು.

ಸೌದಾ:— ಯಾಕೆ, ಈಗಲೇ ಸತಿಹೋಗಬೇಕೆಂದು ಹೇಳುವಿರೊ ಹೇಗೆ ?

ಮೋಘ:— ಹಾಗಲ್ಲವೇ ಪ್ರಿಯೇ ಗಂಡಸರ ಆಯುಷ್ಯಪ್ರಮಾಣವು, ಹೆಂಗ ಸರ ಕುಂಕುಮದ ಆಕಾರದ ಮೇಲೆಯೇ ಅವಲಂಬಿಸಿದೆ. ಹೋಗಲಿ ಬಿಡು. (ಯೋಚಿಸಿ) ಆ ದೊಡ್ಡ ತಿಲಕವು-ಬೇಡವೇ ಬೇಡ. ಈಗಿರುವ ಸಣ್ಣ ಕುಂಕುಮವನ್ನೇ ಒಳ್ಳೇ ಚನ್ನಾಗಿ ಕೊರೆದು, ಕೊರೆದು, ತೀರಾ ಕಾಣಿಸುವದೋ ಇಲ್ಲವೋ ಹಾಗೆ ಒಂದು ಎಳ್ಳುಕಾಳಷ್ಟು ಮಾಡು; ಅಂದರೆ ನಾನು ಯುದ್ಧದಿಂದ ಜೀವಂತನಾಗಿ ತಿರುಗಿ ಬರುತ್ತೇನೆಂಬುವ ಆಶೆಗೆ, ಎಳ್ಳುಕಾಳಷ್ಟು ಕೂಡಾ ಅವಕಾಶವಿಲ್ಲ ದಂತಾಗುವದು.

ಸೌದಾ:— ನಿಮ್ಮ ಮುಂದೆ ಅಳಬೇಕೆ, ಅಥವಾ ನಗಬೇಕೆ, ಇದೇ ತಿಳಿಯದಾಗಿದೆ.

ಮೋಘ.— ನಾನು ಜೀವದಿಂದಿರುವವರೆಗೆ ಬೇಕಾದಷ್ಟು ನಗು. ನಾನು ಸತ್ತಮೇಲೆ ಅಳುವದು ನಿನ್ನ ಪಾಲಿಗೆ ಇದ್ದೇ ಇದೆ. ಯಾಕಂದರೆ ಗಂಡನು ಸತ್ತಮೇಲೆ, ಆತನ ಹೆಸರಿನಿಂದ ಸ್ತ್ರೀಯರು ಶೋಕಿಸಲೇ ಬೇಕು. ಹೀಗೆ ನನ್ನ ಸಿದ್ಧಾಂತವಿದೆ !

ಸೌದಾ:— ನಿಮ್ಮ ತಲೆಯೆಂದರೆ ಕತ್ತಿಯ ತಲೆಯು, ಹೀಗೆ ನನ್ನದಾದರೂ ಸಿದ್ಧಾಂತವಿದೆ. ಹೂ ನಡೆಯಿರಿನ್ನು ಜಾಗ್ರತೆಯಾಗಿ ಯುದ್ಧಕ್ಕೆ ! (ಹೋಗುವಳು)

ಮೋಘ:— ಯಾವ ಮುಂಡೇಮಗನಿಗೆ ಬೇಕಾಗಿದೆ ಯುದ್ಧವು. ಇವಳಂತೂ ಸತಿಹೋಗುವೆನೆಂದು ವಚನಕೊಟ್ಟಿದ್ದಾಳೆ ! ನಾನು ಸುಳ್ಳೇ ಸತ್ತವನಂತೆ ನಟಿಸಿ, ಇವಳನ್ನು ಪರೀಕ್ಷಿಸುವೆನು. ಅದರ ವಿನಹ ಇವಳ ಮೇಲೆ ವಿಶ್ವಾಸವಿಡಬಾರದೆಂದು ನನ್ನ ಸಿದ್ಧಾಂತವು ! (ಹೋಗುವನು.)

ಎರಡನೆಯ ಪ್ರಸಂಗ

(ವನ ಪ್ರದೇಶವು. ಜಯದ್ರಥನು ಬರುತ್ತಾನೆ)

ಜಯ:— ಕಾಲವು ಅನುಕೂಲವಿತ್ತೆಂದು ನಾನು ಅರ್ಜುನನ ಬಾಣದ ಹೊಡತಕ್ಕೆ ಸಿಲುಕದೆ ಪಾರಾದೆನು. ಆವನ ಬಾಣದ ಗುರಿಯನ್ನು ಹೇಗೋ ತಪ್ಪಿಸಿಕೊಂಡೆ, ಆದರೆ ಪರಮಾತ್ಮನ ಸಂಕಲ್ಪವನ್ನು ತಪ್ಪಿಸುವದು ನನ್ನಿಂದ ಸಾಧ್ಯವೇ ! ಸೂರ್ಯಾಸ್ತವಾಗುವದಕ್ಕೆ ಇನ್ನೂ ಎರಡುಗಳಿಗೆ ಅವಕಾಶವಿದೆ. ಈದಿವಸ ಈ ಜಯದ್ರಥ, ಇಲ್ಲವೆಅರ್ಜುನ, ಇಬ್ಬರೊಳಗೊಬ್ಬರು ಖಂಡಿತವಾಗಿ ಈ ಜಗತ್ತಿನ ಆಶೆಯನ್ನು ಬಿಡಲೇ ಬೇಕು. ಪಾರ್ಥಾ ! ಈ ಜಯದ್ರಥನು ಈ ದಿವಸ ಬದುಕಿದನೆಂದರೆ, ಚಿರಂಜೀವಿಯಾದನೆಂತಲೇ ತಿಳಿ. ಈ ದಿವಸ ಮುಳುಗುವ ಸೂರ್ಯ

ದರ್ಶನವೇ ನಿನಗೆ ಕೊನೆಯದು, ಮತ್ತು ನಾಳೆ ಉದಯಿಸುವ ಸೂರ್ಯ ದರ್ಶನವು ಸರ್ವ ಪಾಂಡವರಿಗೆ ಕೊನೆಯದು. ಪಾಂಡವರ ಪಟ್ಟಣಗಳನ್ನು ನೆಲಸಮನಾಗಿ ಮಾಡದಿದ್ದರೆ, ನಾನು ಜಯದ್ರಥನೆ ಅಲ್ಲ! (ಆಚೆಗೆ ನೋಡಿ) ಆದರೆ ಇವಳು ಯಾರು! ಯೋಗಿನಿಯ ವೇಷದಿಂದ ಅರಣ್ಯದಲ್ಲಿ ಸಂಚರಿಸುತ್ತಿರುವಳು. ಇವಳು ಉತ್ತರೆಯು! ಅಭಿಮನ್ಯುವಿನ ಸತಿಯು!! ಸರಿ ಹಾಗಾದರೆ ಇವಳಿಗೂ ಇವಳ ಗಂಡನ ಮಾರ್ಗವನ್ನೇ ತೋರಿಸಬೇಕು!! ತಾನಾಗಿ ನಡೆದು ಬಂದ ಬಂಗಾರದಂತಹ ಸಂಧಿಯನ್ನು ಕಳೆದುಕೊಂಡು ಪ್ರಯೋಜನ ವಿಲ್ಲ. (ಒಂದು ಬದಿಗೆ ಸರಿದು ನಿಲ್ಲುವನು)

(ಉತ್ತರಾ, ಸೌದಾಮಿನಿ, ಬರುವರು)

ಉತ್ತರಾ:— ಸೌದಾಮಿನಿ, ನೀನು ಮರಳಿ ಹೋಗು. ಏತಕ್ಕೆ ಬರುವಿ ನನ್ನ ಜತೆಗೆ? ಈ ಸನ್ಯಾಸಿನಿಯಾದ ಉತ್ತರೆಗೆ ಈ ಸಂಸಾರದ ಮಾಯಾಪಾಶವು ಇನ್ನೇತಕ್ಕೆ ಬೇಕು. ಈ ಉತ್ತರೆಗೆ ಈ ಜೋಗ ಮ್ಮನ ವೇಷವೇ ಆನಂದದಾಯಕವಾಗಿದೆ

ಸೌದಾ:— ದೇವಿಯವರೇ ಹೀಗೆ ಮಾಡಬೇಡಿ, ಹೀಗೆ ವನಾರಣ್ಯದಲ್ಲಿ ತಿರುಗುವದನ್ನು ಸಾಕುಮಾಡಿ, ಬಿಡಾರಕ್ಕೆ ನಡೆಯಿರಿ.

ಉತ್ತರಾ:— ಇನ್ನು ಬಿಡಾರದಲ್ಲಿಯಾದರೂ ಏನಿರುವದು! ದೇವರಿಲ್ಲದ ಮನೆಯಲ್ಲಿ ಬಂದು ನಾನೇನು ಮಾಡಲಿ! ಸೌದಾಮಿನಿ ನೀನು ಮರಳಿ ಹೋಗು. ಅದೋ ನೋಡು, ನನ್ನ ಪತಿದೇವನ ಮೂರ್ತಿಯು ಅಣುರೇಣುಗಳಲ್ಲಿ ತುಂಬಿಕೊಂಡಂತೆ ನನಗೆ ಕಾಣುವದು.

ಸೌದಾ:— ದೇವಿ, ಹೀಗೇಕೆ ಮಾಡುವಿರಿ? ನಿಮಗೆ ಹುಚ್ಚು ಹಿಡಿಯಿತೋ ಹೇಗೆ? ಮನಸ್ಸಿನಲ್ಲಿ ಉತ್ಸಾಹವಿಲ್ಲದ್ದರಿಂದ ಮುಖಮುದ್ರೆಯ ಮೇಲೆ ಆನಂದದ ಚಿನ್ಹವೇ ಇಲ್ಲ.

ಉತ್ತರಾ:— ಹುಚ್ಚೀ ನನ್ನ ಆನಂದದ ವಿಸ್ತಾರವು ವಿಶ್ವಕ್ಕಿಂತಲೂ ಅಧಿಕವಾಗಿ ವ್ಯಾಪಿಸಿರುವದು. ನನ್ನ ಮನಸ್ಸಿನಲ್ಲಿ ಮಂಗಳಕರವಾದ

ಲೋಕಸೇವೆಯ ಕಲ್ಪನೆಗಳು ಉತ್ಪನ್ನವಾಗಹತ್ತಿರುವವು. ಅನಾಥ ದೀನ ಜನರ ಪವಿತ್ರ ಸೇವೆಯಲ್ಲಿಯೇ ನನ್ನ ಉಳಿದ ಆಯುಷ್ಯವನ್ನು ಕಳೆಯಬೇಕೆಂದು ನಾನು ನಿಶ್ಚಯಮಾಡಿರುವೆನು. ಲೋಕಸೇವೆಯೇ ಆತ್ಮೋದ್ಧಾರದ ರಾಜಮಾರ್ಗವು.

ಸೌದಾ:— ನೀವು ಏನು ಮಾತಾಡುವಿರೋ, ಅದು ಆ ಪರಮೇಶ್ವರನೇ ಬಲ್ಲ. ನನಗಂತೂ ಒಂದು ಅಕ್ಷರ ಕೂಡ ತಿಳಿಯಲಿಲ್ಲ.

ಉತ್ತರಾ:— ಏನೇ ಅದರಲ್ಲೇನು ಅಂತಹ ಗೂಢವಿದೆ. ಅಖಂಡವಾಗಿ ಲೋಕ ಸೇವೆಯನ್ನು ಮಾಡಿ, ಅನಂತ ಪುಣ್ಯವನ್ನು ಸಂಪಾದಿಸಬೇಕೆಂಬುದೇ ವಿಧವಾವ್ರತದ ಕರ್ತವ್ಯವು. ಬಿಡು ನನ್ನನ್ನು, ಈ ಸನ್ಯಾಸಿನಿ ಉತ್ತರೆಯ ಮನಸ್ಸನ್ನು ಎಳೆಯುವಂತಹ ಮಾಯಾಬಂಧನವು ಈ ಶೂನ್ಯ ಸಂಸಾರದಲ್ಲಿ ಒಂದು ಕೂಡಾ ಉಳಿದಿರುವದಿಲ್ಲ. ಹೋಗು ಸುಮ್ಮನೆ ನನಗೆ ತೊಂದರೆ ಕೊಡಬೇಡ.

ಸೌದಾ— ತಮ್ಮ ಇಷ್ಟವು, ನಾನೇನು ಮಾಡಲಿ (ಸ್ವ) ಏನು ಮಾಡಬೇಕು; ಎಷ್ಟು ಹೇಳಿದರೂ ಇವರ ಮನಸ್ಸು ತಿರುಗುವದಿಲ್ಲ. (ಹೋಗುವಳು)

ಉತ್ತರಾ:— ದೇವಾ–

ರಾಗ ಕರ್ನಾಟಕೀ ತೋಡಿ ತಾಳ ದಾದರಾ

ಭಕ್ತ ಜೀವನಾ ರಾಮ । ದುರಿತ ಭಂಜನಾ ॥ಪಲ್ಲ॥
ಸತ್ಯನಾಗಿ ಸಕಲ ಜಗವ । ನಿತ್ಯನಾಗಿ ಪಾಲಿಸುವೆ ॥ಅನುಪಲ್ಲ॥
ನಿನ್ನ ಮಧುರನಾಮ ಸುಜನ । ರನ್ನು ಧನ್ಯಗೊಳಿಸಿ ಸದಾ ।
ಮಾನ್ಯವಾದ ಮೋಕ್ಷ ಪದವಿ । ಯನ್ನು ಕೊಟ್ಟು
ಸಲಹುತಿಹುದೋ ॥೧॥

(ಉತ್ತರೆಯು ಹೋಗಹತ್ತುವಳು. ಜಯದ್ರಥನು ಪ್ರವೇಶಿಸುವನು.)

ಜಯ:— ನಿಲ್ಲು-ನಿಲ್ಲು-ಎಲ್ಲಿ ಹೋಗುವೆ ?

ಉತ್ತರಾ:— ಯಾರು–ಯಾರು–ನೀನು ?

ಜಯ:— ನಾನು ಯಾರೆಂಬುದನ್ನು ವಿಚಾರಿಸುವಿಯಾ, ನಾನೆ ನಿನ್ನ ಪತಿ

ಮನ್ಯು ಸ್ವರ್ಗಕ್ಕೆ ಅಟ್ಟಿದವನು! ನಿನಗಾದರೂ ಅದೇ ಮಾರ್ಗವನ್ನು ತೋರಿಸುವದಕ್ಕೆ ಬಂದಿರುವೆನು! (ಖಡ್ಗ ಹಿರಿಯುವನು)

ಉತ್ತರಾ:— ದುರಾತ್ಮಾ ದೂರಾಗು. ಹೆಂಗಸಿನ ಮೇಲೆ ಶಸ್ತ್ರವೆತ್ತು, ನಾತಪ ಕೊಲೆ ಪಾತಕಿಯೇ ದೂರಾಗು. ಚಂಡಾಲಾ ನಿನ್ನ ಹೆಸರೇನು?

ಜಯ:— ನನ್ನ ಪೆಸರು ಕೇಳಿಕೊಂಡು ನೀನೇನು ಮಾಡುವೆ? ಸದ್ಯಕ್ಕೆ ಈ ಪ್ರಪಂಚದೊಳಗಿನಿಂದ ನಿನ್ನನ್ನು ನಷ್ಟಗೊಳಿಸುವದೇ, ನನ್ನ ಮುಖ್ಯ ಉದ್ದೇಶವಾಗಿದೆ. ಯಾವನ ಹೆಸರು ಕೇಳಿದ ಮಾತ್ರಕ್ಕೆ ಅರ್ಜುನಾದಿ ಮಹಾವೀರರು ಗದಗದನೇ ನಡಗುವರೊ, ಆತನೇ ನಾನು-ಸಿಂಧುರಾಜ ಜಯದ್ರಥನು!

ಉತ್ತರಾ:— ಯಾರು ನೀನು? ಜಯದ್ರಥನೆ? ಹೋಗು ಮೊದಲು! ನಿನ್ನ ಅಮಂಗಲ ಹೆಸರನ್ನು ನಾನು ಈ ಕಿವಿಗಳಿಂದ ಕೇಳಲಾರೆನು.

ಜಯ:— ಈತನು ಜಯದ್ರಥನಲ್ಲ! ಪ್ರತ್ಯಕ್ಷ ಕೃತಾಂತನೆ ನಿನ್ನನ್ನು ಗ್ರಾಸಿಸುವದಕ್ಕೋಸ್ಕರ ರಾಕ್ಷಸೀಮಹತ್ವಾಕಾಂಕ್ಷೆಯಿಂದ ನಿನ್ನ ಮುಂದೆ ಬಂದು ನಿಂತಿರುವನು!

ಉತ್ತರಾ:— ದುಷ್ಟಾ, ಅಬಲೆಯಾದ ನನ್ನನ್ನು ಸಂಹರಿಸಿ,ಯಾವ ಘೋರ ನರಕಕ್ಕೆ ಸಾಧನ ಮಾಡಿಕೊಳ್ಳುವೆ.

ಜಯ:— ಶತ್ರುಗಳ ಸ್ತ್ರೀಯರನ್ನು ನಾನಾಪ್ರಕಾರವಾಗಿ ಪೀಡಿಸಿ, ಅವರನ್ನು ಸಂಹರಿಸುವದೇ ನಿಜವಾದ ವೀರರ ಬಿರುದು! ಈ ಕಾಲಕ್ಕೆ ನಿನ್ನ ಸಹಾಯಕ್ಕೆ ಯಾರು ಬರುವರೋ ನೋಡುವೆನು.

ಉತ್ತರಾ:— ನನ್ನನ್ನು ರಕ್ಷಣೆಮಾಡುವವರು ಅನ್ಯರಾರು? ನನ್ನ ಪುಣ್ಯದ ಪರಮೇಶ್ವರನೆ!

ಜಯ:— ಇದೋ ನೋಡು, ನಿನ್ನ ನಿರ್ಬಲನಾದ ಆ ಪರಮೇಶ್ವರನನ್ನು, ಒಂದೇ ಹೊಡತಕ್ಕೆ ಕತ್ತರಿಸಿ ಚೆಲ್ಲುವೆನು.

ದ್ರೋಣ:— (ಪ್ರ) ಸರಿ ಹಿಂದಕ್ಕೆ, ದುರಾಚಾರೀ ರಾಕ್ಷಸಾ ಸರಿ ಹಿಂದಕ್ಕೆ!

ಜಯ:— ಯಾರು! ಆಚಾರ್ಯರು-ಘಾತವಾಯಿತು-ಘಾತವಾಯಿತು.

ದ್ರೋಣಃ— ಧಿಃಕಾರವಿರಲಿ ನಿನ್ನ ಪಾಪೀ ಪುರುಷಾರ್ಥಕ್ಕೆ ! ಸ್ತ್ರೀ ಘಾತಕಿಯೇ, ಉತ್ತರೆಯಂತಹ ಮಹಾಪತಿವ್ರತೆಯ ಯೋಗ್ಯತೆಯು ನಿನ್ನಂತಹ ನರಾಧಮರಿಗೆ ಹೇಗೆ ತಿಳಿದೀತು. ನಡೆ, ಈ ಶಾಪಭ್ರಷ್ಟ ದೇವತೆಯ ಕ್ಷಮೆಯನ್ನು ಬೇಡು, ಅಂದರೆ ನಿನ್ನ ಪಾಪವು ಕ್ಷಾಲನವಾಗುವದು. ಎಲೋ ! ಈ ಬಾಲವಿಧವೆಯ ಪವಿತ್ರಶೀಲದ ಪುಣ್ಯರಾಶಿಯ ಮುಂದೆ, ಮಹಾ ಮಹಾ ತಪಸ್ವಿಗಳು ಕೂಡ ಸುಮ್ಮನೇ ತಲೆಬಗ್ಗಿಸಬೇಕಾಗಿದೆ ! ಮರ್ಕಟಾ, ನಿನ್ನ ಪಾಡೇನು. ನಡೆ ಮೊದಲು ಕಾಲಿಗೆ ಎರಗಿ, ಕ್ಷಮೆಯನ್ನು ಬೇಡು.

ಉತ್ತರಾ:— ನನ್ನ ಕ್ಷಮೆಯೇತಕ್ಕೆ, ದಯಾಳುವಾದ ಭಗವಂತನೇ ಅವನನ್ನು ಕ್ಷಮಿಸಲಿ !

ರಾಗ ಭೈರವಿ ತಾಳ ಕೇರವಾ

ಕರುಣಾಸಾಗರಾ ॥ ಪ್ರಭು ಪರಮಾತ್ಮಾ ॥ಪಲ್ಲ॥ ಪೊರೆಯುವೆ
ಸುಜನರ । ಮಂಗಲಧಾಮಾ ॥ ಅ. ಪ. ॥ ದುರಿತವಿದೂರಾ
ವಿಶ್ವಾಧಾರಾ । ಪರತರಪಾವನಾ । ನಿರಂಜನ ರೂಪಾ ॥ ೧॥

ದ್ರೋಣಃ— ದೇವತೆಯೇ-ದೇವತೆಯೇ (ಜಯದ್ರಥನನ್ನು ಕಾಲಿಗೆ ಬೀಳುವದಕ್ಕೆ ಹಚ್ಚುವನು)

ಮೂರನೆಯ ಪ್ರಸಂಗ

[ಮೇಘನಾದ ಹಾಗೂ ಅವನ ಗೆಳೆಯರು ಬರುವರು]

ಮೇಘ:— ಯಾಕೆ ನಾನು ಹೇಳಿದ್ದು ತಿಳಿಯಿತೇ, ಎಲೊ ನೀವು ನನ್ನ ಬಾಲ್ಯತನದ ಮಿತ್ರರೆಂದು, ಈ ಗುಟ್ಟಿನ ಕೆಲಸವನ್ನು ನಾನು ನಿಮಗೆ ಹೇಳುತ್ತೇನೆ. ಅದೇನು ಅಷ್ಟು ಕಠೀಣ ಕೆಲಸವಲ್ಲ. ನೀವು ಸ್ವಲ್ಪ

ಅತ್ತು, ನಾನು ಯುದ್ಧದಲ್ಲಿ ಮಡಿದೆನೆಂದು ಸುಳ್ಳು ಸುದ್ದಿಯನ್ನು, ನನ್ನ ಹೆಂಡತಿಗೆ ತಿಳಿಸಿಬಿಟ್ಟರೆ, ಕೆಲಸವಾಯಿತು. ನಾನು ಈ ದಿವಸ ಅವಳ ಪರೀಕ್ಷೆ ತಕ್ಕೊಳ್ಳಬೇಕಾಗಿದೆ!

೧ ನೇ ಗೆ:— ಅಂದರೆ—ಇದುವರೆಗೂ ನಿನಗೆ, ನಿನ್ನ ಹೆಂಡತಿಯು ಪರೀಕ್ಷೆಯೇ ಆಗಿಲ್ಲವೇನು?

೨ ನೇ ಗೆ:— ಅಂದರೆ, ಈ ದಿವಸ ನೀನು, ನಿನ್ನ ಹೆಂಡತಿಯು ಪರೀಕ್ಷೆ ತಕ್ಕೊಳ್ಳತಕ್ಕವನೋ ಹೇಗೆ!

ಮೋಘ:— ಮಿತ್ರರೇ ಹಾಗಲ್ಲ. ನಾನು ಸತ್ತಮೇಲೆ ಅವಳು ಸತಿಹೋಗುವೆನೆಂದು ವಚನ ಕೊಟ್ಟಿದ್ದಾಳೆ. ಹೇಳಿಕೇಳಿ ಅದು ಹೆಣ್ಣಿನ ವಚನವೆಂದಮೇಲೆ, ಅದರ ಮೇಲೆ ವಿಶ್ವಾಸವಿಡುವವನು ಮೂರ್ಖನೆ! ಅಂತೆಯೇ ನಾನು ಈ ನಾಟಕವನ್ನು ಪ್ರಾರಂಭಿಸಿದುದು!!

೧ ನೇ ಗೆ:— ಛೆ—ನಮಗೆ ಬೇಡಪ್ಪಾ—ನಿನ್ನ ನಾಟಕವನ್ನು ನೀನೆ ಮುಗಿಸಿಕೊ.

೨ ನೇ ಗೆ:— ನಮಗೆ ಇದು ಸಾಧ್ಯವಿಲ್ಲ, ಸುಮ್ಮನೆ ನಮಗೇತಕ್ಕೆ ಈ ಶುಕ್ಲಕಾಷ್ಟ!

ಮೋಘ:— ಹರ ಹರಾ—ನನ್ನ ಮೇಲೆ ಎಂತಹ ಭಯಂಕರ ಪ್ರಸಂಗವಿದು! ಹೆಂಡತಿಯಿಂದ ಕೇವಲ ಗಂಡಾಂತರದಲ್ಲಿ ಮುಳುಗಿದ, ಈ ಅನಾಥ ಗೆಳೆಯನ ವಿಷಯವಾಗಿ ನಿಮಗೆ ದಯ ಹುಟ್ಟುವದಿಲ್ಲವೆ? ನನ್ನ ನಾಟಕವನ್ನು ಈ ಸರ್ವ ಪ್ರಪಂಚವೆ ನೋಡುತ್ತಿರುವದು. ಈ ನಾಟಕದ ಕೊನೆಯ ಪ್ರವೇಶದಲ್ಲಿ ನಿಮ್ಮಿಂದ ನನಗೆ ಸ್ವಲ್ಪ ಸಹಾಯವಾಗಬಹುದೆಂದು, ನಿಮ್ಮನ್ನು ಕರೆತಂದೆನು. ಈ ದಿವಸ ನನ್ನ ಸಂಸಾರ ನಾಟಕದ ಕೊನೆಯಾಗುವದು, ಇಲ್ಲವೆ ಪ್ರಾರಂಭವಾಗುವದು. (ಗೆಳೆಯರು ನಗುವರು) ಹೂ ಈ ಸಮಯದಲ್ಲಿ ನಗಬೇಡಿರಿ. ಅಳುವದಕ್ಕೆ ಬರುತ್ತಿದ್ದರೆ ಕೊಂಚ ಅತ್ತು ತೋರಿಸಿರಿ!

೩ ನೇ ಗೆ:— ಅಳಬೇಕೆ? ಹೊಟ್ಟೆತುಂಬ ಅಳುವೆವು. ಅದರಲ್ಲೇನಿದೆ!

೨ ನೇ ಗೆ:— ಶೂರ ಶಿಪಾಯಿಗಳಾದ ನಮಗೆ, ಅಳುವದಕ್ಕೆ ಒರುವದಿಲ್ಲವೆನ್ನುವೆಯಾ? ಕೇಳು ಹಾಗಾದರೆ— (ಅಳುವಂತೆ ನಟಿಸುವರು)

ಮೋಘ:— ಎ-ಎ ನೀವೇನು ಅಳುತ್ತಿರುವಿರೋ, ಅಥವಾ ಸಂಗೀತ ಕಚೇರಿ ಮಾಡುತ್ತಿರುವಿರೋ? ತಡೆಯಿರಿ, ನಾನೆ ನಿಮಗೆ ಕಲಿಸುತ್ತೇನೆ.

೧ ನೇ ಗೆ:— ನಮಗೆ ಬೇಡಪ್ಪಾ ಈ ಅಳುವ ಕಲೆ. ಅದು ನಿನಗೇ ಇರಲಿ!

೨ ನೇ ಗೆ:— ಸುಖದ ಜೀವಕ್ಕೆ ಬೇಕು ಬೇಕಾಗಿ, ಅಳುವ ಕಲೆಯನ್ನು ನಿನ್ನಿಂದ ಕಲಿಯಬೇಕೆ?

ಮೋಘ:— ಎಲೊ ಮೂಲತಃ ಹುಟ್ಟುವಾಗಲೆ, ನಾನು ಅಳುತ್ತ ಹುಟ್ಟಿದ್ದೇನೆ.

೧ ನೇ ಗೆ:— ಒಳ್ಳೇದು ನಡೆ! ನಾವಾದರೂ ನಿನ್ನ ನಾಟಕವನ್ನು ಅಳುತ್ತಲೇ ಪೂರೈಸುವಾ.

೨ ನೇ ಗೆ:— ಅದೇನು ನಮಗೆ ಅಸಾಧ್ಯವಾದ ಮಾತಲ್ಲ. ನಡೆ ಹೋಗುವಾ.

ಮೋಘ:— ಚನ್ನಾಗಿ ಅಳುವದಕ್ಕೆ ಬಾರದವರು, ನಾಟಕ ಮಾಡತ್ತಾರಂತೆ! ನಾಟಕ ಮಾಡುವ ಮುಖವಿದು!

೨ ನೇ ಗೆ:— ಮಾತು ಸಾಕುಮಾಡು. ಅದೊ ನಿನ್ನ ಹೆಂಡತಿಯೇ ಇಲ್ಲಿ ಬಂದಳು.

ಮೋಘ:— ಇದೊ ನಾನು ಅತ್ತ ಕಡೆಗೆ ಆ ಮರದ ಆಚೆಗೆ ಸತ್ತವನಂತೆ ಬೀಳುವೆನು; ನೀವು ಇತ್ತಕಡೆಗೆ ಒಂದೇ ಸವನೆ ಉಚ್ಚಸ್ವರದಲ್ಲಿ ಅಳುವದಕ್ಕೆ ಸುರುವು ಮಾಡಿರಿ. ಹೂ: ಬೇಗನೆ ಪ್ರಾರಂಭವಾಗಲಿ—ಒಂದು—ಎರಡು—ಮೂರು (ಹೋಗುವನು ಅವರು ದೊಡ್ಡ ಧ್ವನಿಯಿಂದ ಅಳುವರು)

ಸೌದಾ:— (ಸ್ವ) ಯಾರಿವರು! ಪಾಪ ಯಾಕೆ ಅಳುತ್ತಿರುವರು? ನನ್ನನ್ನು ನೋಡಿದ ಕೂಡಲೆ, ಇವರ ಶೋಕವು ಇಮ್ಮಡಿಸಿತು. (ಸಮೀಪಕ್ಕೆ ಹೋಗಿ) ತಂದೆಗಳಿರಾ ಯಾಕೆ ಅಳುವಿರಿ—ಯಾಕೆ?-

೧ನೇ ಗೆ:— (ಅಳುತ್ತ) ತಾಯಿಾ ಏನು ಹೇಳಲಿ, ನಮ್ಮ ಪರಮ ಮಿತ್ರನು ನಮ್ಮನ್ನು ಬಿಟ್ಟು ಹೋದನು.

೨ನೇ ಗೆ:— ಈ ದಿವಸದ ಯುದ್ಧದಲ್ಲಿ ಮಡಿದನು. (ಅಳುವಂತೆ ನಟಿಸುವನು)

ಸೌದಾ:— ಯಾರು ? ಯಾರು ನಿಮ್ಮ ಮಿತ್ರನು ?

೧ನೇ ಗೆ:— ಎರಡನೇಯವರಾರು? ನಮ್ಮ ಮೇಘನಾದನು.

ಸೌದಾ:— ಏನು ಹೇಳುವಿರಿ !ಅವರು ನಿಜವಾಗಿಯೂ ಯುದ್ಧ ಮಾಡುತ್ತ ಮಾಡುತ್ತ ಸತ್ತು ಹೋದರೆ ?

೧ನೇ ಗೆ:— ಹೌದಮ್ಮಾ, ಅತ್ತಕಡೆಗೆ ಅವನು ಯುದ್ಧ ಮಾಡುತ್ತ-ಮಾಡುತ್ತ ಸತ್ತು ಹೋದನು-

೨ನೇ ಗೆ:— ಇತ್ತಕಡೆಗೆ ನಾವು ಅತ್ತು-ಅತ್ತು-ಸಾಯಬೇಕಾಗಿದೆ!

ಸೌದಾ:— ಅವರ ಪ್ರೇತವು ಎಲ್ಲಿದೆ ?

೧ನೇ ಗೆ:— ಅದೋ ನೋಡಿ, ಆ ಮರಕ್ಕೆ ಉದ್ದವಾಗಿ ನಿಲ್ಲಿಸಿದ್ದೇವೆ.

೨ನೇ ಗೆ:— ನೀವೇಕೆ ಭಯಪಟ್ಟಿದ್ದೀರಿ ? ಅವನಿಗೂ ನಿಮಗೂ ಏನು ಸಂಬಂಧ ?

ಸೌದಾ:— ನಾನು ಅವರ ಹೆಂಡತಿಯು. ಅವರನ್ನು ತೋರಿಸಿರಿ.

೧ನೇ ಗೆ:— ಎಲ-ಎಲಾ ಎಂಥ ಘೋರ ಪ್ರಸಂಗವಿದು.

೨ನೇ ಗೆ:— ತಡೆಯಿರಿ. ನಾವೆ ಇಲ್ಲಿಗೆ ಪ್ರೇತವನ್ನು ತರುತ್ತೇವೆ. ನಡೆ ಹೋಗೋಣ.

೧ನೇ ಗೆ:— ಎಲೋ ಅಲ್ಲಿಗೇತಕ್ಕೆ ಹೋಗುವಿ ? ಇಲ್ಲಿಂದಲೆ ಆ ಪ್ರೇತವನ್ನು ಕೂಗು. ಏ ಮೇಘನಾದನ ಪ್ರೇತವೆ ಬಾರಯ್ಯಾ ಹೀಗೆ.

೨ನೇ ಗೆ:— ಎಲೋ ಮೂರ್ಖಾ, ನೀನು ಮನುಷ್ಯನೊ-ಎಮ್ಮೆ ತಮ್ಮನೋ ?

೧ನೇ ಗೆ:— ಅದೇಕೆ ?

೨ನೇ ಗೆ:— ಮೂರ್ಖಾ ಸತ್ತಂಥ ಪ್ರೇತವು, ನಡೆಯುತ್ತ ಬರುವದೆ?

[ಇಬ್ಬರೂ ನಗುವರು]

ಸೌದಾ:— (ಸ್ವ) ಇದೇನು? ಈ ವರೆಗೆ ಅಳುತ್ತಿದ್ದವರು,ಈಗ ನಗಹತ್ತಿದರು. ಇವರು ಹುಚ್ಚರೊ ಏನೋ (ವಿಚಾರ ಮಾಡಿ) ಓಹೊ ಈಗ ತಿಳಿಯಿತು. ಇದೆಲ್ಲ ಕುಚೆಷ್ಟೆಯು ನಮ್ಮ ಪತಿರಾಜರದೇ ಇರಬಹುದು. (ಮೇಘ ನಾದನನ್ನು ಹೊತ್ತು ತರುವರು) ಸಂಶಯುವೇ ಬೇಡಾ. ಇವರ ಈ ನಗುಮು ಖವನ್ನು ನೋಡಿದರೆ, ಪ್ರೇತವೆಂದು ಯಾರಿಗೆನಿಸುವದು? (ವಿಚಾರ ಮಾಡಿ) ಹೀಗೇ ಮಾಡಿದರೆ, ಇವರ ವೇಷವು ಹೊರಬೀಳುವದು!

೧ನೇ:— ಅಮ್ಮಾ ಇದೋ ನೋಡಿ ಪ್ರೇತ್ರವು.

೨ನೇ:— ಅಮ್ಮಾ ನಿಮಗೆ ಏನೂ ದುಃಖವಾಗುವದಿಲ್ಲವೆ?

ಸೌದಾ:— ನನಗಾಗುವದನ್ನು ನಿಮಗೆ ಹೇಗೆ ಹೇಳಲಿ?

೧ನೇಃ— ಇರಲಿ ಇನ್ನು ಮುಂದಿನ ಇದರ ವ್ಯವಸ್ಥೆ?

೨ನೇ:— ಹಾಗೆಯೇ ತಮ್ಮ ವ್ಯವಸ್ಥೆ ಏನು? ಸತ್ತವರ ಕೂಡ ಯಾರು ತಾನೆ ಸಾಯುವರು? ನೀವು ಸತಿಹೋಗತಕ್ಕವರಲ್ಲವೆ? ಹಾಗೆ ನೀವು ವಚನಕೊಟ್ಟು ಪ್ರಮಾಣಮಾಡಿರುವಿರಿ!

ಸೌದಾ:— ಯಾರು ಹೇಳುವರು? ಸಾಯುವಾಗ್ಗ ಇವರೇ ನಿಮಗೆ ಹೇಳಿ ದರೆ?

೧ನೇ ಗೆ:— ಹೌದು (ಹೆಣದ ಕಡೆ ಕೈಮಾಡಿ) ಇವನನ್ನೇ ವಿಚಾರಿಸಿ, ಮನ ದಟ್ಟು ಮಾಡಿಕೊಳ್ಳಿ! ಯಾಕೋ ಮೇಘನಾದಾ–

೨ನೇ ಗೆ:– ಎಲೋ ಹುಚ್ಚಾ ಅವನನ್ನೇನು ಕೇಳುವಿ? ಮಾತಾಡುವದಕ್ಕೆ ಅವನಿಗೆ ಬಾಯಿ ಇರುವದೆ?

ಮೇಘ:— (ಒಂದುಮಗ್ಗಲಿಗೆ) ಕತ್ತೆಗಳೇ, ನಿಮ್ಮ ನಿನ್ಮೊಳಗೆ ಕುಚೇಷ್ಟೆ ಮಾಡುವಿರಾ?

೧ನೇ ಗೆ:— ಎಲೋ (ಹೆಣದಕಡೆ ನೋಡಿ) ಕಣ್ಣು ತೆರೆದು ನೋಡಬೇಡ.

೨ನೇ ಗೆ:— ಹೌದು ಈ ದಿವಸ ಈತನ ಕಣ್ಣುಗಳು ತೆರೆದಂತೆ ಕಾಣುತ್ತವೆ.

ಸೌದಾ:— ಯಾಕೆ-ಏನದು-ಕಿವಿಮಾತುಗಳು. ನಾನು ಸತಿ ಹೋಗುವದಿಲ್ಲ! ನಿಮಗೆ ಬೇಕಾದ ಹಾಗೆ ಅವರ ವ್ಯವಸ್ಥೆ ಮಾಡಿರಿ!

ಮೋಘ:— (ಒಂದು ಮಗ್ಗಲಿಗೆ) ಎಲಾ ಶಿಟವಿಯೇ! ಸತಿ ಹೋಗುವದಿಲ್ಲವೆ?

೧ನೇ ಗೆ:— ಈತನ ಮೇಲೆ ನಿಮ್ಮ ಪ್ರೇಮವಿತ್ತಲ್ಲವೆ?

೨ನೇ ಗೆ:— ಎಲೋ ಇನ್ನು ಮೇಲೆಪ್ರೇಮದ ಮಾತುಗಳನ್ನಾಡುವದರಲ್ಲಿ, ಏನು ಅರ್ಥವಿದೆ? ಅವ್ವಾ—

ಸೌದಾ:— (ಬೇಸರಗೊಂಡು) ಏನನ್ನು ಏರಿ-ನಿಮಗೆ ಬೇಕಾದ ವ್ಯವಸ್ಥೆಯನ್ನು ಮಾಡಿಕೊಳ್ಳಿ? ನನ್ನನ್ನು ವಿಚಾರಿಸಬೇಡರಿ. ಇದು ನಿಜವಾಗಿಯೂ ಜೀವವಿಲ್ಲದ ಪ್ರೇತವೇ?

೧ನೇ ಗೆ:— ಅಂದರೆ, ಪ್ರೇತಕ್ಕೆ ಜೀವವಿರುವದುಂಟೆ?

ಮೋಘ:— (ಮಗ್ಗಲಿಗೆ) ಹೀಗೇಕೆ ನಗುತ್ತಿರುವಿರಿ! ಆತ್ತು ತೋರಿಸಿರಿ ನಿಮ್ಮ ಪರಾಕ್ರಮ! ಕಿಸಿ ಕಿಸಿ ಹಲ್ಲು ಕಿಸಿದು, ನನ್ನ ಠಕ್ಕು ತನವನ್ನು ಬೈಲಿಗೆ ಹಾಕಿದಿರಿ! ಏನು ಮಾಡಲಿ-ಇವಳ ಕೆನ್ನಗೆ ಒಂದು ಏಟು ಹಾಕಲೆ!

ಸೌದಾ:— ತಿಳಿಯಿತು ನನಗೆಲ್ಲವೂ ತಿಳಿಯಿತು. ಇನ್ನು ಮೇಲೆ ನೀವು ಬೇಕಾದದ್ದು ಮಾಡಿರಿ. ನಾನು ಹೋಗುವೆನು. (ಹೋಗಹತ್ತುವಳು)

ಮೋಘ:—ಇನ್ನು ಮೇಲೆ ಮಾತ್ರ ನಮಗೆ ಮರಣವೇ ಬಂದಿತು! (ಅವಳನ್ನು ಹಿಡಿದು) ಏನೇ ನಾನು ಇಲ್ಲಿ ಸತ್ತುಬಿದ್ದಿರುವಾಗ, ನೀನು ನನ್ನನ್ನು ಬಿಟ್ಟು ಹೊರಟೆ! ಇದೇ ಏನು ನಿನ್ನ ಸತಿ ಹೋಗೋಣ!

ಸೌದಾ:- ಇದನ್ನೇನು ವಿಚಾರಿಸುವಿರಿ-ಹೇಗೆ ನಿಮ್ಮ ಮರಣವೋ, ಹಾಗೆ ನನ್ನ ಸತಿ ಹೋಗೋಣ! ನಿಮಗೂ ನಾಚಿಕೆಯಿಲ್ಲ. ಮತ್ತು ನಿಮ್ಮ ಸಹಾಯಕರಾದ ಈ ಮುತ್ತೈಳರಿಗೂ ನಾಚಿಕೆ ಇಲ್ಲ.

೧ನೇ ಗೆ:- ಎಲೋ ಇನ್ನು ಮೇಲೆ ಇಲ್ಲಿಂದ ಬೇಗನೆ ಓಡಬೇಕು, ಇಲ್ಲವಾದರ ಪ್ರಾಣಕ್ಕೇ ಪ್ರಸಂಗ ಬಂದೀತು. ಓಡು, ಓಡು (ಹೋಗುವರು)

ಸೌದಾ:— ಯಾಕೆ, ನಾನು ಹೇಳಿದ್ದು ಕೇಳಿಸಿತೇ? ಹೇಗೆ ನಿಮ್ಮ ಮರಣವೋ, ಹಾಗೆ ನನ್ನ ಸತಿ ಹೋಗಮನ!

ಮೇಘ:— ಇವಳಂತೂ ನನ್ನ ಬಟ್ಟು ನನ್ನ ಕಣ್ಣಲ್ಲಿಯೇ ಚುಚ್ಚಿದಳು. ಹೆಂಗಸರು ಜಾಣರು. ಅವರ ಮುಂದೆ ನಮ್ಮ ಜಾಣತನವು ನಡೆಯುವದು, ತೀರ ಅಸಾಧ್ಯ!

ಸೌದಾ:— ಯಾಕೆ, ಮಾತಾಡುವದಿಲ್ಲ? ಆಯಿತೆ ನಿಮ್ಮ ಸ್ವರೂಪನಾಶವು.

ಮೇಘ:— ಹೆಂಡತಿಯೇ, ನಾನು ನಿನಗೆ ಅನನ್ಯಭಾವದಿಂದ ಶರಣುಬಂದಿರುವೆನು. ಪರಾಜಿತನಾಗಿ, ಶರಣು ಬಂದ ಈ ವೀರನಿಗೆ ಅಭಯದಾನವನ್ನೀಡು. (ಕಾಲು ಹಿಡಿಯುವನು)

ಸೌದಾ:— ಮೇಲಕ್ಕೇಳಿ, ಯಾರಾದರೂ ನೋಡಿದರೆ ಏನಂದಾರು?

ಮೇಘ:— ಯಾರು ಏನನ್ನುವರು? ನಾನು ಪ್ರತಿಜ್ಞೆಮಾಡಿ ಹೇಳುವದೇನಂದರೆ, ಈ ಸಂಸಾರದಲ್ಲಿ ಪ್ರತಿಯೊಬ್ಬನಿಗೆ, ಹೆಚ್ಚಿಚ್ಚಿಗೆ ತನ್ನ ಹೆಂಡತಿಯ ಕಾಲು ಹಿಡಿಯುವ ಪ್ರಸಂಗವು ಬಂದೇ ಬರುವದು!

ಸೌದಾ:— ಇಂದಿನಿಂದ ನೀವು ನನ್ನ ಆಜ್ಞೆಯಂತೆ ನಡೆಯುವಿರಲ್ಲವೆ?

ಮೇಘ:— ಸಂದೇಹವೇನು! ನನ್ನಂಥ ಶುಂಭ ಪತಿಗಳು, ನಿನ್ನಂಥಾ ಚುರುಕು ಹೆಂಡತಿಯ ಆಜ್ಞೆಯಲ್ಲಿರುವದೇ ಶ್ರೇಯಸ್ಕರವು!

ಸೌದಾ:— ಈ ದೀನ ದಾಸಿಯ ಮೇಲೆ ಇದೇರೀತಿ ಪ್ರೇಮವಿರಲಿ.

ಸೌದಾಮಿನಿ:—

ಮಮ ಪ್ರಾಣೇಶ್ವರಾ। ತವ ಪ್ರಿಯಸಖಿಯ ದಯದೆ ಮನ್ನಿಸೂ॥ಪ॥

ಮೇಘನಾದ:—

ಮಮ ಪ್ರಾಣೇಶ್ವರಿ। ಎನಗಿಂದೂ। ಸುಖದ ಪದವ
ತೋರಿಸೂ ॥ಅನುಪಲ್ಲ॥

ಸೌದಾಮಿನಿ:—

ಇದುವೆ ಭಾಗ್ಯವೆ ಇದುವೆ ಸುದಿನವೆ॥

ಮೇಘನಾದ:—

ಪದದವ ಪೊಂದಿವೆ। ಮಧುರ ವಚನವೆ॥

ಸೌದಾಮಿನಿ:—

ಧನ್ಯವಗೊಳಿಸಿರಿ । ದೀನದಾಸೆಯ ॥

ಮೇಘನಾದ:—

ನಿನ್ನ ವಚನವದು । ಮಾನ್ಯವೆನಗೆ ॥

ನಾಲ್ಕನೆಯ ಪ್ರಸಂಗ

[ಅರ್ಜುನನ ಅಗ್ನಿ ಪ್ರವೇಶದ ಸಿದ್ಧತೆಯು ನಡೆದಿದೆ]

ರಾಗ ಶ್ರೀ ತಾಳ ಝಂಪಾ

ಅಪಯಶಕೆ ಗುರಿಯಾದೆ । ಸುಫಲಗತಿಯ ಕಾಣೆ । ಪಾಪಿ
ವಿಧಿಯು ಮೋಸ । ಗೈದುದಕಟಾ ॥ಪಲ್ಲ॥ ದಿನಪ ನಿರ್ದಯದೆ ।
ಪೋಪನತಿ ತ್ವರಿತದೆ । ಅರಿಯುತಾ । ಕಣ್ಮರೆಯಾದನಕಟಾ ॥೧॥

ಅರ್ಜುನ:— ಹಾಯ ದುರ್ದೈವವೇ, ಈ ದಿವಸ ನನ್ನ ಪ್ರತಿಜ್ಞೆಯು ಭಂಗವಾಗುವ ಚಿನ್ಹವು ತೋರುವದು. ಸೂರ್ಯಾಸ್ತವಾಗುವದಕ್ಕೆ ಒಂದು ಗಳಿಗೆ ಕೂಡ ಉಳಿಯಲಿಲ್ಲ. ಈ ಅರ್ಜುನನ ಶೌರ್ಯಕ್ಕೂ, ನಿರ್ಬಲವಾದ ಪೌರುಷಕ್ಕೂ, ಧಿಃಕಾರ-ಧಿಃಕಾರವಿರಲಿ! ಎಲೈ ಗಾಂಡೀವ ಧನುಷ್ಯವೇ ನಿನ್ನ ಭಾರವಾದರೂ ನನಗೇಕೆ ಬೇಕು? ಪ್ರತಿಜ್ಞಾಭಂಗದ ನಿಷ್ಠುರ ಪ್ರಹಾರದಿಂದ, ನನ್ನ ಹೃದಯವು ಚೂರು ಚೂರಾಯಿತು; ಅದರಂತೆ ನಿನ್ನನ್ನು ತುಂಡು ತುಂಡುಮಾಡಿ—

(ಧನುಷ್ಯವನ್ನು ಮುರಿಯತೊಡಗುವನು. ಕೃಷ್ಣ ಮೊದಲಾದವರು ಬರುವರು)

ಕೃಷ್ಣ:— ತಾಳು- ತಾಳು- ಅರ್ಜುನಾ, ಇದೆಂತಹ ಅವಿಚಾರವನ್ನು ಮಾಡುವೆ?

ಅರ್ಜುನ:— ಕೃಷ್ಣಾ ಇದು ಅವಿಚಾರವಲ್ಲ; ಎಲ್ಲ ವಿಚಾರಗಳಲ್ಲಿಯೂ ಶ್ರೇಷ್ಠ ವಿಚಾರವಿದು !

ಕೃಷ್ಣ:— ಧನುರ್ಧಾರಿೀ ವೀರ ಶ್ರೇಷ್ಠಾ-

ಅರ್ಜುನ:— ಬೇಡ--ಬೇಡ--ಶ್ರೀಕೃಷ್ಣಾ,ಈ ಸಂಬೋಧನಕ್ಕೆ ಈ ದುರ್ಬಲನಾದ ಅರ್ಜುನನು ಸರ್ವಥಾ ಪಾತ್ರನಲ್ಲ. 'ಧನುರ್ಧಾರೀ ವೀರ ಶ್ರೇಷ್ಠ' ಈ ವಿಶೇಷಣಕ್ಕೆ ಈ ನಿರ್ಭಾಗ್ಯನಾದ ಅರ್ಜುನನು ತೀರ ಅಯೋಗ್ಯನು! ಸೂರ್ಯಾಸ್ತ ಸಮಯವು ತೀರಾ ಸಮಿಾಪಿಸಿತು ! ಪ್ರತಿಜ್ಞೆಯ ಆಶೆಯು ಸೂರ್ಯನ ಜತೆಯಲ್ಲಿಯೇ ಅಸ್ತವಾಗುತ್ತ ನಡೆಯಿತು. ಈ ಗಾಂಡೀವದ ಪೊಳ್ಳು ಅಹಂಕಾರವು ನನಗೆ ಇನ್ನೇತಕ್ಕೆ ಬೇಕು !

ಕೃಷ್ಣ:— ಅರ್ಜುನಾ, ಸೂರ್ಯಾಸ್ತಕ್ಕೆ, ಇನ್ನೂ ಒಂದು ಗಳಿಗೆ ಅವಕಾಶ ಇದೆ. ಇನ್ನು ಮೇಲಾದರೂ ಜಯದ್ರಥನು ದೃಷ್ಟಿಗೆ ಬಿದ್ದು, ನಿನ್ನ ಕಾರ್ಯಭಾಗವು ಪೂರ್ಣವಾಗಬಹುದು. ಮುಂದಿನ ಭವಿಷ್ಯವನ್ನು ಕಂಡವರಾರು ?

ಅರ್ಜುನ:— ಪ್ರತಿಜ್ಞೆಯು ಕೊನೆಮುಟ್ಟುವದಂತೂ ಅಶಕ್ಯವೇ; ಆದರೆ ನನ್ನ ಆಯುಷ್ಯದ ಕೊನೆಯು ಮಾತ್ರ ಸಮಿಾಪಿಸುತ್ತಿರುವದು. ಅದೋ ನೋಡು ! ರವಿಯು ಮುಳುಗಹತ್ತಿದನು. ದೇವಾ—ಈಗ ನಾನೇನು ಮಾಡಲಿ ?

ಕೃಷ್ಣ:— (ಸ್ವ) ಪ್ರಸಂಗವಂತೂ ಬಂದೊದಗಿತು. ಇನ್ನು ಮೇಲೆ ಪ್ರಿಯ ಭಕ್ತರನ್ನು ರಕ್ಷಿಸಲೇ ಬೇಕು. ಸುದರ್ಶನಾ ವೇಗದಿಂದ ಹೋಗಿ, ಸೂರ್ಯಮಂಡಲವನ್ನು ಸಂಪೂರ್ಣವಾಗಿ ಮುಚ್ಚಿಬಿಡು. ಸುದರ್ಶನವನ್ನು ಬಿಡುವನು]

ಅರ್ಜುನ:— ಹಾಯ ದೈವವೇ ಇದೋ ಸೂರ್ಯಾಸ್ತವಾಯಿತು! ನನ್ನ ಆಯುಷ್ಯವು ಮುಗಿಯಿತು !

ಧರ್ಮ:— ಶ್ರೀಕೃಷ್ಣಾ, ಈ ಸಮಯದಲ್ಲಿ ನಮ್ಮನ್ನು ರಕ್ಷಿಸುವವರು ನಿನ್ನಲ್ಲದೆ ಮತ್ತಾರು ?

ಕೃಷ್ಣ:— ಸೃಷ್ಟಿಯು ನಿಯಮದ ಮುಂದೆ, ನನ್ನದಾದರೂ ಉಪಾಯ ಪೇಸಿದೆ!

ಭೀಮ:— ಈ ದಿವಸ ಸೂರ್ಯನು ಅಸ್ತಂಗತನಾಗುವದಕ್ಕೆ ಇಷ್ಟೇಕೆ ಅವಸರ ಮಾಡಿದನು? ಶ್ರೀಕೃಷ್ಣಾ- ನಾನು ನಿಶ್ಚಯವಾಗಿ ಹೇಳುತ್ತೇನೆ; ಈ ದಿವಸ ಸೂರ್ಯನು ನಿತ್ಯದಕಿಂತಲೂ ಬಹಳ ಬೇಗನೇ ಅಸ್ತಂಗತನಾದನು.

ಕೃಷ್ಣ:— ಪಾಪ, ಬೆಳಗಿನಿಂದಲೂ ಸಂಚಾರ ಮಾಡಿ ಮಾಡಿ ದಣಿದಿದ್ದಾನೆ; ಏನೋ ಮನಸ್ಸಿಗೆ ಬಂತು, ಬೇಗನೆ ಮರೆಯಾಗಿ ಹೋದನು. ಅಲ್ಲದೆ ಮತ್ತೇನು?

ಸರ್ವ:— ಮುಳುಗಿದನು-ಮುಳುಗಿದನು-ಸೂರ್ಯನು ಸಂಪೂರ್ಣವಾಗಿ ಮುಳುಗಿದನು. ನಮ್ಮ ಉಲ್ಹಾಸವಾದರೂ ಅವನ ಜೊತೆಯಲ್ಲಿಯೇ ಮುಳುಗಿಹೋಯಿತು! (ಒಳಗೆ_ಜಯದ್ರಥ:_ಸೂರ್ಯನು ಮುಳುಗಿದನು! ಇನ್ನು ಮೇಲೆ ಹೊಟ್ಟೆತುಂಬ ಶೋಕಿಸಿರಿ!)

ಅರ್ಜುನ:— ಯಾರದೀ ಧ್ವನಿಯು! (ನೋಡಿ) ಯಾರು,ಜಯದ್ರಥನೇ! ಸೂರ್ಯನು ಮುಳುಗಿ, ಪ್ರತಿಜ್ಞೆಯ ಸಮಯವು ಮೀರದ ಕೂಡಲೇ, ನನ್ನ ವೈರಿಯು ಈಗ ಉದಯವಾದನೇ-

ಕೃಷ್ಣ:— ಆ ಧ್ವನಿಯು ಜಯದ್ರಥನದಾಗಿರಲಾರದು,ಸೂರ್ಯನು ಮುಳುಗಿದನೆಂದು, ಯಾವದೊ ಒಂದು ಗೂಗೆ ಕೂಗುತ್ತಿರಬಹುದು.

ಜಯ:— (ಪ್ರವೇಶಿಸಿ) ಸೂರ್ಯನು ಮುಳುಗಿದನು. ಇನ್ನು ಮೇಲೆ ನೀನು ಸ್ವಸಂತೋಷದಿಂದ ಮರಣಕ್ಕೆ ಸಿದ್ಧನಾಗು! ಈ ವೀರನು ಈ ಸಮಯದಲ್ಲಿ, ನಿನ್ನ ಮುಂದೇ ಏನೂ ಭಯವಿಲ್ಲದೆ ನಿಂತಿರುವದನ್ನು ನೋಡು!

ಅರ್ಜುನ:— ದುರಾತ್ಮಾ, ದಿವಾಭೀತಾ, ಇಷ್ಟು ಹೊತ್ತಿನವರೆಗೆ, ಯಾವ ನರಕದಲ್ಲಿ ಮರೆಯಾಗಿದ್ದೆ!

ಜಯ:— ಸುಮ್ಮನೆ ಎತಕ್ಕೆ ಕಂಠಶೋಷ ಮಾಡಿಕೊಳ್ಳುವೆ? ನನ್ನನ್ನು

ಸಂಹರಿಸುವ ಪ್ರತಿಜ್ಞೆಯಂತೂ ನಿನ್ನಿಂದ ಪೂರ್ಣವಾಗಲಿಲ್ಲ; ಇನ್ನು ಸ್ವತಃದ ಮರಣ ಪ್ರತಿಜ್ಞೆಯನ್ನಾದರೂ ಪೂರ್ಣಗೊಳಿಸು! ಅಷ್ಟೇ ಸಾಕು!

ಅರ್ಜುನ:—ದುಷ್ಟಾ, ಮೊದಲು ನಿನ್ನನ್ನು ಸಂಹರಿಸಿ, ಆ ಮೇಲೆ ನಾನು–

ಕೃಷ್ಣ:— ಅರ್ಜುನಾ, ಸೂರ್ಯನು ಮುಳುಗಿರುವನು. ಅಧರ್ಮವನ್ನು ಮಾಡಿ, ಜಯದ್ರಥನನ್ನು ಸಂಹರಿಸಿದರೆ, ಪಾಪಕ್ಕೆ ಗುರಿಯಾಗುವೆ! ನೀಗಲಾರದ ಪ್ರತಿಜ್ಞೆ ಮಾಡಬೇಡವೆಂದು ನಾನು ನಿನಗೆ ಮೊದಲೆ ಸಾರಿ ಸಾರಿ ಹೇಳಿದರೂ, ಕೋಪದ ಭರದಲ್ಲಿ ಪಂಥ ಮಾಡಿದ್ದೇ ತಪ್ಪು! ಮನುಷ್ಯನು ವಿನಾಕಾರಣ ತನಗೆ ಅಸಾಧ್ಯವಾದ ಪ್ರತಿಜ್ಞೆ ಮಾಡಿ, ಸಂಕಟಕ್ಕೆ ಗುರಿಯಾಗದಿರುವದೇ ಒಳ್ಳೇದು!

ಅರ್ಜುನ:— ಹಾಯ–ಹಾಯ– ಒಳ್ಳೆ ಸಮಯಕ್ಕೆ, ನನ್ನ ಪ್ರತಿಜ್ಞೆಯೇ ನನ್ನನ್ನು ಪ್ರಾಣಸಂಕಟಕ್ಕೆ ಗುರಿಮಾಡಿತೇ!

ಜಯ:— ಸುಮ್ಮನೆ ಏತಕ್ಕೆ ಪಶ್ಚಾತ್ತಾಪ ಪಡುವೆ! ನಿನ್ನ ಅಪೇಕ್ಷೆಯೇ ಇದ್ದರೆ ಬಾ, ಯುದ್ಧಕ್ಕೆ ಸಿದ್ಧನಾಗು. ನೋಡುವಾ, ನಿನ್ನ ಧರ್ಮ ಯುದ್ಧದ ಪರಾಕ್ರಮ!

ಭೀಮ:— ನಿನ್ನಂತಹ ಅತ್ಯಾಚಾರಿಯಾದ ದುರಾತ್ಮನನ್ನು ಸಂಹರಿಸುವದಕ್ಕೆ, ಧರ್ಮಯುದ್ಧದ ನಿರ್ಬಂಧವೇತಕ್ಕೆ! ಬಾ-ಮುಂದಕ್ಕೆ, ನಿನ್ನೊಡನೆ ಯುದ್ಧಮಾಡಿ, ರಸಾತಳಕ್ಕೆ ತುಳಿಯುವದಕ್ಕೆ ಈ ಭೀಮನು ಶಿದ್ಧನಾಗಿರುವನು. ಈ ಗದೆಯ ಒಂದೇ ಪ್ರಹಾರದಿಂದ ನಿನ್ನ ದೇಹವನ್ನು ಭೂಮಿಗೇ ಅಪ್ಪಳಿಸುವೆನು.

[ದುರ್ಯೋಧನ, ದುಶ್ಶಾಸನರು ಬರುವರು]

ದುರ್ಯೋ:— ಭೀಮಾ ಸಾಕುಮಾಡು ನಿನ್ನ ಪರಾಕ್ರಮ. ಜಯದ್ರಥನ ಸಂರಕ್ಷಣಕ್ಕೊಸ್ಕರ ಈ ದುರ್ಯೋಧನನು ನಡಕಟ್ಟಿ ಸಿದ್ಧನಾಗಿದ್ದಾನೆ. ಅವನ ದೇಹಕ್ಕೆ ಒಂದು ಪೆಟ್ಟು ತಗಲಿದರೆ, ಬಹಳ ಅನರ್ಥವಾದೀತು!

ಭೀಮ:— ಹಾಗಾದರೆ ಇದೋ ನೋಡು ನರಾಧಮಾ, ಈ ಗದಾಪ್ರಹಾರದಿಂದ ನಿನ್ನನ್ನೇ ಯಮಸದನಕ್ಕೆ ಅಟ್ಟುವೆನು.

ಧರ್ಮ:— ಹಾ–ಭೀಮಾ, ಶಾಂತನಾಗು. ಇದು ಧರ್ಮಯುದ್ಧವಲ್ಲ; ಮತ್ತು ನಿನ್ನ ಕೋಪಕ್ಕೆ ಇದು ಸಮಯವಲ್ಲ.

ಜಯ:— ಯಾಕೆ ಅರ್ಜುನಾ, ಈಗ ಕೂಡಾ ನಾನು ನಿನ್ನನ್ನು ಯುದ್ಧಕ್ಕೆ ಆಹ್ವಾನಿಸುವೆನು. ಧರ್ಮದ ಹುಚ್ಚುತನಕ್ಕೆ ಗುರಿಯಾಗಿ, ಹೇಡಿಯಾಗಬೇಡ. ನಿಜವಾದ ವೀರನಾಗಿದ್ದರೆ, ಬಾ ಯುದ್ಧಕ್ಕೆ.

ಅರ್ಜುನ:— ಧರ್ಮಾಜ್ಞೆಯನ್ನು ವಿಚಾರಿ, ಈ ಪಾರ್ಥನು ಯಾವ ಕಾಲಕ್ಕೂ ಪಾಪಿಯಾಗಿಲ್ಲ! (ಒಂದು ಬದಿಗೆ) ಎಲ ಎಲಾ ಇಂತಹ ಪ್ರಸಂಗವು ಪ್ರತ್ಯಕ್ಷ ವೈರಿಗೂ ಬರಬಾರದು. ನಡೆಯರಿ, ಎಲ್ಲರೂ ನನ್ನ ಅಗ್ನಿಪ್ರವೇಶದ ಸಿದ್ಧತೆಯನ್ನು ಮಾಡಿರಿ.

[ಹೋಗ ಹತ್ತುವನು]

ಜಯ:— ನಿಲ್ಲು--ಎಲ್ಲಿ ಹೋಗುವೆ? ನೀನು ನನ್ನನ್ನು ಜೀವದಿಂದ ಬಿಟ್ಟರೂ, ನಾನು ನಿನ್ನನ್ನು ಬಿಡುವದಿಲ್ಲ?

ಅರ್ಜುನ:— ಮೂರ್ಖಾ ನಾಲಗೆಯನ್ನು ತಡೆದು ಮಾತಾಡು. ನನ್ನ ಪ್ರತಿಜ್ಞೆಯು ನನಗೇ ಅಡ್ಡಬರದಿದ್ದರೆ, ನಿನ್ನ ರುಂಡವನ್ನು ಒಂದು ಕ್ಷಣದಲ್ಲಿ ಆಕಾಶಕ್ಕೆ ಹಾರಿಸುತ್ತಿದ್ದೆ--ಆದರೆ ಏನು ಮಾಡಲಿ--

ದುರ್ಯೋ:— ಜಯದ್ರಥಾ, ಅವನು ಸ್ವಸಂತೋಷದಿಂದ ಅಗ್ನಿಪ್ರವೇಶ ಮಾಡಿ, ಸಾಯುವದಕ್ಕೆ ಸಿದ್ಧನಾಗಿರುತ್ತಾನೆ. ಅಂದಮೇಲೆ, ಅವನನ್ನು ಕೊಲ್ಲುವದಕ್ಕೆ ನೀನೇಕೆ ಶ್ರಮತಕೊಳ್ಳುವೆ? ಪಾಪ, ಹೋಗಲಿ ಬಿಡು ಸಾಯುವದಕ್ಕೆ

ಜಯ:— ಹಾಗಾದರೆ ಈ ವೀರನು, ಇದೊ ಹೀಗೆ ಗಾಂಭೀರ್ಯದಿಂದ ತನ್ನ ಖಡ್ಗವನ್ನು ಪರೆಗಾಣಿಸುವನು.

ಭೀಮ— ನೀನು ವೀರನೇ,ಹಾಗಾದರೆ ಬೆಳಗಿನಿಂದ ಸಾಯಂಕಾಲದವರೆಗೆ, ಭಯಪಟ್ಟ ಗೂಗಿಯಂತೆ ಎಲ್ಲಿ ಅಡಗಿಕೊಂಡು ಕುಳಿತಿದ್ದೆ?

ದುರ್ಯೋಧನ:— ಭೀಷ್ಮಾ-- ಆ ವಿಚಾರ ಮಾಡುತ್ತ ಏಕೆ ಕಾಲಕಳೆಯುವೆ; ಮೊದಲು ಪಾರ್ಥನ ಅಗ್ನಿಪ್ರವೇಶದ ಸಿದ್ಧತೆಯನ್ನು ಮಾಡು ! ನಾಳೆ ಉಳಿದ ವಿಚಾರ ಮಾಡಲಿಕ್ಕೆ ಬಂದೀತು ! ಯಾಕೆ, ಧರ್ಮರಾಜರೇ ಅರ್ಜುನನಂತೂ ಅಗ್ನಿಪ್ರವೇಶಕ್ಕೆ ಹೊರಟನು; ಇನ್ನು ತಮ್ಮ ಪ್ರತಿಜ್ಞೆಯು ಹೇಗೆ ? ಅದೇ ಕುಂಡದಲ್ಲಿಯೇ ಪೂರ್ಣಮಾಡುವಿರೋ, ಅಥವಾ ಬೇರೆ ಕುಂಡದ ವ್ಯವಸ್ಥೆ ಮಾಡಬೇಕೊ ? ಯಾಕಂದರೆ-ದೊಡ್ಡವರ ಸಾಂಪ್ರದಾಯ, ಕೇಳುವದೇನು ? ಪಂಚ ಪಾಂಡವರ ಸಲುವಾಗಿ ಬೇರೆ ಬೇರೆ ಕುಂಡಗಳನ್ನೇ, ತಾವು ರಚಿಸತಕ್ಕವರು ! (ಎಲ್ಲರೂ ನಗುವರು)

ಕೃಷ್ಣ:— (ಸ್ವ) ನಾಟಕವು ಒಳ್ಳೇ ಕಳೆಕಟ್ಟಿರುವದು ! ಈ ಮದೋನ್ಮತ್ತರ ಪಾಪವು ಎಲ್ಲಿಯ ವರೆಗೆ ಹೋಗುವದೋ ನೋಡೋಣ !

ಜಯ:— ಯಾಕೆ-ಕೃಷ್ಣಾ, ಎಲ್ಲಿ ಓಡಿತು-ನಿನ್ನ ಪರಮಾತ್ಮನ ಶಕ್ತಿಯು. ನೀನು ಭಕ್ತ ರಕ್ಷಕನಲ್ಲವೇ ? ಪಾಂಡವರ ಪರಮೇಶ್ವರನಲ್ಲವೆ ? ಹಾಗಾದರೆ ಹೀಗೇಕೆ ಸ್ತಬ್ಧನಾಗಿ ನಿಂತಿರುವೆ ? ಯಾರಿಗೋಸ್ಕರ ಮಾರ್ಗ ನಿರೀಕ್ಷಣೆ ಮಾಡುವೆ ?

ಕೃಷ್ಣ:-- ನರಾಧಮಾ, ನಾನಾದರೂ ನಿನ್ನ ಮರಣಕಾಲದ ಮಾರ್ಗವನ್ನೇ ನಿರೀಕ್ಷಿಸುತ್ತಿರುವೆನು. ಸ್ವಲ್ಪ ತಾಳು, ಪಾಂಡವರ ಪುಣ್ಯವು ಎಷ್ಟು ಬಲವತ್ತರವಾಗಿರುವದೆಂಬುದು, ನಿನಗೇ ಗೊತ್ತಾಗುವದು !

ದುರ್ಯೋಧನ:— ಕೃಷ್ಣಾ--ನಿನ್ನ ದೈವೀ ಶಕ್ತಿಯ ಪ್ರಭಾವವನ್ನು ತೋರಿಸುವದಕ್ಕೆ, ಇದೇನು ಗೋಪಿಕಾಸ್ತ್ರೀಯರ ಮನೆಯೇ ? ಇಲ್ಲಿ ಹಾಲಿಲ್ಲ ! ಕೆನೆಮೊಸರು ಬೆಣ್ಣೆಗಳಿಲ್ಲ ! ನಿನ್ನ ಅವತಾರದ ಪೊಳ್ಳು ಅಹಂಕಾರವನ್ನು, ಈ ದುರ್ಯೋಧನನ ಮುಂದೆ ತೋರಿಸಬೇಡ !

ಧರ್ಮ:— ಪರಮೇಶ್ವರನ ಪ್ರಭಾವವು ನಿನಗೆ ತಿಳಿದಿದ್ದರೆ, ನಿನ್ನಂತಹ ದುಷ್ಟರ ದುರುಳ ವೃತ್ತಿಯು, ಯಾವಾಗಲೋ ನಷ್ಟವಾಗಿ ಹೋಗುತ್ತಿತ್ತು.

ಜಯ:— ಪರಮೇಶ್ವರನ ಪ್ರಭಾವವು ನಿಮಗೆ ಗೊತ್ತಿರುವದಲ್ಲವೇ ?

ಹಾಗಾದರೆ ಈ ಕಪಟೀ ಪರಮೇಶ್ವರನ ಪ್ರಭಾವವು ನಿಮಗೆ ಗೊತ್ತಿದ್ದರೆ, ಇವನ ಮುಂದೆ ನಿಮ್ಮ ಶಂಖಧ್ವನಿಯನ್ನು ಪ್ರಾರಂಭಿಸಿರಿ! ಅಂದರೆ ಅವನು ಈ ಸಮಯದಲ್ಲಿ ನಿಮ್ಮನ್ನು ಹೇಗೆ ರಕ್ಷಿಸುತ್ತಾನೋ ನೋಡುತ್ತೇನೆ.

ಕೃಷ್ಣ:— ಹಾಗಾದರೆ ನೋಡು, ನನ್ನ ಮಹಿಮೆಯನ್ನು. ಸುದರ್ಶನಾ, ನಡೆ ಹಿಂದಕ್ಕೆ ತಿರುಗು! ಸೂರ್ಯಮಂಡಲವು ಮೊದಲಿನಂತೆ ಪ್ರಕಾಶಿಸಲಿ!

ಜಯ:— ಸೂರ್ಯನು ಮುಳುಗಿರುವಾಗ, ನನಗೆ ಇನ್ನಾರ ಭೀತಿ!

ಕೃಷ್ಣ:— ಸೂರ್ಯನು ಮುಳುಗಿರುವನೇ? ಎಲ್ಲಿ ಮುಳುಗಿರುವನು? ಅದೋ ನೋಡು, ಪ್ರತ್ಯಕ್ಷ ಕಾಲನು ಕೆಂಪಗೆ ಉರಿಗಣ್ಣುಮಾಡಿ, ಕ್ರೋಧದಿಂದ ನಿನ್ನನ್ನೇ ನೋಡುತ್ತಿರುವನು. (ಸೂರ್ಯಮಂಡಲವು ಪ್ರಕಾಶಮಾನವಾಗುವದು)

ಜಯ:— ಎಲಾ ಇದೇನು ಚಮತ್ಕಾರವು!

ಕೃಷ್ಣ:— ಅರ್ಜುನಾ, ನೋಡುವಿಯೇನು, ಅಲ್ಲಿ ಸೂರ್ಯ, ಇಲ್ಲಿ ಜಯದ್ರಥಾ, ಬಾಣಹೊಡೆದು ಈತನ ಶಿರಸ್ಸನ್ನು ಆಕಾಶಕ್ಕೆ ಹಾರಿಸು!

(ಜಯದ್ರಥನ ಮೇಲೆ ಅರ್ಜುನನು ಬಾಣಬಿಡುವನು.)

ದುರ್ಯೋಧನ:— ಘಾತವು-ಘಾತವು—ಕೃಷ್ಣಕಾರಸ್ಥಾನವು! (ಓಡಿಹೋಗುವನು)

ಅರ್ಜುನ:— ದೇವಾ— ಪ್ರತಿಜ್ಞೆಯನ್ನು ಪೂರ್ತಿಗೊಳಿಸಿ, ವಿಜಯಶಾಲಿಯಾದ ಪಾರ್ಥನು ತಮಗೆ ಅಭಿವಾದನ ಮಾಡುವನು.(ನಮಸ್ಕರಿಸುವನು)

ಕೃಷ್ಣ:— ಏಳು-ಏಳು- ಅರ್ಜುನಾ ಇದೇನು.

ಧರ್ಮ:— ಶ್ರೀಕೃಷ್ಣಾ-ಇದೆಲ್ಲ ಚಮತ್ಕಾರವು ಹೇಗೆ ಕೂಡಿ ಬಂದಿತು?

ಕೃಷ್ಣ:— ಆ ರಹಸ್ಯವು ತಿಳಿದ ಮೇಲೆ, ಅದರಲ್ಲಿ ಅಷ್ಟು ಚಮತ್ಕಾರವುಳಿಯುವದಿಲ್ಲ. ಪಾಂಡವರ ಏಕನಿಷ್ಠ ಭಕ್ತಿಗೆ ಮೆಚ್ಚಿ, ಶ್ರೀಕೃಷ್ಣನು ಬೇಕಾದ್ದನ್ನು ಮಾಡುವನು. ನಿಮ್ಮ ಯಶವೇ ನನ್ನದು!

ಅರ್ಜುನ:— ಪ್ರತಿಜ್ಞೆಯು ಪೂರ್ಣವಾಯಿತು. ಜಯದ್ರಥನ ಸಂಹಾರ ಮಾಡಿ, ಅಭಿಮನ್ಯುವಿನ ವಧೆಯ ಸೇಡು ತಕ್ಕೊಂಡೆನು! ಆನಂದವೇ ಆನಂದವಾಯಿತು. ಆದರೆ ಈ ಕೇಸರಿಯ ಪುತ್ರನು, ಹೋದವನು ಹೋಗಿಯೇ ಹೋದನು.

ಕೃಷ್ಣ:— ಈ ಕೇಸರಿಯು ಪುತ್ರನು ಹೋಗಲಿಲ್ಲ; ನಿನ್ನ ಅಭಿಮನ್ಯುವು ಮೃತನಾಗಲಿಲ್ಲ; ಈ ಸೂರ್ಯಸ್ವರೂಪದಲ್ಲಿ, ಯಾವತ್ತೂ ರಾಷ್ಟ್ರ ಭಕ್ತರಿಗೆ ತೇಜಸ್ವಿಯಾದ ರಾಷ್ಟ್ರಸೇವೆಯು ಪವಿತ್ರ ವೃತ್ತಿಯು ಸಂದೇಶವನ್ನು ಉಪದೇಶಿಸುವದಕ್ಕೋಸ್ಕರ ಸ್ವರ್ಗ ದೇವತೆಯು ಉದರದಲ್ಲಿ ದಿನಾಲು ಜನ್ಮಿಸುತ್ತಿರುವನು ! ಧನ್ಯ ಧನ್ಯನು, ಆ ಬಾಲನು ನಿಜವಾಗಿಯೂ ಧನ್ಯನು !

ಸುಭದ್ರಾ, ಉತ್ತರಾ, ಮೊದಲಾದವರು ಬರುವರು.

ಸುಭದ್ರಾ:— ಅಭಿಮನ್ಯುವೇ- ಅಭಿಮನ್ಯುವೇ, ಎಲ್ಲಿ ನನ್ನ ಕುಮಾರನು !

ಉತ್ತರಾ:— ನಾಥಾ - ನಾಥಾ ತಮ್ಮ ಮನೋಹರ ಮೂರ್ತಿಯು ಎಲ್ಲಿರುವದು ?

ಎಲ್ಲರೂ:— ಆ ಕೇಸರಿ ಪುತ್ರನು, ನಮ್ಮೆಲ್ಲರ ಪಂಚಪ್ರಾಣವು !

ಕೃಷ್ಣ:— ಅದೋ ನೋಡಿರಿ, ಸ್ವರ್ಗದ ಸಿಂಹಾಸನದ ಮೇಲೆ ಆನಂದದಿಂದ ವಿರಾಜಮಾನನಾಗಿದ್ದಾನೆ. (ಟ್ರಾನ್ಸಫರ ಸೀನ) ಸ್ವದೇಶಕ್ಕೋಸ್ಕರ, ಸ್ವಜನರ ಉದ್ಧಾರದ ಸಲುವಾಗಿ ತನ್ನ ಪ್ರಾಣವನ್ನೇ ಅರ್ಪಿಸಿದಂತಹ ವೀರನು, ಇವನೇ ಅವನು. ವೀರನಾದ ಭರತ ಪುತ್ರನು ! ಪಾರ್ಥಾ– ಮತ್ತೇನಾದರೂ ನಿನ್ನ ಅಪೇಕ್ಷೆ ಇದ್ದರೆ ಕೇಳು.

ಅರ್ಜುನ:— ದೇವಾ- ನಿನ್ನ ಅಗಾಧಲೀಲೆಯು ಮಹಿಮಾತಿಶಯವು ಯಾರಿಗೂ ತಿಳಿಯದು ! ನಿನ್ನ ಪಾದ ಸನ್ನಿಧಿಯಲ್ಲಿ ನಾವು ಇಷ್ಟೇ ಬೇಡುವೆವು.

ಮಂಗಳ

ಎಲ್ಲರೂ

ಶ್ರೀ ವಾಸುಕಿ ಶಯನಾ । ಭವಜಲಧಿ ಸಂಹರಣಾ ಕವಿಕುಲವ
ಸನ್ಮಾನದಿಂದಲಿ ಕಾಯ್ವಾ | ಮತ್ಸ್ಯೇತ್ಯಾದಿ ರೂಪಸವಿಸಾರನುತ ॥ಪ॥
ಶ್ರೀರಘುಕುಲ ತಿಲಕ ರಾಮಾ । ನರೆ ಮಧುರ ತವ ನಾಮಾ ।
ವಾರಿಜ ಸಂಭೂತಾ ಸುರಾದಿ ವಂದಿತ ವಾಮನಾ ॥ ॥

ಸಮಾಪ್ತ

ಪುಸ್ತಕ ದೊರೆಯುವ ಸ್ಥಳ

೧.	ಶಂಕರ ಕರ್ನಾಟಕ ಪುಸ್ತಕ ಭಾಂಡಾರ	ಧಾರವಾಡ
೨.	ಮನೋಹರ ಗ್ರಂಥಭಾಂಡಾರ	,,
೩.	ಶ್ರೀಕೃಷ್ಣ ಪುಸ್ತಕಾಲಯ	,,
೪.	ಸಾಹಿತ್ಯ ಮಂದಿರ	,,
೫.	ವಾಗ್ವಿಲಾಸ ಬುಕ್‌ಡಿಪೊ	ಹುಬ್ಬಳ್ಳಿ